
# ಶಿರಸಿಯ
# ಶ್ರೀ ಮಾರಿಕಾಂಬೆ ಮತ್ತು ಜಾತ್ರೆ

ಡಾ|| ಎನ್. ಆರ್. ನಾಯಕ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಶಿರಸಿಯ
# ಶ್ರೀ ಮಾರಿಕಾಂಬೆ ಮತ್ತು ಜಾತ್ರೆ

ಡಾ|| ಎನ್. ಆರ್. ನಾಯಕ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

SIRSI SRI MARIKAMBE MATHU JAATHRE,
A writteup on the Car Festival of goddersss Maarikambe
by Dr. N.R. Nayak
Published by Karnataka Jaanapada and Yakshagana Academy, Bangalore

First Edition : 1996

Copies : 1000

Price : Rs. 10.00

*Printed at*
**MAYUR PRINT-ADS**
Cottonpet Main Road
Bangalore - 560 053
✆ 62 0203 62 0303

## ಪ್ರದಾನ ಸಂಪಾದಕರ ಮಾತು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನಮ್ಮ ಅವಿನಾಶಿಯಾದ ಹಾಗೂ ಬಹುಮಟ್ಟಿಗೆ ಸಂತತ ಪ್ರಸ್ತುತವಾದ ನಮ್ಮ ಮೂಲ ಸಂಸ್ಕೃತಿಯನ್ನು ಕುರಿತು ಸಂಶೋಧನೆ, ಸಂಗ್ರಹ , ಸಂಪಾದನೆ ಮತ್ತು ಪ್ರಕಟಣಾಕಾರ್ಯವನ್ನು ನಡೆಸುತ್ತಿದೆ. ನಮ್ಮ ಸಂಸ್ಕೃತಿಯಲ್ಲಿ ಅದರ ಹಲವು ಅರ್ಥಗಳಲ್ಲಿ ಗರ್ಭಿಕರಿಸಿಕೊಂಡಿರುವ ಜಾತ್ರೆಗಳು ಈ ದೃಷ್ಟಿಯಿಂದ ಪರಿಶೀಲನೆಯ ಹಾಗೂ ವಿಶ್ಲೇಷಣೆಗೆ ಅರ್ಹವಾಗಿವೆ. ಈ ಕಾರಣದಿಂದ ನಮ್ಮ ಜಾತ್ರೆಗಳನ್ನು ಕುರಿತಾದ ಪುಸ್ತಕ ಮಾಲೆಯೊಂದನ್ನು ಅಕಾಡೆಮಿ ಆರಂಭಿಸಿ ಈಗಾಗಲೇ ಹಲವು ಕೃತಿಗಳನ್ನು ಹೊರತಂದಿದೆ.

ಕನ್ನಡ ನಾಡು ಗ್ರಾಮೀಣರ ತವರುಭೂಮಿ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ಗ್ರಾಮದೇವತೆಯ ದೇವಾಲಯವಿದ್ದು ಅದು ಆ ಹಳ್ಳಿಯ ಜನರ ಬದುಕಿನ ಬಹುಭಾಗವನ್ನು ನಿಯಂತ್ರಿಸುವ ಮತ್ತು ರೂಪಿಸುವ ಒಂದು ವಿಶಿಷ್ಟ ಶಕ್ತಿಯ ಕೇಂದ್ರವಾಗಿದೆ. ಈ ಗ್ರಾಮದೇವತೆಗಳಲ್ಲಿ ಅನಂತ ವೈವಿಧ್ಯವಿದೆ. ಪ್ರತಿಯೊಂದು ದೇವತೆಯೂ ತನ್ನದೆ ಆದ ಹುಟ್ಟಿನ ಬೆಳವಣಿಗೆಯ ಪ್ರಭಾವದ ರೋಚಕ ಇತಿಹಾಸವನ್ನು ಹೊಂದಿರುವುದಲ್ಲದೆ ತನ್ನ ಪ್ರಭಾವಳಿಯ ಸುತ್ತ ಮುತ್ತ ಹಲವು ಸಂಪ್ರದಾಯಗಳನ್ನು ಆಚರಣೆಗಳನ್ನು ವಿಧಿನಿಷೇಧಗಳನ್ನು ಹಾಗೂ ಕಲೆ ಮತ್ತು ಸಾಹಿತ್ಯವನ್ನು ವಿಶಿಷ್ಟ ರೀತಿಯಲ್ಲಿ ಹುಟ್ಟು ಹಾಕಿದೆ. ಹಳ್ಳಿಗರ ಬದುಕಿಗೆ ಸಂತೋಷ ಸಂಭ್ರಮಗಳನ್ನು ತರುವ ಉಲ್ಲಾಸವನ್ನು ವಿಸ್ತರಿಸುವ ಮತ್ತು ಶಾಂತಿ ನೆಮ್ಮದಿಗಳನ್ನು ದೊರಕಿಸುವ ಹಲವು ಹಬ್ಬಗಳು ಮತ್ತು ಜಾತ್ರೆಗಳು ಈ ಗ್ರಾಮದೇವತೆಗೆ ಸಂಬಂಧಿಸಿ ನಡೆಯುತ್ತವೆ. ಈ ಹಬ್ಬ ಮತ್ತು ಜಾತ್ರೆಗಳಲ್ಲಿ ನಡೆಯುವ ವಿವಿಧ ರೀತಿಯ ಸಂಪ್ರದಾಯಗಳು, ಉತ್ಸವಗಳು, ಹರಕೆ - ಹಾಡುಗಳು ನಮ್ಮ ಗ್ರಾಮೀಣ ಜನಜೀವವಾದ ಒಂದು ಅಮೂಲ್ಯ ಭಾಗವಾಗಿ ಪರಿಣಮಿಸಿವೆ. ಅಕ್ಷರ ನಾಗರೀಕತೆಯ ಮತ್ತು ವಿಚಾರವಂತಿಕೆಯ ಈ ಯುಗದಲ್ಲೂ ಈ ಹಬ್ಬ ಜಾತ್ರೆಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳದೆ ಉಳಿದು ಬೆಳೆದು ವೈವಿಧ್ಯತೆಯನ್ನು ಪಡೆಯುತ್ತ ಬಂದಿರುವುದನ್ನು ಗಮನಿಸಿದರೆ ಅವು ಜೀವನದಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿವೆ ಎಂಬುದು ಸಾಬೀತಾಗುತ್ತದೆ. ಈ ಸಂದರ್ಭದ ಅಧ್ಯಯನ ನಮ್ಮ ಪುರಾತನ ಇತಿಹಾಸ, ಮಾನವ ಶಾಸ್ತ್ರ, ಮಾನಸ ಶಾಸ್ತ್ರ, ಹಾಗೂ

ಸಂಸ್ಕೃತಿಗಳ ಬಗ್ಗೆ ಹೊಸ ಹೊಸ ಬೆಳಕನ್ನು ಚೆಲ್ಲುತ್ತದೆ. ಆದ್ದರಿಂದ ನಮ್ಮ ಅಕಾಡಮಿ ಗ್ರಾಮೀಣ ಸಂಸ್ಕೃತಿಯ ಕೇಂದ್ರ ಬಿಂದುವಾದ ಗ್ರಾಮ ದೇವತೆಗಳು ಮತ್ತು ಅವುಗಳ ಮಹಿಮ ಪ್ರಕಾಶನದ ವಿಶಿಷ್ಟ ಸಂದರ್ಭವಾದ ಜಾತ್ರೆಗಳ ಕುರಿತು ಪುಸ್ತಕಗಳನ್ನು ಪ್ರಕಟಿಸಿದೆ, ಮತ್ತು ಪ್ರಕಟಿಸುತ್ತಿದೆ. ಈ ಮಾಲೆಯಲ್ಲಿ ಡಾ: ಎನ್. ಆರ್. ನಾಯಕ್ ಅವರು ಬರೆದ ಶಿರಸಿಯ ಶ್ರೀ ಮಾರಿಕಾಂಬೆ ಮತ್ತು ಜಾತ್ರೆ ಎಂಬ ಕೃತಿ ವಿಶಿಷ್ಟವಾದುದಾಗಿದೆ.

ಜನಪದ ಸಂಸ್ಕೃತಿಯಲ್ಲಿ ಶಕ್ತಿ ದೇವತೆಗಳು ವಹಿಸುವ ಪಾತ್ರ ಅತ್ಯಂತ ಪ್ರಮುಖವಾದದ್ದು. ಈ ಶಕ್ತಿದೇವತೆಗಳಲ್ಲಿ ಶಿರಸಿಯ ಮಾರಿಕಾಂಬೆ ಅಪಾರ ಸಂಖ್ಯೆಯ ಭಕ್ತರ ಗಮನ ಗೌರವಗಳಿಗೆ ಪಾತ್ರವಾದ ಅತ್ಯಂತ ವಿಶಿಷ್ಟ ದೇವತೆ. ಈ ದೇವತೆಯನ್ನು ಕುರಿತು ಹಲವು ಸಣ್ಣ ಪುಟ್ಟ ಗ್ರಂಥಗಳು ಪ್ರಕಟವಾಗಿವೆ. ಆದರೆ ಶ್ರೀ ಮಾರಿಕಾಂಬೆಯ ಆರಾಧನೆ ಹುಟ್ಟಿ ಹಂತ ಹಂತವಾಗಿ ವಿಸ್ತರಿಸಿ ಕನ್ನಡ ನಾಡಿನ ಮತ್ತು ಹೊರಗಿನ ಭಕ್ತಸ್ತೋಮವನ್ನು ಆಕರ್ಷಿಸಿ ಪ್ರಭಾವಿಸಿದ ರೀತಿಯನ್ನು, ಅದರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ವಿವರಗಳ ಒಳನೋಟವನ್ನು ಬಿಂಬಿಸುವಂತಹ ಸಂಶೋಧನಾತ್ಮಕ ಕೃತಿಗಳು ರಚನೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಡಾ:ಎನ್.ಆರ್. ನಾಯಕ್ ಅವರು ರಚಿಸಿರುವ ಈ ಗ್ರಂಥ. ಬಗೆಗಿನ ಸಂಸ್ಕೃತಿ ಸಂಶೋಧನೆಯನ್ನು ಕೈಗೊಳ್ಳುವವರಿಗೆ ಸಂತೃಪ್ತವಾದರೂ ಒಂದು ಆಕರ ಗ್ರಂಥ ಎನಿಸಿಕೊಳ್ಳುತ್ತದೆ. ಡಾ: ಎನ್.ಆರ್. ನಾಯಕ್ ಅವರು ನಮ್ಮ ಜಾನಪದ ವಿದ್ವಾಂಸರ ಅಗ್ರಪಂಕ್ತಿಯಲ್ಲಿ ನಿಲ್ಲುವ ಲೇಖಕರು ಈ ಕೃತಿ ರಚನೆಯಲ್ಲಿ ಅವರು ತಮ್ಮ ಪರಿಶ್ರಮ, ಅಭ್ಯಾಸಪೂರ್ಣತೆ ಹಾಗೂ ಶೋಧನಾ ದೃಷ್ಟಿಯನ್ನು ಗಮನಾರ್ಹ ಪ್ರಮಾಣದಲಿ ಬಿಂಬಿಸಿ ಆಸಕ್ತರಿಗೆ ಉಪಕಾರ ಮಾಡಿದ್ದಾರೆ. ಇಂತಹದೊಂದು ಕೃತಿಯನ್ನು ರಚಸಿಕೊಟ್ಟ ಡಾ|| ಎನ್.ಆರ್. ನಾಯಕ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಹಾಗೆಯೇ ಈ ಕೃತಿಯನ್ನು ಸುಂದರವಾಗಿ ಅಚ್ಚು ಮಾಡಿದ ಮಯೂರ ಪ್ರಿಂಟ್ ಆ್ಯಡ್ಸ ಕಾರ್ಮಿಕವರ್ಗಕ್ಕೆ ಸಹ ಕೃತಜ್ಞತೆಯ ನಮನಗಳು.

ಡಾ: ಎಚ್. ಜೆ. ಲಕ್ಕಪ್ಪಗೌಡ.

## ಮುನ್ನುಡಿ

ಕರ್ನಾಟಕದ ಪ್ರಮುಖ ಶಕ್ತಿ ದೇವತೆಗಳಲ್ಲಿ ಒಂದಾದ ಶಿರಸಿಯ ಶ್ರೀ ಮಾರಿಕಾಂಬೆಯನ್ನು ಕುರಿತು ಅನೇಕರು ಚಿಕ್ಕ ಪುಟ್ಟ ಗ್ರಂಥ ಹಾಗೂ ಲೇಖನಾದಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಸಂಶೋಧನೆಯ ಒಳ ನೋಟವುಳ್ಳ ಎಸ್. ಸಿಲ್ವಾರ ಲೇಖನ ಸಂಗ್ರಹದ ಆಧಾರದ ಹಿನ್ನೆಲೆಯಲ್ಲಿ ಶ್ರೀ ವಿನೀತರು ಬರೆದ ಶ್ರೀ ಮಾರಿಕಾಂಬೆ, ಶ್ರೀ ವಿನಾಯಕ ಮಾಡಗೇರಿಯವರು ಬರೆದ ಶಿರಸಿಯ ಶ್ರೀ ಮಾರಿಕಾಂಬೆ, ಶ್ರೀ ಗೋಪಾಲಕೃಷ್ಣ ಹೆಗಡೆಯವರು ಬರೆದ ಶಿರಸಿಯ ಶ್ರೀ ಮಾರಿಕಾಂಬೆ ಮುಂತಾದ ಕಿರುಹೊತ್ತಗೆಗಳು ಪ್ರಮುಖವಾಗಿವೆ. ಇವುಗಳಲ್ಲಿ ಶ್ರೀ ಮಾರಿಕಾಂಬೆಯ ಆರಾಧನೆ ನಮ್ಮಲ್ಲಿ ವಿವಿಧ ಬಗೆಯಲ್ಲಿ ಬೆಳೆದುಬಂದ ಹಿನ್ನೆಲೆ, ಶಿರಸಿಯ ಮಾರಿಕಾಂಬೆಯ ಕುರಿತಾದ ಚಾರಿತ್ರಿಕ ವಿವರಣೆ ಹಾಗೂ ಶ್ರೀ ಮಾರಿಕಾಂಬೆಯ ಜಾತ್ರೆ ಉತ್ಸವಾದಿಗಳೆಲ್ಲವುಗಳ ಒಟ್ಟಂದದ ವಿವರ ಒಳನೋಟ ಸಿಗುವುದಿಲ್ಲ. ಈ ಕೊರತೆಯನ್ನು ಈ ಗ್ರಂಥ ತಕ್ಕಮಟ್ಟಿಗೆ ಪೂರೈಸಿದೆ; ಎಂಬ ಅನಿಸಿಕೆ ನನ್ನದು. ಶ್ರೀ ಮಾರಿಕಾಂಬೆಯ ಕುರಿತು ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಇಲ್ಲದಿಲ್ಲ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಹಾಕಿಕೊಟ್ಟ ಪುಟ ಮಿತಿಯಲ್ಲೆ ನನಗೆ ಸಾಧ್ಯವಾದಷ್ಟನ್ನು ಇಲ್ಲೆ ವಿವರಿಸಲಾಗಿದೆ. ಮುಂದೆ ಶ್ರೀ ಮಾರಿಕಾಂಬೆಯನ್ನು ಕುರಿತು ಹೆಚ್ಚಿನ ಸಂಶೋಧನೆಯನ್ನು ನಡೆಸುವವರಿಗೆ ನನ್ನ ಈ ಗ್ರಂಥ ಅಲ್ಪಮಟ್ಟಿದ ನೆರವನ್ನು ನೀಡಬಹುದೆಂಬ ಭರವಸೆ ನನ್ನದು. ಈ ವಿಷಯವನ್ನು ನನಗೆ ಬರೆಯಲು ಒತ್ತಾಯಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಹಿಂದಿನ ಅಧ್ಯಕ್ಷರಾದ ಡಾ.ಜೀ.ಶಂ. ಪರಮಶಿವಯ್ಯ ಹಾಗೂ ಇಂದಿನ ಅಧ್ಯಕ್ಷರಾದ ಡಾ.ಎಚ್.ಜೆ. ಲಕ್ಕಪ್ಪಗೌಡ ಅವರಿಗೆ ಗ್ರಂಥರಚನೆಯ ಕಾಲಕ್ಕೆ ಹೆಚ್ಚಿನ ಮಾಹಿತಿಯನ್ನು ಒದಗಿಸಿದ ಶ್ರೀ ವಿನಾಯಕ ಮಾಡಗೇರಿಯವರಿಗೆ ಕ್ಷೇತ್ರಕಾರ್ಯದ ಕಾಲಕ್ಕೆ ಮಾಹಿತಿಯನ್ನು ಒದಗಿಸಿದ ಮಹನೀಯರಿಗೆ ಹಾಗೂ ಮಹಿಳೆಯರಿಗೆ ಹಾಗೂ ಗ್ರಂಥವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಮಯೂರ್ ಪ್ರಿಂಟ್ ಆ್ಯಡ್ಸ್ ಅವರಿಗೆ ಆಭಾರಿಯಾಗಿದ್ದೇನೆ.

ಸುಹಾಸ — ಡಾ. ಎನ್.ಆರ್. ನಾಯಕ
ಉದಯಗಿರಿ, ಹೊನ್ನಾವರ.
ದಿನಾಂಕ : 23.12.1995.

ಪರಿವಿಡಿ


| | | |
|---|---|---|
| ಅಧ್ಯಾಯ ೧. | ಮಾರಿ - ಅಮ್ಮನ ಆರಾಧನೆಯ ಹಂತಗಳು | ೧ |
| ಅಧ್ಯಾಯ ೨. | ಶಿರಸಿಯ ಶ್ರೀ ಮಾರಿಕಾಂಬೆ | ೧೪ |
| ಅಧ್ಯಾಯ ೩. | ಜಾತ್ರೆ - ಉತ್ಸವಗಳು | ೩೯ |
| ಅನುಬಂಧ ೧. | ಗ್ರಂಥಋಣ | ೮೨ |
| ಅನುಬಂಧ ೨. | ಮಾಹಿತಿ ಒದಗಿಸಿದವರು | ೮೨ |


ಅಧ್ಯಾಯ ೧

# ಮಾರಿ - ಅಮ್ಮನ ಆರಾಧನೆಯ ಹಂತಗಳು

## ೧. ಮಾತೃದೇವತೆ :

ಮಾತೃದೇವತೆಯ ಉಪಾಸನೆ ಅತ್ಯಂತ ಪ್ರಾಚೀನವಾಗಿದ್ದು, ಅದರ ಪರಿಕಲ್ಪನೆಯಿಲ್ಲದ ಸಂಸ್ಕೃತಿಗಳೇ ಇಲ್ಲವೆಂದರೂ ತಪ್ಪಾಗಲಾರದು. ನಮ್ಮ ದೇಶದಲ್ಲಿ ಅತ್ಯಂತ ಪ್ರಾಚೀನ ಸೈಂಧವ ಸಂಸ್ಕೃತಿಯಿಂದಾರಂಭಿಸಿ, ಆಧುನಿಕ ಸಂಸ್ಕೃತಿಯಲ್ಲಿಯೂ, ತೀರ ಹಿಂದುಳಿದವರಿಂದ ಹಿಡಿದು, ಅತ್ಯಂತ ಮುಂದುವರಿದವರಲ್ಲಿಯೂ ಮಾತೃದೇವತೆಗಳ ಉಪಾಸನೆ ಒಂದಲ್ಲ ಒಂದು ವಿಧದಲ್ಲಿ ಉಳಿದುಕೊಂಡು ಬಂದಿದೆ. ಭೂಮಿಯ ಪ್ರಜನ ಶಕ್ತಿಯಾದ ಮಾತೃದೇವತೆಯನ್ನು ಅಮ್ಮ - ಅಂಬಾ - ಎಂದು ಕರೆಯುವ ಪರಿಪಾಠ ಭಾರತದ ಹೊರಗೂ ಹಲವೆಡೆಯಿದೆ. ನಮ್ಮಲ್ಲಿ ಪ್ರಚಲಿತವಿರುವ ಅಮ್ಮ, ಆಸ್ಟ್ರಿಕ್ ಭಾಷೆಯಲ್ಲಿದೆ; ಅಂತೆಯೇ ಸುಮೇರಿಯನ್ನರಲ್ಲಿ ಉಮ್ಮ, ಅಕೇಡಿಯನ್ನರಲ್ಲಿ ಉಮ್, ಸೀಥಿಯನ್‌ರಲ್ಲಿ ಓಮ್ಮೊ ಎಂದು ಮುಂತಾಗಿ ದೊರಕುತ್ತಿದ್ದು, ಅವೆಲ್ಲ 'ಅಮ್ಮ' ಪದದ ಜ್ಞಾತಿ ಪದಗಳೇ ಆಗಿವೆ. ಇದೇ ಹೆಸರಿನ ದೇವತೆ ಸಿರಿಯಾ, ಪರ್ಶಿಯಾ, ಕೆಂಪು ಸಮುದ್ರದ ಅಕ್ಕ ಪಕ್ಕಗಳಲ್ಲಿ, ಏಶಿಯಾ ಮೈನರ್ ಇಜಿಪ್ತ್ ಮುಂತಾದೆಡೆಗಳಲ್ಲಿ ಪೂಜೆಗೊಳ್ಳುವುದನ್ನು ಗುರುತಿಸಿ, ಇವಳು ಸಸ್ಯ ಸಂಪತ್ತಿನ ಒಡತಿಯೆಂದೂ ಪ್ರಾಣಿ ಪ್ರಪಂಚಕ್ಕೆ ಒಳಿತು ಮಾಡುವವಳೆಂದೂ ಬೆಟ್ಟ ಕಾಡು ಮೇಡುಗಳಲ್ಲಿ ವಾಸಮಾಡುವವಳೆಂದೂ, ದುರ್ಗರಕ್ಷಕಿಯೆಂದೂ ಭಾವಿಸಿಲಾದ ಅಂಶಗಳನ್ನು ಹೊರಗೆಡವಿದ್ದಾರೆ.[2] ಭಾರತೀಯ ಮಾತೃದೇವತೆಗಳ ಕಲ್ಪನೆಯೂ ಇದರಿಂದ ಭಿನ್ನವಾಗಿಲ್ಲ. ಭೂಸಂಪತ್ತು, ಬೇಸಾಯ, ಜಲಸಂಪತ್ತು ಇವುಗಳೊಂದಿಗೆ ಮಾತೃದೇವತೆಯ ಸಂಬಂಧ ನಮ್ಮಲ್ಲಿದೆ. ಮಾತೃದೇವತೆಯನ್ನು ಅನ್ನಪೂರ್ಣೆ, ಬನಶಂಕರಿ, ಶಾಕಂಬರಿ, ಮರಕೆಯಮ್ಮ ಎಂದು ಮುಂತಾಗಿ ಕರೆಯುವಲ್ಲಿ ಈ ದೇವತೆಯ ವೃಕ್ಷ- ವನಗಳ ಸಂಬಂಧವನ್ನು, ಬೆಳೆ, ಬೇಸಾಯಗಳ ಸಂಬಂಧವನ್ನು ಗುರುತಿಸಬಹುದು. ದುರ್ಗಮ್ಮನೆಂದು, ಕರೆಯಲಾಗುವ ಇವಳು ದುರ್ಗ ಸಂಬಂಧವನ್ನೂ ಹೊಂದಿದ್ದು ದುರ್ಗರಕ್ಷಕಿಯೂ ಹೌದು. ಕೆಲವೆಡೆ ಇವಳನ್ನು ದಂಡಿನ ದುರ್ಗಾದೇವಿಯೆಂದು ಕರೆದು, ಇವಳನ್ನು ಪಾರ್ಥಿವರ ಉಪಾಸಕ ದೇವತೆಯನ್ನಾಗಿಸಿದ್ದನ್ನು ನೋಡುತ್ತೇವೆ.

---

1. ಕೇ. ಎಸ್. ರಾಮಚಂದ್ರರಾವ್ : ಭಾರತೀಯ ದೇವಾಲಯಗಳ ಜಾನಪದ ಮೂಲ, ಪು. ೬೩ - ೬೪

ದ್ರಾವಿಡ ಜನಾಂಗಗಳ ಪ್ರಮುಖ ನೆಲೆಯಾದ ದಕ್ಷಿಣ ಭಾರತದಲ್ಲಿ ಅಮ್ಮನ ಆರಾಧನೆ ಸಾರ್ವತ್ರಿಕವಾಗಿದೆ. ವೈದಿಕರ ದೇವರು ಪದಕ್ಕೆ ಸಂವಾದಿಯಾದ ಪದ ದಕ್ಷಿಣ ಭಾರತದಲ್ಲಿ ಅಮ್ಮ, ಇವಳನ್ನು ತಾಯ್, ತಾಯಿ, ಅವ್ವ, ಅಬ್ಬೆ, ದೇವಿ ಎಂಬ ಹೆಸರುಗಳಿಂದಲೂ ಕರೆಯುವುದುಂಟು. ಮಳೆ ಬೆಳೆ ಸಮೃದ್ಧಿಯಾಗಿ ಸಾಂಕ್ರಾಮಿಕ ರೋಗರುಜಿನಗಳಿಂದ ಬರುವ ಕಷ್ಟ ಪರಿಹಾರಕ್ಕಾಗಿ, ಇವಳಿಗೆ ಶರಣಾಗಿ, ಇವಳ ತೇರು, ಜಾತ್ರೆ, ಉತ್ಸವಾದಿಗಳನ್ನು ಮಾಡಿ, ದೇವಿಯನ್ನು ದಕ್ಷಿಣ ಭಾರತದುದ್ದಕ್ಕೂ ಇಂದೂ ಆಚರಿಸುತ್ತಲಿದ್ದಾರೆ. ಈ ದೇವತೆಗೆ ದಕ್ಷಿಣ ಭಾರತದ ಒಂದೊಂದು ಹಳ್ಳಿಯಲ್ಲಿ ಒಂದೊಂದು ತೆರನಾದ ಹೆಸರುಗಳಿವೆ. ಅಮ್ಮ, ಮಾರಮ್ಮ, ಮರದಮ್ಮ, ಶಿವಮ್ಮ, ದ್ರೌಪದಿಯಮ್ಮ, ಲಕ್ಕಮ್ಮ, ಗಂಗಮ್ಮ, ಎಲ್ಲಮ್ಮ, ಚೌಡಮ್ಮ, ಬಿಸಿಲಮ್ಮ, ಭಗವತಿಯಮ್ಮ, ದುರ್ಗವ್ವ, ದ್ಯಾಮವ್ವ, ಕಾಳವ್ವ, ಮಾಯವ್ವ, ಮುಕ್ಕಂಬೆ, ಜಗದಂಬೆ, ಶಾರದಾಂಬೆ, ಮಾರಿಕಾಂಬೆ, ಮಮ್ಮಾಯಿ, ರುಕುಮಾಯಿ, ಬಾದಬ್ಬೆ, ಹೈಗುಂದದಬ್ಬೆ ಸಿರಿಯಬ್ಬೆ ಇತ್ಯಾದಿ ಪಟ್ಟಿ ಮಾಡಿದರೆ ಲಕ್ಷಾಂತರವಾಗಬಹುದು.

ಈ ಮಾತೃದೇವತೆಗಳು ಆರಂಭದಲ್ಲಿ ಸಣ್ಣ ಸಣ್ಣ ತಂಡಗಳ ಭಕ್ತಿ ಭಾವುಕತೆಯ ನೆಲೆಯಲ್ಲಿ ಬೆಳೆದುದರಿಂದ, ಇವರು ಊರಿಗೊಬ್ಬರಂತೆ ಕೇರಿಗೊಬ್ಬರಂತೆ ಬೆಳೆದು, ಇವರೆಲ್ಲರ ವಿಷಯದಲ್ಲಿ ಸಾಕಷ್ಟು ಐತಿಹ್ಯ ವದಂತಿ, ಅಂತೆಕಂತೆಗಳು ಹುಟ್ಟಿಕೊಂಡವು. ಆದರೆ ಇವೆಲ್ಲವುಗಳ ಸಾಮಾನ್ಯ ಆಶಯವೆಂದರೆ, ಹೆಣ್ಣಿನ ಶೀಲಭಂಗವಾಗುವುದು, ಅದರಿಂದ ಕ್ಷುದ್ಧಳಾದ ಹೆಣ್ಣು ಸುಟ್ಟುಕೊಂಡು ಸಾಯುವುದು, ರೋಗ ರುಜಿನಗಳ ಮೂಲಕ ಕಾಡುವುದು, ಜನ ತಮ್ಮ ಸಂಕಟ ಉಪಶಮನಕ್ಕಾಗಿ ದೇವಿಯ ಸ್ಮಾರಕವನ್ನು ನಿರ್ಮಿಸಿ, ಬಂಡಿ, ತೇರು, ಜಾತ್ರೆಗಳಲ್ಲಿ ಅವಳನ್ನು ಆರಾಧಿಸುವುದು, ಅನೂಚಾನಾಗಿ ನಡೆದುಕೊಂಡು ಬಂದಿದೆ. ಕೆಲವರು ಯುದ್ಧದಲ್ಲಿ ಮಡಿದ ತಮ್ಮ ಪತಿಗಳ ಜೊತೆಗೆ ಸಹಗಮನ ಮಾಡಿ, ಕೆರೆಬಾವಿಗಳಿಗೆ ನೀರು ತರಿಸಲು, ಕೋಟೆ ಕೊತ್ತಳಗಳ ಒಡ್ಡು, ಗೋಡೆಗಳ ಭದ್ರತೆಗಾಗಿ ಬಲಿಯಾಗಿ ಮಾಸ್ತಿ- ಅಮ್ಮನಾಗಿ ಪೂಜೆಗೊಂಡವರೂ ಇಲ್ಲದಿಲ್ಲ. ಈ ಎರಡು ಮೂರು ಆಶಯಗಳ ಹೊರತಾಗಿ ಬೇರೆ ಆಶಯಗಳುಳ್ಳ ಕತೆಗಳು ತೀರ ಕಡಿಮೆ. ಈ ಸಾದೃಶ್ಯ ಆಶಯಗಳ ನೆಲೆಯಲ್ಲಿ ಬೆಳೆದ ಅಮ್ಮ, ಒಂದೊಂದು ಊರಲ್ಲಿ ಒಂದೊಂದು ಹೆಸರಿನಿಂದ, ಒಂದೊಂದು ರೂಪದಲ್ಲಿ ಊರಿನ ರಕ್ಷಕ ಶಕ್ತಿಯಾಗಿ ನಿಂತಿದ್ದಾಳೆ. ದಕ್ಷಣಭಾರತದಲ್ಲಿ ಪ್ರಚಲಿತವಿರುವ ಗ್ರಾಮದೇವತೆಗಳ ಬಾಹುಲ್ಯವನ್ನು ಕಂಡು ಹೆನ್ರಿ ವೈಟ್ ಹೆಡ್ ಅವರು ಈ





ದೇವತೆಗಳ ಖಾನೇ ಸುಮಾರಿಗೆ ನಿಂತರೆ, ಅನೇಕ ಬೃಹತ್ ಗಾತ್ರದ ಸಂಪುಟಗಳಾಗಬಹುದೆಂದು ಸರಿಯಾಗಿಯೇ ಹೇಳುತ್ತಾರೆ. [2]

ದ್ರಾವಿಡ ಸಮಾಜದಲ್ಲಿ ಪ್ರಧಾನ ಸ್ಥಾನವನ್ನು ಪಡೆದ ಅಮ್ಮ, ವೈದಿಕ ಸಾಹಿತ್ಯದಲ್ಲಿ ಅಂಬಾ, ಅದಿತಿಯಾಗಿ ಸೇರಿಹೋದಳು. ದ್ರಾವಿಡ ಆರ್ಯರೆಂಬ ಭೇದ ಭಾವವಿಲ್ಲದೆ ಎಲ್ಲರ ಅಮ್ಮ (ಎಲ್ಲಮ್ಮ) ಜಗದಂಬೆಯಾದಳು. ಅವಳು ಸಂತುಷ್ಟಳಾದರೆ ಎಲ್ಲ ದೇವತೆಗಳೂ ಸಂತುಷ್ಟರಾಗುತ್ತಾರೆ, ಎಂಬ ನಂಬಿಕೆ ಕ್ರಮೇಣ ಬಲವತ್ತರವಾಗುತ್ತ ಹೋಗಿ, ಜಗದಂಬೆ-ಅಮ್ಮ ಎಲ್ಲರನ್ನೂ ಕಾಪಾಡುವ ರಕ್ಷಕ ಶಕ್ತಿಯಾಗಿ ನಿಂತಳು. ಮುಂದಿನ ಹಂತದಲ್ಲಿ ಇವಳೇ ಶಾಕ್ತ ಪಂಥದ ಆದಿಶಕ್ತಿಯಾದಳು. ಸಪ್ತ ಮಾತೃಕೆಯರೆಂದು ಹೆಸರಾದ ಬ್ರಾಹ್ಮಿ, ಮಹೇಶ್ವರಿ, ವೈಷ್ಣವಿ, ಕೌಮಾರಿ, ಇಂದ್ರಾಣಿ, ವರಾಹಿ, ಚಾಮುಂಡಿ ಮುಂತಾದ ಶಕ್ತಿ ಸ್ವರೂಪಿಣಿಯರ ಸೃಷ್ಟಿ ಇದೇ ಹಂತದಲ್ಲಾಯಿತು.

**೨. ಮಾತೃದೇವತೆಗಳ ವಿಕಾಸದ ಹಂತಗಳು :**

ಮಾತೃದೇವತೆಗಳ ವಿಕಾಸ ಕ್ರಮದಲ್ಲಿ ನಾವು ಪ್ರಮುಖವಾದ ಮೂರು ಹಂತಗಳನ್ನು ಗುರುತಿಸಬಹುದು. (ಅ) ಜಾನಪದ ಮೂಲದ ಮಾರಿ- ಅಮ್ಮ (ಆ) ವೇದ ಮೂಲದ ಅದಿತಿ ಅಂಬೃಣಿ (ಇ) ಶಾಕ್ತ ಮೂಲದ ಶಕ್ತಿ-ದುರ್ಗೆ. 3

**ಅ. ಜಾನಪದ ಮೂಲದ ಮಾರಿ-ಅಮ್ಮ**

ಕಾಡುಮೇಡುಗಳಲ್ಲಿ ಗುಂಪುಗೂಡಿ ಅಲೆಯುವ ಆದಿ ಮಾನವ ಹುಲಿ, ಸಿಂಹ, ಆನೆ ಮುಂತಾದ ತನಗಿಂತ ಬಲಿಷ್ಠವಾದ ಪ್ರಾಣಿಗಳನ್ನು ಕಂಡು ನಡುಗಿದ. ತಮ್ಮ ಬುಡಕಟ್ಟನ್ನೇ ನಾಶಪಡಿಸುವ ಸಾಂಕ್ರಾಮಿಕ ರೋಗಗಳ ಕೋಟಲೆಗೆ ಒಳಗಾದಾಗ, ತಾವು ನಿಂತ ನೆಲೆಯನ್ನೇ ಅಲ್ಲಾಡಿಸಿ, ಸುಟ್ಟು ಸ್ವೀಕರಿಸಿಬಿಡುವ ಭೂಕಂಪ, ಜ್ವಾಲಾಮುಖಿ, ಅಗ್ನಿ ಪ್ರಕೋಪಗಳಿಗೆ ಸಿಲುಕಿ ತತ್ತರಿಸಿದಾಗ, ಬಿರುಗಾಳಿ, ಗುಡುಗು, ಸಿಡಿಲುಗಳ ಆ ಟೋಪಗಳಿಗೆ ಬೆಚ್ಚಿಬಿದ್ದಾಗ, ಜಡಿಮಳೆ ನೆರೆ ಹಾವಳಿಗೆ ತುತ್ತಾಗಿ, ನೆಲೆ ಕಳೆದುಕೊಳ್ಳುವ ಪರಿಸ್ಥಿತಿಯೊದಗಿದಾಗ, ತನ್ನಿಂದ ನಿಯಂತ್ರಿಸಲಾಗದ

2. It would require many bulky volumes to enemerate the countless varieties of locul use & Custom Prevailing in the different Villages. Henry Whitehead (1921) The Village gods of South India P.139

3. ಡಾ|| ಎನ್. ಆರ್. ನಾಯಕ್ : ಕರ್ನಾಟಕದ ಶಕ್ತಿದೇವತೆಗಳು ೧೯೮೭ ಪು. ೪

ಅವ್ಯಕ್ತ ಮಹಾಶಕ್ತಿಯೊಂದಿದೆ, ಆ ಶಕ್ತಿಯೇ ನಮ್ಮನ್ನು ಕಾಪಾಡಬೇಕು;ರಕ್ಷಿಸುವ ತಾಯಿಯೇ ಲಯಕಾರಿಣಿಯಾಗಿ, ಮಹಾಮಾರಿಯಾಗಿ ಕಾಡಿದರೆ ಹೇಗೆ?ಅವಳ ಕೋಪದ ಬೆಂಕಿಯ ಮುಂದೆ ತನ್ನಾಟ ಸಾಲದೆಂದು ಬಗೆದು, ಪ್ರಕೃತಿಯ ಆ ಮಾರಕರೂಪಕ್ಕೆ ಹೆದರಿ, ಅವಳನ್ನು ಸಂತೃಪ್ತಿಗೊಳಿಸಲು ಅವಳಿಗೊಂದು ವ್ಯಕ್ತರೂಪವನ್ನು ಕೊಟ್ಟು, ಅವಳ ವಿಷಯದಲ್ಲಿ ಅತಿರಂಜಕ ಕಥೆಯೊಂದನ್ನು ಕಟ್ಟಿ, ಅವಳನ್ನು ತಾನೊಬ್ಬನೇ ಅಲ್ಲ, ತನ್ನ ಸುತ್ತಲಿನವರೂ ತಲೆಬಾಗಿ ಆರಾಧಿಸುವಂತೆ ಮಾಡಿದ. ಅವಳನ್ನು ಪೂಜೆ ಬಲಿಗಳಿಂದ ಒಲಿಸಿಕೊಳ್ಳಲು ಮುಂದಾದ. ಇಂಥ ಪೂಜೆ, ಬಲಿಗಳನ್ನು ಸಮರ್ಪಿಸಿದಲ್ಲಿ, ಆ ದೇವತೆ ತನ್ನುಗ್ರರೂಪವನ್ನು ಮಾರ್ಪಡಿಸಿ ಪ್ರಸನ್ನಳಾಗಿ ತನ್ನ ಅಭಯ ಹಸ್ತವನ್ನು ನೀಡುವಳೆಂದು ಭಾವಿಸಿದ. ಆ ದೇವಿಯ ಹಿರಿಮೆ ಗರಿಮೆಗಳನ್ನು ಸುತ್ತೆಲ್ಲ ಪ್ರಚಾರಮಾಡಿ, ಆ ದೇವತೆಯ ಭಕ್ತ ಪರಿವಾರ ಹೆಚ್ಚುವಂತೆ ಕಾಳಜಿವಹಿಸಿದ. ಹೀಗೆ ಉಗ್ರದೇವತೆ 'ಮಾರಿ'ಯ ಉಪಾಸನೆ ಆದಿಮಾನವನ ಭಯದಿಂದ ಹುಟ್ಟಿಕೊಂಡ ಭಕ್ತಿಯ ವ್ಯಕ್ತರೂಪವಾಗಿದೆ. ಜನರಿಗೆ ಆತಂಕಕಾರಿಯಾದ, ಲಯ ಸ್ವರೂಪಿಣಿಯಾದ, ಈ ದೇವತೆಯನ್ನು ಮಾರಿಯಮ್ಮ, ಚೌಡಮ್ಮ, ಸಿಡಿಲಮ್ಮ, ಗಾಳಮಾರಿ, ಕರಿಯಮ್ಮ, ಎಂದು ಮುಂತಾಗಿ ತನಗನಿಸಿದ ಹೆಸರನ್ನು ನೀಡಿ ಆರಾಧಿಸಿದ. ಹೀಗೆ ಮಾನವ ಸಂಸ್ಕೃತಿಯ ವಿಕಾಸದ ಪ್ರಾಥಮಿಕ ಹಂತದಲ್ಲಿ, ವೈಚಾರಿಕ ಭದ್ರ ನೆಲೆಯಿಲ್ಲದ ಆದಿಮಾನವ ಮೊದಲು ಸೃಷ್ಟಿಸಿಕೊಂಡದ್ದು ಉಗ್ರದೇವತೆ ಮಾರಿಯೇ ಆಗಿದ್ದಂತಿದೆ.

ಅಮ್ಮ :

ಆದಿಮಾನವನು ಅಲೆಮಾರಿಕೆಯ ತನ್ನ ಬೇಟೆಯಾಟದ ಬದುಕನ್ನು ಕ್ರಮೇಣ ಬದಲಿಸಿ, ಫಲವತ್ತಾದ ನೆಲ, ನೀರಿನ ಸಮೃದ್ಧಿಯಿದ್ದ ಒಂದೆಡೆಯಲ್ಲಿ ನೆಲೆ ನಿಂತು, ಹೊಲ, ಗದ್ದೆ, ತೋಟಪಟ್ಟಿ, ವ್ಯವಸಾಯವನ್ನು ಹಸ್ತಗತವಾಗಿಸಿಕೊಂಡ. ಕಾಡು ಕಡಿದು ಗುಡಿಸಲು ಕಟ್ಟಿ, ಗ್ರಾಮವನ್ನು ನಿರ್ಮಿಸಿಕೊಂಡು, ತನ್ನ ಕೌಟುಂಬಿಕ ಪರಿವಾರದೊಡನೆ, ಕೆಲವು ವಿಧಿ ನಿಷೇಧಗಳನ್ನು ಹಾಕಿಕೊಂಡು ಶಾಂತಿಯುತ ಸಹಬಾಳ್ವೆಯನ್ನು ರೂಢಿಸಿಕೊಂಡ. ಈ ಹಂತದಲ್ಲಿ ಗೃಹಕ್ಕೆ ಒಡತಿಯಾಗಿ, ಗಂಡನಿಗೆ ನಲ್ಮೆಯ ಸತಿಯಾಗಿ, ಮಕ್ಕಳಿಗೆ ಮಮತೆಯ ಮಾತೆಯಾಗಿ, ತನ್ನೆಲ್ಲ ಕಷ್ಟಕಾರ್ಪಣ್ಯಗಳನ್ನು ಬದಿಗಿಟ್ಟು, ಸ್ನೇಹದ ರಸಧಾರೆಯನ್ನು ಕುಟುಂಬದ ಸದಸ್ಯರೆಲ್ಲರಿಗುಣಿಸಿ, ಸಹನೆ ಹಾಗೂ ಕರುಣೆಯ ಮೂರ್ತಿಯಾಗಿ, ಬದುಕು ಬಾಳುವ ಹೆಣ್ಣಿನಲ್ಲಿ ದೈವತ್ವವನ್ನು ಕಂಡುಕೊಂಡ. ಅವಳು ನೀಡಿದ





ಪ್ರೀತಿವಾತ್ಸಲ್ಯಗಳಿಗೆ, ತೋರಿದ ಕರುಣೆಗೆ ಋಣಿಯಾಗಿ, ಅವಳು ಗತಿಸಿ ಹೋದರೂ, ಅವಳ ಹೆಸರಿನಲ್ಲಿ ಸ್ಮಾರಕವೊಂದನ್ನಿಟ್ಟು ಪೂಜಿಸಿದ. ತಾನು ನೆಲೆ ನಿಂತ ನೆಲವು ಗಡ್ಡೆ ಗೆಣಸು ಹಣ್ಣು ಹಂಪಲ, ಕಾಳು ಕಡ್ಡಿ ಹೀಗೆ ಬಹುರಸದ ಮೊಲೆಯುಣಿಸಿ ಜೀವ ತಣಿಸುವುದನ್ನು ಗಮನಿಸಿ, ಆದರ ವಿಷಯದಲ್ಲಿಯೂ, ಮಾತೃಭಾವನೆಯನ್ನು ತಾಳಿ, ಅವಳ ಸ್ಮಾರಕವಾಗಿ, ಕಲ್ಲನ್ನು ನೆಟ್ಟೋ, ನೆಲದ ಒಡಲಾಳದಿಂದ ಚಿಗಿತು ಮೂಡಿಬಂದ ಹುತ್ತವನ್ನೋ, ನಿಮಿರಿ ನೆಗೆದು ನಿಂತ ಮರವನ್ನೊ ನೋಡಿ ಅಮ್ಮನೆಂದೋ, ಭೂಮಿತಾಯಿಯೆಂದೋ ಕಂಡು ಕೈ ಮುಗಿದ. ಊರಿಗೆ ಬಂದ ಕೇಡನ್ನು ನಿವಾರಿಸಲಿಕ್ಕಾಗಿ ಜಲಸಮೃದ್ಧಿಗಾಗಿ, ಶೀಲಭಂಗವಾಗುವುದನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಸತಿತ್ವವನ್ನುಳಿಸಿಕೊಳ್ಳಲಿಕ್ಕಾಗಿ ಜೀವತೆತ್ತ ಮಹಿಳೆಯರನ್ನು ಕೃತಜ್ಞತೆಯಿಂದ ನೆನೆಸಿಕೊಂಡು, ಅವರ ಹೆಸರಿನಲ್ಲಿ ಕಲ್ಲನ್ನಿಟ್ಟೊ, ಮೂರ್ತಿಯನ್ನು ಕೆತ್ತಿಯೋ ಪೂಜಿಸಿದ. ಇಂಥ ಸ್ತ್ರೀ ಸ್ಮಾರಕಗಳೂ ಕ್ರಮೇಣ ಅಮ್ಮನಾಗಿ - ಗ್ರಾಮದೇವತೆಯಾಗಿ ಪರಿವರ್ತಿತವಾಗುವುದಿದೆ. ಹೀಗೆ ಊರಿಗೊಂದು ಕೇರಿಗೊಂದು ಅಮ್ಮನವರ ತಾನ, ಗುತ್ತು, ಗುಡಿ, ಮನೆಗಳು ಲಕ್ಷಾಂತರಗಟ್ಟಲೆ ದೊರಕುತ್ತವೆ. ಬಹುಶಃ ದಕ್ಷಿಣ ಭಾರತದಲ್ಲಿಅಮ್ಮನ ಗುಡಿಗಳಷ್ಟು ವಿಪುಲ ಸಂಖ್ಯೆಯಲ್ಲಿ ಬೇರೆ ದೇವತೆಗಳ ಗುಡಿಗಳು ಇಲ್ಲವೆಂದು ಹೇಳಿದರೆ ಸತ್ಯವನ್ನೇ ಹೇಳಿದಂತಾಗುವುದು. ಅಮ್ಮನೆಂದು ಕರೆಯಲಾಗುವ ಈ ದೇವತೆ ಮಾರಿಯಮ್ಮನ ತಂಗಿಯೆಂದು ಜಾನಪದ ನಂಬಿಕೆಯಿದೆ. ಹಿರಿಯಳಾದ ಮಾರಿಯಮ್ಮ (ದೊಡ್ಡಮ್ಮ) ಅವಳ ತಂಗಿಯರಾದ ಅಮ್ಮ ಇವರೆಲ್ಲ ಒಟ್ಟು ಏಳು ಮಂದಿ ಅಕ್ಕ ತಂಗಿಯರೆಂಬ ನಂಬಿಕೆಯಿದೆ. ಆದರೆ ಈ ಅಕ್ಕ ತಂಗಿಯರ ಹೆಸರುಗಳು ಊರಿಂದ ಊರಿಗೆ ಭಿನ್ನವಾಗಿವೆ.

ಜಾನಪದ ಮೂಲದ ಮಾರಿ-ಅಮ್ಮ ಇವರನ್ನು ಜಾನಪದರು ಹುತ್ತ ವೃಕ್ಷ, ಶಿಲೆ, ಲಿಂಗರೂಪದಲ್ಲಿ , ಇತ್ತೀಚೆಗೆ ಶಿಲೆ ಇಲ್ಲವೆ ಲೋಹ ವಿಗ್ರಹಗಳ ರೂಪದಲ್ಲಿ ಆರಾಧಿಸುತ್ತಾರೆ. ತೀರ ಹಿಂದುಳಿದ ಹರಿಜನರು ನೀರು ತುಂಬಿದ ಘಟವನ್ನು , ಇಲ್ಲವೆ ಕವಡೆ ಸರವನ್ನು ಪೂಜಿಸುವುದಿದೆ. ತೆಲುಗು ದೇಶದ ಈಡಿಗರು, ಹೆಂಡದ ಗಡಿಗೆಯನ್ನು ದೇವಿಯ ಹೆಸರಿನಲ್ಲಿ ಪೂಜಿಸುತ್ತಾರೆ. ಮಾರಿ - ಅಮ್ಮನ ರುದ್ರ ಹಾಗೂ ಭದ್ರ ಸ್ವರೂಪಗಳಲ್ಲಿ ಜಾನಪದರು ರುದ್ರ ಸ್ವರೂಪವನ್ನೇ ಹೆಚ್ಚಾಗಿ ಪರಿಭಾವಿಸುತ್ತಾರೆ. ಊರಿಗೆ ಬಂದ ಕೋಟಲೆಗಳನ್ನು ಹೊಡೆದೋಡಿಸಲು ಅವರಿಗೆ ಈ ರುದ್ರ-ಭದ್ರಕಾಳಿಯ ರುದ್ರ ಸ್ವರೂಪವೇ ಹೆಚ್ಚು ಪ್ರಿಯವಾಗುತ್ತದೆ.

ವಿಷ್ಟೋ ಮಾರಿ ಅಮ್ಮನವರಿಗೆ ಗುಡಿಗಳೇ ಇರುವುದಿಲ್ಲ; ಕೆಲವಕ್ಕೆ ಗುಡಿಗಳಿದ್ದರೂ ತೀರ ಚಿಕ್ಕವು. ಕೈಬೆರಳೆಣಿಕೆಯ ಕೆಲವು ಮಾರಿ - ಅಮ್ಮನ ಗುಡಿಗಳು

ಆಯಾ ದೇವತೆಗಳ ಹಿರಿಮೆ, ಆಸ್ತಿಕ ಭಕ್ತ ಸಮೂಹದಲ್ಲಿ ಹೆಚ್ಚಿನ ಪ್ರಚಾರ ಪಡೆದು, ಭಕ್ತರ ಸಂಖ್ಯೆ ಹೆಚ್ಚಿ, ದೇವತೆಗಳ ಸಾಂಪತ್ತಿಕ ಸ್ಥಿತಿ ಸುಧಾರಿಸಿ, ಅವು ಜೀರ್ಣೋದ್ಧಾರವನ್ನು ಪಡೆದು ದೊಡ್ಡ ದೇವಾಲಯಗಳಾಗಿ ಮಾರ್ಪಾಡು ಹೊಂದಿದೆ. ಆದರೆ ಇಂಥ ದೇವಾಲಯಗಳ ಮೇಲ್ವಿಚಾರಣೆಯನ್ನು ಮುಂದುವರಿದ ವರ್ಗದವರೇ ಹೆಚ್ಚಾಗಿ ಮಾಡುತ್ತಿರುವುದು ಕಂಡುಬರುತ್ತದೆ. ಈ ದೇವಾಲಯಗಳ ದೇವತಾರ್ಚನೆಯಲ್ಲಿ ಜಾನಪದ ಆಚರಣೆಗಳ ಜೊತೆಗೆ, ಷೋಡಶೋಪಚಾರ, ಚತುಷ್ಷಿ ಉಪಚಾರಾದಿ ಆಗಮೋಕ್ತ ಅರ್ಚನಾಕ್ರಮಗಳ ಸೇರ್ಪಡೆ, ವೈದಿಕ ಬ್ರಾಹ್ಮಣ ಪೂಜಾರಿಗಳ ಪ್ರವೇಶ, ವೈದಿಕ ಮಂತ್ರೋಚ್ಚಾರಾದಿಗಳು ಸೇರಿ ಕೊಳ್ಳುತ್ತವೆ. ಗುಡಿಗಳಿಲ್ಲದ, ಇದ್ದರೂ ತೀರ ಚಿಕ್ಕ ಗುಡಿಗಳಿರುವ ಈ ದೇವತೆಗಳ ತಾನ, ತಳ, ಗುತ್ತು, ಗುಡಿ ಮನೆಗಳಲ್ಲಿ ಇನ್ನೂ ಜಾನಪದೀಯ ಪೂಜಾ ವಿಧಿ ವಿಧಾನಗಳೇ ಜೀವಂತವಾಗಿವೆ; ಇವುಗಳ ಅರ್ಚಕರು ಬಡಿಗರು, ಕುಂಬಾರರು, ಇಲ್ಲವೇ ಆಯಾ ದೇವತೆಗಳಿಗೆ ನಡೆದುಕೊಳ್ಳುವ ಶೂದ್ರ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಕೆಲವು ದೇವತೆಗಳ ಗುತ್ತು, ಗುಡಿಗಳು ಊರ ಹೊರಗಿರುತ್ತವೆ. ಇಂಥ ಗುಡಿಗಳಲ್ಲಿಯ ದೇವತೆಯನ್ನು ಕೆಲವೆಡೆ"ಊರ ಹೊರಗಲಮ್ಮ" ನೆಂದೂ ಕರೆಯುವುದಿದೆ. ಇವುಗಳ ಪೂಜಾರಿಗಳು ಹೆಚ್ಚಾಗಿ ದಲಿತ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಶೂದ್ರರು ಹಾಗೂ ದಲಿತರು ಪೂಜಾರಿಗಳಾಗಿರುವ ಗುಡಿ - ಗುತ್ತುಗಳಲ್ಲಿ ವೈದಿಕ ಮಂತ್ರ ತಂತ್ರಾದಿಗಳಿಗೆ ಪ್ರವೇಶವಿಲ್ಲ. ಪೂಜಾ ವಿಧಾನಗಳೆಲ್ಲ ಜಾನಪದೀಯವಾಗಿರುತ್ತವೆ. ಪೂಜೆಯ ಸಮಯದಲ್ಲಿ ಜಾನಪದ ಗೀತ ನೃತ್ಯಗಳ ಸೇರ್ಪಡೆಯಾಗುತ್ತದೆ. ದೇವತೆಗೆ ಕೆಲವೆಡೆ ಮದ್ಯ ಮಾಂಸಗಳ ನೈವೇದ್ಯವೂ ಉಂಟು; ಕೆಲವೆಡೆ ಇವಕ್ಕೆ ನಿಷೇಧವೂ ಉಂಟು.

ಸಾಂಕ್ರಾಮಿಕ ರೋಗಗಳಾದ ಗೋಣೆ, ಸಿಡುಬು, ಪ್ಲೇಗು, ಕಾಲರಾ ಮುಂತಾದ ರೋಗಗಳನ್ನು ·ರುದ್ರ ರೂಪಿಯಾದ ಮಾರಿ, ದೊಡ್ಡಮ್ಮ ತನ್ನ ತಂಗಿಯರಾದ ವಿಭಿನ್ನ ಹೆಸರಿನ "ಅಮ್ಮ" ಹಾಗೂ ಇನ್ನಿತರ ಬಂಟರ ಬೀರರ ಸಹಕಾರದಿಂದ ನಿಯಂತ್ರಿಸುತ್ತಾಳೆಂಬ ಬಲವತ್ತರವಾದ ನಂಬಿಕೆ ಜಾನಪದರಲ್ಲಿದೆ. ಗ್ರಾಮಗಳನ್ನು ಕಾಡುವ ಪೀಡೆಗಳನ್ನು ಸದೆ ಬಡಿಯುವುದರಿಂದ, ಈ ದೇವತೆಯನ್ನು"ಪಿಡಾರಿ"ಎಂದೂ ಕೆಲವರು ಕರೆಯುವುದುಂಟು. ಗ್ರಾಮ ರಕ್ಷಣೆಯ ಉಸ್ತುವಾರಿಯನ್ನು ಹೊತ್ತ ಈ ಗ್ರಾಮದೇವತೆಗಳನ್ನು ಅಲಕ್ಷಿಸಿದಲ್ಲಿ, ಅವು ಸಿಟ್ಟಾಗಿ ಲಯಕಾರಿಣಿಯರಾಗಿ ಭಕ್ತರನ್ನು, ಅವರ ದನ-ಕರು, ದವಸ-ಧಾನ್ಯಗಳನ್ನು ನಾಶಪಡಿಸುತ್ತವೆ ಎಂಬ ಭಯ ಭಕ್ತಿಯಿಂದ





ಈ ದೇವತೆಗಳಿಗೆ ಭಕ್ತರು ಶರಣಾಗುತ್ತಾರೆ. ತಮಗೆ ಹಾಗೂ ತಮ್ಮ ಊರಿಗೆ ಬಂದೊದಗಿದ ಕೋಟಲೆಗಳಿಂದ ವಿಮುಕ್ತಿಯನ್ನು ಪಡೆಯಲು, ಬೇವಿನುಡಿಗೆಯ ಸೇವೆ, ಉರುಳುಸೇವೆ, ಕೆಂಡ ಹಾಯುವುದು, ಸಿಡಿಯಾಡುವುದು ಮುಂತಾದ ಹರಕೆಯನ್ನೊಪ್ಪಿಸುವುದರ ಜೊತೆಗೆ, ತಮ್ಮ ಸಂಕಷ್ಟಗಳ ತೀವ್ರತೆಯ ತರ-ತಮಲಗಳಿಗನುಗುಣವಾಗಿ, ಕೋಳಿ, ಕುರಿ, ಹಂದಿ, ಕೋಣ ಹಾಗೂ ನರಬಲಿಗಳ ಸಮರ್ಪಣೆಯನ್ನು ಮಾಡುವುದು ನಡೆದು ಬಂದಿದೆ. ಆದರೆ ಆಧುನಿಕ ಕಾಲದಲ್ಲಿ ಕೋಣ ಹಾಗೂ ನರಬಲಿಯನ್ನು ಕೊಡುವ ಸಂಪ್ರದಾಯ ಇಲ್ಲವೆನ್ನುವಷ್ಟು ಕಡಿಮೆಯಾಗಿದೆ. ಇಂಥ ಬಲಿಯ ಹೆಸರಿನಲ್ಲಿ ಕುಂಬಳಕಾಯಿಯನ್ನು ಕಡಿದು ಅದರಲ್ಲಿ ಕುಂಕುಮ ಬೆರೆಸಿ ಸಾಂಕೇತಿಕ ಬಲಿಯನ್ನರ್ಪಿಸುವುದು ಇಂದು ಪ್ರಚಲಿತವಿದೆ. ದೇವತೆಗೆ ತೆಂಗಿನಕಾಯಿಯ ಸಮರ್ಪಣೆ ಮಾಡುವುದೂ ಸಹ ಹಿಂದಿನ ನರಬಲಿಗೆ ಪ್ರತಿಯಾಗಿ ಮಾಡುವ ಬದಲಿ ವ್ಯವಸ್ಥೆಯೆಂದೂ ಊಹಿಸುವುದಿದೆ. ಇತ್ತೀಚಿನ ದಿನಗಳಲ್ಲಿ ದೇವತೆಗಳಿಗೆ ಸಲ್ಲಿಸುವ ಪ್ರಾಣಿ ಬಲಿ, ಸಿಡಿಯಾಡುವುದು, ಬೆತ್ತಲೆ ಸೇವೆ, ಮುಂತಾದ ಅಮಾನುಷ ಹರಕೆಯ ಪದ್ಧತಿಗಳು ದೂರವಾಗಿ, ಹಣ್ಣುಕಾಯಿ ಸಮರ್ಪಿಸುವುದು, ಕುಂಕುಮಾರ್ಚನೆ, ಉಡಿ ತುಂಬಿಸುವುದು ಹಾಗೂ ತುಲಾಭಾರ ಮುಂತಾದ ಸಾತ್ವಿಕ ಸೇವೆಗಳು ಹೆಚ್ಚಾಗಿ ತೊಡಗಿವೆ.

ಜಾನಪದ ಮೂಲದ ಈ ದೇವತೆಗಳಿಗೆ ಆಗುವ ಮಹತ್ವಪೂರ್ಣ ಉತ್ಸವಗಳೆಂದರೆ ಮಾರಿಜಾತ್ರೆ, ಬಂಡಿ ಹಬ್ಬ, ತೇರಿನ ಉತ್ಸವಗಳು. ಈ ಸಂದರ್ಭಗಳಲ್ಲಿ ಸಾವಿರಾರು ಜನ ನೆರೆದು ದೇವತೆಗಳಿಗೆ ಭಕ್ತಿ ಗೌರವಗಳನ್ನು ಸಮರ್ಪಿಸುತ್ತಾರೆ.

ಜಾನಪದ ಮೂಲದಲ್ಲಿ ಮೊದಲು ಮಾರಿ, ಅನಂತರ ಅಮ್ಮ ಹೀಗೆ ಎರಡು ಮಾತೃದೇವತೆಗಳ ಕಲ್ಪನೆಯಿದ್ದು ಇವರಲ್ಲಿ ಮಾರಿ ಅಕ್ಕ ಅವಳ ತಂಗಿ ಅಮ್ಮ ಎಂಬ ಪರಿಕಲ್ಪನೆ ಆರಂಭದಲ್ಲಿದ್ದು ಮುಂದೆ ಅವುಗಳ ಸಂಖ್ಯೆ ಏಳಕ್ಕೆ ಏರಿ ಇಂದು ಊರು ಹಾಗೂ ಕೇರಿಗಳ ಸಂಖ್ಯೆ ಬೆಳೆದ ಹಾಗೆ, ಜನಸಂಖ್ಯೆ ವರ್ಧಿಸಿದ ಹಾಗೆ ಈ ದೇವತೆಗಳ ಸಂಖ್ಯೆಯೂ ವರ್ಧಿಸಿದೆ. ಮೊದಲಿನ ಇಬ್ಬರು ಪ್ರಧಾನ ಮಾರಿ-ಅಮ್ಮ ಇವರಲ್ಲಿ "ಈ ನೆಲಕ್ಕೆ· ಮೊದಲಿಗರಾದ ದಲಿತರ ಅಮ್ಮ ಒಬ್ಬಳು, ವಲಸೆಗಾರ ಪಶುಪಾಲಕರ ಅರೆಕೃಷಿಕ

4. ಎಸ್. ಎಸ್. ಹಿರೇಮಠ : ಜಾತ್ರೆಗಳು , ಪು. ೬೨

ದ್ರಾವಿಡ ಜನವರ್ಗಗಳ ಅಮ್ಮ ಇನ್ನೊಬ್ಬಳು. ಈ ಪರಂಪರೆಗಳ ಸಂಯೋಜನೆಯಿಂದಾಗಿ ಅಮ್ಮಂದಿರ ಆಚರಣೆಗಳೂ ಬೆರಕೆಯಾಗಿ ಹೋಗಿವೆ." 4 ಎನ್ನುವುದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಾರಿಕಾಂಬೆಯ ಜಾತ್ರೆ ಹಾಗೂ ಈ ಜಿಲ್ಲೆಯ ಕರಾವಳಿಯುದ್ದಕ್ಕೂ ಪ್ರಚಲಿತವಿರುವ ಬಂಡಿಹಬ್ಬದ ಆಚರಣೆಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ.

**ಆ. ವೈದಿಕ ಸ್ತ್ರೀ ದೇವತೆಗಳು :**

ವೇದಮಂತ್ರ ದೃಷ್ಟಾರರು ಅದಿತಿ, ಅಂಬೃಣಿ, ಪೃಥ್ವಿ, ಉಷಸ್, ಸರಸ್ವತಿ, ಲಕ್ಷ್ಮಿ, ಕಾಳಿ ಮುಂತಾದ ಅನೇಕ ಸ್ತ್ರೀ ದೇವತೆಗಳನ್ನು ಸ್ತುತಿಸುತ್ತಾರೆ. ಆದರೆ, ಅಲ್ಲಿ ಸ್ತ್ರೀ ದೇವತೆಗಳಿಗೆ ಇಂದ್ರಾದಿ ಪುರುಷ ದೇವತೆಗಳಿಗಿದ್ದ ಪ್ರಾಧಾನ್ಯವಿಲ್ಲ. ವೇದಗಳಲ್ಲಿ ಅತ್ಯಂತ ಪ್ರಾಚೀನವಾದ ಋಗ್ವೇದದ ಕೊನೆಯ ಮಂಡಲದಲ್ಲಿ ವಾಗಂಬೃಣೇ ದೇವಿಯ ಸೂಕ್ತದಲ್ಲಿ ದೇವಿಯು, "ನಾನೇ ಜಗತ್ತಿನ ಆದಿಶಕ್ತಿಯು, ನನಗೆ ಮಿಗಿಲಾದ ದೇವರು ಯಾರಿಲ್ಲ. ನಾನೇ ಇಂದ್ರಾದಿಗಳಿಗೆ ಮಿತ್ರಾವರುಣರಿಗೆ ಯಜಮಾನಿ" ಎಂದು ಸ್ವಪ್ರತಿಷ್ಠೆಯಿಂದ ಗುಡುಗುತ್ತಾಳೆ: ವೇದದಲ್ಲಿ

ಅದಿತಿರ್ದ್ಯೌರದಿತಿರಂತರಿಷ ಮದಿತಿ ರ್ಮಾತಾಸಪಿತಾಸಪುತ್ರ

ವಿಶ್ವದೇವಾ ಅದಿತಿಃ ಪಂಚಜನಾ ಅದಿತಿರ್ಜನಿತ್ವಮ್

ಅದಿತಿಯೇ ಸ್ವರ್ಗ, ಅದಿತಿಯೇ ಅಂತರಿಕ್ಷ, ತಂದೆ, ತಾಯಿ, ಮಗು, ವಿಶ್ವ ದೇವತೆ ಪಂಚಮರಾದಿಯಾಗಿ ಎಲ್ಲರೂ ಅವಳ ಮಕ್ಕಳು, ಎಂದು ಮುಂತಾಗಿ ಬಣ್ಣಿಸಿ ಅವಳನ್ನು ಮಹಾಮಾತೆಯಾಗಿ ಅಂಗೀಕರಿಸಿದ್ದಾರೆ. ಆದರೆ ಈ ದೇವತೆ "ಆರ್ಯಭಾಷಕರ ದೈವತವಲ್ಲ ಭಾರತೀಯ ದೈವತದೊಳಗಿಂದ ಸ್ವೀಕರಿಸಿದ ಮಹಾ ಮಾತೆಯಾಗಿದ್ದಾಳೆ." 5 ಎಂದು ಡಾ॥ ಶಂ. ಬಾ. ಜೋಶಿಯವರು ಅದಿತಿ ಹಾಗೂ ದ್ರಾವಿಡ ಗ್ರಾಮದೇವತೆಯಾದ 'ಅಮ್ಮ' ಎರಡರಲ್ಲಿ ಅಭೇದವನ್ನು ಕಲ್ಪಿಸುತ್ತಾರೆ. ಈ ಅದಿತಿ ಎಲ್ಲರ ಅಮ್ಮ, ನಮ್ಮ, ಎಲ್ಲಮ್ಮನ ಹಾಗೆ . ವೇದದಲ್ಲಿ ಬರುವ ಅಂಬ ಎಂಬ ಪದವೂ ಅಮ್ಮ ಎಂಬುದರಿಂದಲೇ ನಿಷ್ಪನ್ನವಾಗಿದೆಯೆಂಬ ಅಭಿಪ್ರಾಯವಿದೆ6 ಪರಿಪಕ್ವತೆ, ಜ್ಞಾನ, ತುಷ್ಟಿಗಳಿಗೆ ಸಂಕೇತವಾಗಿ ನಿಲ್ಲುವ ಸರಸ್ವತಿಯ ಕುರಿತೂ ಕೆಲವು ಋಷ್ಕಗಳು ಋಗ್ವೇದದಲ್ಲಿವೆ. ಅವಳು ಜನರನ್ನು ಶುಚಿಗೊಳಿಸುವವಳು.

5. ಶಂ. ಬಾ. ಜೋಶಿ : ನೋಡು ಆರಾಧನಾ, ೧೯೬೪-೬೫

6. ಶಂ. ಬಾ. ಜೋಶಿ : ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಭಾಗ ೧ ಪು. ೨೨





ಭಕ್ತಾದಿಗಳಿಗೆ ಅನ್ನದಾತೆ. ಮಾನವನ ಪ್ರಿಯವಾದ ಹಾಗೂ ಸತ್ಯನಿಷ್ಠವಾದ ಮಾತುಗಳನ್ನಾಡುವಂತೆ, ಸಜ್ಜನರಿಗೆ ಸತ್ಕರ್ಮವನ್ನೆಸಗಲು ಪ್ರೇರಣೆಯನ್ನು ನೀಡುವವಳು. ಅವಳು ಮಾತೆಯರ ಮಾತೆ, ನದಿಗಳ ನದಿ, ದೇವತೆಗಳ ದೇವತೆ ಎಂದೆಲ್ಲಾ ಅವಳನ್ನು ಬಣ್ಣಿಸಲಾಗಿದೆ. ಸರಸ್ವತಿ ನಾನಾ ದೇವಿಯರ ಸಮುಚ್ಛಯವಾಗಿದ್ದಾಳೆ. ಲಕ್ಷ್ಮಿಯು ಸಂಪತ್ತು ಮತ್ತು ಅಭಿವೃದ್ಧಿಗೆ, ಕಾಳಿಯು ದುಷ್ಟಮರ್ಧನಕ್ಕೆ ಹೆಸರಾದ ಅಂಶ ವೇದಗಳಲ್ಲಿ ನಿರೂಪಿತವಾಗಿದೆ. ಅಲ್ಲಿ ಕೃಷಿಗೆ ಸಂಬಂಧಿಸಿದ ಪ್ರಸ್ತಾಪಗಳಿರುವಲ್ಲಿ ಹೆಚ್ಚಾಗಿ ಸ್ತ್ರೀ ದೇವತೆಗಳ ಸ್ತುತಿಗಳಿವೆ. ಋಗ್ವೇದದಲ್ಲಿ ಕೃಷಿದೇವತೆಯಾದ ಸೀತೆಯನ್ನು[7] ಇಂದ್ರ ಮೊದಲಾದ ದೇವತೆಗಳಿಗೆ ಅಧೀನಳೆಂದು ಚಿತ್ರಿಸಲಾಗಿದೆ. ಹೀಗೆ ವೇದಗಳಲ್ಲಿ ಸ್ತ್ರೀ ದೇವತೆಗಳಿಗೆ ಅಲ್ಲಲ್ಲಿ ಸ್ಥಾನಗಳಿದ್ದರೂ ಪುರುಷದೇವತೆಗಳ ಅನಂತರಿನ ಸ್ಥಾನಗಳಿಗೇ ಅವು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಇಲ್ಲಿ ಮಾತೃದೇವತೆಗಳ ಸ್ಥಾನದಲ್ಲಿ ಸಮರದೇವತೆಯಾದ ಬಲಿಷ್ಠ ಇಂದ್ರನು ವಿಜೃಂಭಿಸಿದ್ದಾನೆ. ವೈದಿಕ ಯಾಗಗಳಲ್ಲಿ ಸ್ತ್ರೀ ದೇವತೆಗಳಿಗೆ ಸೋಮವನ್ನು ಅರ್ಪಿಸುವುದಿಲ್ಲ. ಸ್ತ್ರೀ ದೇವತೆಗಳು ಮಹಾ ದೇವರುಗಳ ಪತ್ನಿಯರಾಗಿಯೂ ಸಹ ಪ್ರಮುಖ ಪಾತ್ರವನ್ನು ನಿರ್ವಹಿಸುವುದಿಲ್ಲ.8 ಅವರಿಗೆ ಸ್ವತಂತ್ರ ಅಸ್ತಿತ್ವವೆನ್ನುವುದು ದ್ರಾವಿಡರ ಮಾರಿ-ಅಮ್ಮನಂತೆ ಇಲ್ಲವೇ ಇಲ್ಲ.

**ಇ. ಶಾಕ್ತ ಮೂಲದ ಆದಿಶಕ್ತಿ - ದುರ್ಗೆ :**

ಪ್ರಪಂಚದ ಸರ್ವ ವ್ಯಾಪಾರಗಳಿಗೂ ಆದಿಶಕ್ತಿಯೇ ಮೂಲ ಕಾರಣಳೆಂದು ಶಾಕ್ತೇಯರು ನಂಬುತ್ತಾರೆ. ಅವರು ಶಕ್ತಿಯನ್ನು ಆದಿಶಕ್ತಿ, ಪರಾಶಕ್ತಿ, ಮಹಾದೇವಿ ಎಂದು ಮುಂತಾಗಿ ಕರೆದು, ಸತ್ವ, ರಜ, ತಮೋ ಗುಣಗಳನ್ನು ಅವಳಲ್ಲಿ ಗುರುತಿಸುತ್ತಾರೆ. ಈ ತ್ರಿಗುಣಾತ್ಮಕ ದೇವಿಯನ್ನು ಧವಲ ವರ್ಣದ, ಸಾತ್ವಿಕ ಗುಣದ ಸರಸ್ವತಿ, ಕೆಂಬಣ್ಣದ ರಜೋಗುಣದ ಲಕ್ಷ್ಮಿ ಹಾಗೂ ಕಪ್ಪುಬಣ್ಣದ ತಮೋಗುಣದ ಕಾಳಿಯ ರೂಪದಲ್ಲಿ ಆರಾಧಿಸುತ್ತಾರೆ. ಈ ದೇವಿಯರ ಹೆಸರಿನ ಮುಂದೆ ಮಹಾ ಎನ್ನುವ ವಿಶೇಷಣವನ್ನು ಜೋಡಿಸಿ, ಮಹಾ ಸರಸ್ವತಿ, ಮಹಾಲಕ್ಷ್ಮಿ, ಮಹಾಕಾಳಿಯೆಂದು ಕರೆದು, ಇವರನ್ನು ಕ್ರಮವಾಗಿ ಬ್ರಹ್ಮ, ವಿಷ್ಣು, ಹಾಗೂ ರುದ್ರರ ಸತಿಯರಂತೆ ಕಾಣದೆ, ಅವರಲ್ಲಿಯ ಶಕ್ತಿಯೆಂದು ಭಾವಿಸುತ್ತಾರೆ ; ದುರ್ಗಾಮಾತೆಯೆಂದು ಪ್ರತ್ಯೇಕವಾಗಿಯೇ ಗಣಿಸುತ್ತಾರೆ.

7. ರಾಮಾಯಣ ಕಾಲದ ಶ್ರೀ ರಾಮಚಂದ್ರನ ಪತ್ನಿಯಲ್ಲ.

8. ಓದು ; ಎನ್. ಗಾಯಿತ್ರಿ : ಮಹಿಳೆ ಬಿಡುಗಡೆಯ ಹಾದಿಯಲ್ಲಿ ಪು. ೧೩ - ೧೪

ಮಹಾಸರಸ್ವತಿಯ ಅದ್ಭುತ ಧೀಮಂತಿಕೆ, ಮಹಾಲಕ್ಷ್ಮಿಯ ಅಪಾರ ಕರುಣೆ, ಮಹಾಕಾಳಿಯ ರುದ್ರಾವೇಶ ಎಲ್ಲವನ್ನೂ ಒಳಗೊಂಡ ಶ್ರೀ ದುರ್ಗಾಮಾತೆಯು, ಭಕ್ತರಿಗೆ ವರದಹಸ್ತೆಯಾಗುತ್ತಾಳೆ; ದೇವತೆಗಳ ವೈರಿಗಳಾದ ದೈತ್ಯರಿಗೆ ಮಹಾಮಾರಿಯಾಗುತ್ತಾಳೆ; ಅಜ್ಞಾನ ಮೌಢ್ಯಗಳ ವೈರಿಯಾಗುತ್ತಾಳೆ; ಧೀರ ಚೇತನರನ್ನು ಉದಾತ್ತರನ್ನು ಕಾಪಾಡುವ ತಾಯಿಯಾಗುತ್ತಾಳೆ. ಯುದ್ಧರಂಗದಲ್ಲಿ ಆವೇಶದಿಂದ ಮುನ್ನುಗ್ಗಿ ವಿಜಯವನ್ನೇ ಕಾಣುವ ಶಕ್ತಿಶಾಲಿಯಿವಳು. ವಿಶ್ವವನ್ನೇ ತನ್ನ ಕ್ರೀಡಾರಂಗವನ್ನಾಗಿ ಮಾಡಿಕೊಂಡ ಇವಳು ಸಚ್ಚಿದಾನಂದ ಸ್ವರೂಪಿಯು. ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳೆಲ್ಲಾ ಇವಳ ವಶವರ್ತಿ. ಶಾಕ್ತ ಆಗಮಗಳಲ್ಲಿ ಇವಳನ್ನು ಕ್ಷೇಮಕಂಠಿ, ರಿಪುಮಾರಿ, ವನದುರ್ಗಿ, ವಿಂಧ್ಯಾವಾಸಿನಿ, ಜಯಮಂಗಳೆ, ವರಸಿದ್ಧಿ, ಹೀಗೆ ವಿಭಿನ್ನ ಹೆಸರುಗಳಿಂದ ಕರೆಯಲಾಗಿದೆ. ಮಹಿಷಾಸುರ ಮರ್ಧಿನಿ, ಕಾತ್ಯಾಯಿನಿ, ಭದ್ರಕಾಳಿ, ಕಾಪಾಲಿ, ಚಂಡಿಕಾ, ರಾಜ ಮಾತಂಗಿ, ಅಂಬಾ, ಉಮಾ ವಿಜಯಾ ಇತ್ಯಾದಿ ಇನ್ನೂ ಅನೇಕ ಹೆಸರುಗಳಿಂದ ಪ್ರಖ್ಯಾತಿಯಿವಳು. ಸಪ್ತಮಾತೃಕೆಯರ ಶಕ್ತಿಗಳು ಈ ರಿಪುಮಾರಿ ದುರ್ಗೆಯಲ್ಲಿ ಅಡಕವಾಗಿವೆ. ದಂಡಿನ ದುರ್ಗೆಯೆಂದು ಕರೆಯಲಾಗುವ, ಅಷ್ಟಭುಜಗಳ, ಸಿಂಹವಾಹನೆಯಾದ ಈ ದೇವತೆ ರಾಜ ಮಹಾರಾಜರ ಆರಾಧ್ಯ ದೇವತೆಯಾಗಿ, ರಾಜರಾಜೇಶ್ವರಿಯೆನಿಸಿಕೊಂಡಿದ್ದಾಳೆ. ದೇವಿ ಪುರಾಣ, ಭಾಗವತ ಪುರಾಣ, ಮಾರ್ಕಾಂಡೇಯ ಪುರಾಣ, ಮುಂತಾದ ಪುರಾಣಗಳಲ್ಲಿ ಈ ಶಕ್ತಿದೇವತೆಯ ಹಿರಿಮೆಗಳನ್ನು ಎತ್ತಿ ಸಾರುವ ಹಲವಾರು ಕಥಾನಕಗಳಿವೆ. ಮಾರ್ಕಾಂಡೇಯ ಪುರಾಣದಲ್ಲಿ "ಶಕ್ತಿದೇವತೆಯು ಸೃಷ್ಟಿ ಮಾಡಲು ಮಹಾಕಾಳಿಯಾಗುತ್ತಾಳೆ; ಸಂಪತ್ತು ನೀಡಲು ಮಹಾಲಕ್ಷ್ಮಿಯಾಗುತ್ತಾಳೆ; ಜ್ಞಾನವನ್ನು ದಯಪಾಲಿಸಲು ಮಹಾಸರಸ್ವತಿಯಾಗುತ್ತಾಳೆ; ಸಂಹಾರಕ್ಕಾಗಿ ಮಹಾ ಮಾರಿಯಾಗುತ್ತಾಳೆ. ಹೀಗೆ ಪರಾಶಕ್ತಿ ಒಂದೇ ಆದರೂ ಅದರಲ್ಲಿ ಅನೇಕ ಶಕ್ತಿಗಳು ಒಟ್ಟಾಗಿವೆ. ಈ ಶಕ್ತಿದೇವತೆಗಳಿಗೆ ಕೆಂಪು ಉಡುಗೆ, ರಕ್ತವರ್ಣದ ಹೂವು ಪ್ರಿಯ. ರಕ್ತಬಲಿ ಇಷ್ಟ.

ಶಕ್ತಿಯ ಪಾರಮ್ಯವನ್ನು ಪ್ರತಿಪಾದಿಸುವ ಶಾಕ್ತ ಮತದ ಪ್ರಭಾವವು ಜೈನ , ಬೌದ್ಧ, ಮತಗಳ ಮೇಲಾದದ್ದನ್ನು ನಾವು ಗುರುತಿಸಬಹುದು. ಶಾಕ್ತ ಮತದ ಉಪಾಸಕರಾದ ಶ್ರೀ ಶಂಕರಾಚಾರ್ಯರ ಕಾಲದಿಂದೀಚೆ, ಕರ್ನಾಟಕದಲ್ಲಿ ಅನೇಕ ಮಾರಿ-ಅಮ್ಮನೇ, ಮೊದಲಾದ ಗ್ರಾಮದೇವತೆಗಳ ಗುಡಿಗಳು ಪರಿವರ್ತನೆಗೊಂಡು ಶಕ್ತಿದೇವತೆಗಳಾದ ಉದಾಹರಣೆಗಳು ಹೇರಳವಾಗಿವೆ. ಅನೇಕ ವೈದಿಕ ಸ್ತ್ರೀ ದೇವತೆಗಳೂ





ಸಹ, ಶಕ್ತಿದೇವತೆಯರಾಗಿಯೇ ಮಾರ್ಪಾಡಾಗಿವೆ. ಇಂದಿನ ನಾಗರಿಕ ಸಮಾಜದಲ್ಲಿ ಮಾರಿ - ಅಮ್ಮ, ಸರಸ್ವತಿ, ಲಕ್ಷ್ಮಿ, ಕಾಳಿ, ಚಂಡಿ ಚಾಮುಂಡಿ, ಮುಂತಾದ ಮಾತೃದೇವತೆಗಳ ಹೆಸರುಗಳು ಒಂದೇ ಶಕ್ತಿ ದೇವತೆಯ ವಿಭಿನ್ನ ಹೆಸರುಗಳೆಂದು ಪರಿಗಣಿತವಾಗಿವೆ. ಇಂಥ ಶಕ್ತಿ ದೇವತೆಯರಿಗೆ ದೊಡ್ಡ ದೊಡ್ಡ ದೇವಾಲಯಗಳಿವೆ. ದೇವತೆಗಳ ಅರ್ಚಕರು ಬ್ರಾಹ್ಮಣರಾಗಿದ್ದು ದೇವತಾರ್ಚನೆಯಲ್ಲಿ ಷೋಡಶೋಪಚಾರಾದಿ ಆಗಮೋಕ್ತ ಉಪಾಸನಾ ವಿಧಿ ವಿಧಾನಗಳು ಸೇರ್ಪಡೆಯಾಗಿವೆ. ಜಾನಪದೀಯ ವಿಧಾನಗಳ ಬಳಕೆ ತೀರ ಕಡಿಮೆ. ಇಂಥ ಶಾಕ್ತ ದೇವಾಲಯಗಳಲ್ಲಿ ನಡೆಯುವ ಪ್ರಮುಖ ಉತ್ಸವವೆಂದರೆ ನವರಾತ್ರಿ. ಆ ಸಮಯದಲ್ಲಿ ಶಕ್ತಿಸ್ವರೂಪಿಣಿಯರಾದ ಮಹಾ ಸರಸ್ವತಿ ಮಹಾಲಕ್ಷ್ಮಿ, ಮಹಾಕಾಳಿಯರನ್ನು ಅಂತೆಯೇ ದಿನಕ್ಕೊಬ್ಬರಂತೆ ನವ ದುರ್ಗೆಯರನ್ನು ಆರಾಧಿಸುತ್ತಾರೆ.

**ಮಾತೃದೇವತೆಗಳ ಸಮನ್ವಯ :**

ಇಂದು ಬ್ರಾಹ್ಮಣೇತರರಲ್ಲಿ ಪ್ರಚಲಿತವಿರುವ ದ್ರಾವಿಡ ಮೂಲದ ಮಾರಿ-ಅಮ್ಮನ ಆರಾಧನೆ, ಆರ್ಯರ ಶಕ್ತಿ-ದುರ್ಗೆಯ ಆರಾಧನೆ ಇವೆರಡೂ ಪ್ರತ್ಯೇಕವಾಗಿಯೇ ಬೆಳೆದುಕೊಂಡ ಆರಾಧನಾ ಪದ್ಧತಿಗಳು, ಎಂಬ ವಾದವನ್ನು ಮಂಡಿಸುವವರೂ ಹಾಗೂ ಇದಕ್ಕೆ ವ್ಯತಿರಿಕ್ತವಾಗಿ ಇವೆರಡೂ ಒಂದೇ ದ್ರಾವಿಡ ಮೂಲದ ಆರಾಧನೆಯಿಂದ ಟಿಸಿಲೊಡೆದವುಗಳು ಎಂಬ ಭಿನ್ನಾಭಿಪ್ರಾಯವನ್ನು ಹೊಂದಿದವರೂ ಇದ್ದಾರೆ. ಮಾತೃದೇವತೆಗಳ ಪ್ರಾಧಾನ್ಯವನ್ನು ಒತ್ತಿ ಹೇಳುವ ಇವೆರಡೂ ಸಂಪ್ರದಾಯಗಳ ಆರಾಧನೆಯ ವಿಧಿ ವಿಧಾನಗಳಲ್ಲಿ ಕೆಲವು ಹೊಡೆದು ಕಾಣುವ ವ್ಯತ್ಯಾಸಗಳಿದ್ದರೂ, ಇವೆರಡೂ ಒಂದೇ ಮೂಲದ ವಿಭಿನ್ನ ಆರಾಧನಾ ಶಾಖೆಗಳು, ಎನ್ನುವುದನ್ನು ಈ ಎರಡೂ ಆರಾಧನಾ ಪದ್ಧತಿಗಳ ಆಳವಾದ ಅಧ್ಯಯನದಿಂದ ಸಾಧಿಸಬಹುದಾಗಿದೆ.

ಪಿತೃಪ್ರಧಾನ್ಯವನ್ನು ಎತ್ತಿ ಹಿಡಿಯುವ ಆರ್ಯರು ಮಾತೃದೇವತೆಗಳಿಗೆ ಅಗ್ರಮಾನ್ಯತೆ ನೀಡುವುದು ಸಂದೇಹಾಸ್ಪದ. ಆದ್ದರಿಂದ ಮಾತೃಪ್ರಧಾನವನ್ನಳವಡಿಸಿಕೊಂಡ , ಉನ್ನತ ಮಟ್ಟದ ಸಂಸ್ಕೃತಿಯನ್ನು ಹೊಂದಿದ ದ್ರಾವಿಡರಿಂದಲೇ ಈ ಉಪಾಸನಾ ಪದ್ಧತಿ ಉಗಮ ಪಡೆದು ವಿಕಾಸ ಹೊಂದಿ, ಆರ್ಯ ವೈದಿಕ ಸಂಸ್ಕೃತಿಯ ಮೇಲೆಯೂ ತನ್ನ ಪ್ರಭಾವದ ಛಾಪನ್ನು ಒತ್ತಿ, ಇಂದು ಆರ್ಯ ದ್ರಾವಿಡವೆಂದು ಗಡಿರೇಖೆಯನ್ನು ಕೊರೆಯಲು ಅಸಾಧ್ಯವಾದ, ಆರ್ಯ- ದ್ರಾವಿಡ ಸಂಸ್ಕೃತಿಗಳ

ಕಲಸುಮೇಲೋಗರವಾದ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಈ ಆರಾಧನಾ ಪದ್ಧತಿ ಧೃಢವಾಗಿ ಬೇರು ಬಿಟ್ಟಿದೆ.

ದ್ರಾವಿಡರ ಮೇಲೆ ಪ್ರಭುತ್ವವನ್ನು ಆರ್ಯರು ಸಾಧಿಸಿದರಾದರೂ, ಅದರ ಉನ್ನತ ಮಟ್ಟದ ಸಂಸ್ಕೃತಿಗೆ ಮಾರುಹೋಗಿ ಅವರಲ್ಲನೇಕರನ್ನು ಆರ್ಯೀಕರಣಗೊಳಿಸಿ, ಸವರ್ಣೀಯರಾಗಿ ತಮ್ಮಲ್ಲಿ ಸೇರಿಸಿಕೊಂಡರು. ಜೊತೆ ಜೊತೆಗೆ ಅವರ ಅನೇಕ ದೇವತೆಗಳನ್ನು ಸಂಸ್ಕರಿಸಿ, ತಮ್ಮಲ್ಲಿಳವಡಿಸಿಕೊಂಡರು. ಬಹುಶಃ ದ್ರಾವಿಡರಕ್ಕಿಂತ ಸ್ವಲ್ಪ ಪೂರ್ವದಲ್ಲಿ ಈ ದೇಶದಲ್ಲಿ ನೆಲೆಸಿ ದ್ರಾವಿಡರ ಜೊತೆಗೆ ಸಾಮರಸ್ಯದ ಬದುಕು ಬಾಳುತ್ತಿದ್ದ ಇಂದು ದಲಿತರೆಂಬ ಹಣೆಪಟ್ಟಿಯನ್ನು ಕಟ್ಟಲಾದ ಆದಿವಾಸಿಗಳನ್ನು ಆರ್ಯದ್ರಾವಿಡರಿಬ್ಬರೂ ಒಟ್ಟಾಗಿ ಅಸ್ಪೃಶ್ಯರೆಂದು ಹೊರಗೆ ತಳ್ಳಿ ಅವರ ದೇವತೆಗಳನ್ನೂ ಊರ ಹೊರಗಟ್ಟಿ ಊರ ಹೊರಗಲಮ್ಮನಾಗಿಸಿರಬೇಕು. ನೆಲೆ ಕಳೆದುಕೊಂಡ ಆದಿವಾಸಿಗಳು ಅಲೆಮಾರಿಗಳಾಗಿ ತಮ್ಮ ದೇವತೆಗಳನ್ನು ಹೊತ್ತು ಮನೆ ಮನೆ ತಿರುಗಿ ಅವಳ ನಾಮ ಬಲದಿಂದ ಜೀವಿಸುವಂತಾಗಿರಬೇಕು.

ಅಬ್ರಾಹ್ಮಣರಾದ ದ್ರಾವಿಡ ವರ್ಗದ ಸವರ್ಣೀಯರ ಸ್ಥಿತಿ ದಲಿತ ಆದಿವಾಸಿಗಳಿಗಿಂತ, ಸ್ವಲ್ಪ ಮಟ್ಟಿಗೆ ಉನ್ನತ ಮಟ್ಟದ್ದಾದರೂ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ರಂಗಗಳಲ್ಲಿ ಅವರ ಸ್ಥಾನಮಾನಗಳು ತೀರ ಕೆಳಮಟ್ಟದಲ್ಲಿದ್ದವು. ಇದರಿಂದಾಗಿ ಅವರ ಗ್ರಾಮದೇವತೆಗಳ ರಚನಾ ವಿನ್ಯಾಸದಲ್ಲಾಗಲಿ, ದೇವತಾರ್ಚನೆಯ ವಿಧಿ ವಿಧಾನಗಳಲ್ಲಾಗಲೀ ಕಣ್ಣು ಕೋರೈಸುವಂತಹ ಥಳಕಿರಲಿಲ್ಲ. ಆಳುವ ವರ್ಗವಾದ ಬ್ರಾಹ್ಮಣರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ. ರಂಗಗಳಲ್ಲಿ ಮೇಲ್ಮೆಯನ್ನು ಸಾಧಿಸಿದವರಾಗಿದ್ದರು. ಆದ್ದರಿಂದ ಆಳಿಸಿಕೊಳ್ಳುವ ಕೆಳವರ್ಗದವರು ಪುರೋಹಿತಶಾಹಿಯ ಪ್ರಭಾವಕ್ಕೊಳಗಾದರು; ಅವರ ಆದರ್ಶ, ಅವರ ಬದುಕಿನ ರೀತಿ ನೀತಿಗಳನ್ನು, ಧಾರ್ಮಿಕ ಆಚರಣೆಗಳನ್ನು ಅನುಕರಿಸುವಲ್ಲಿಯೇ ಬದುಕಿನ ಖುಷಿಯನ್ನು ಕಾಣತೊಡಗಿದರು. ಹೀಗಾಗಿ ಅವರ ಮಾರಿ-ಅಮ್ಮನ ಆರಾಧನೆಯಲ್ಲಿ, ಗುಡಿಯ ರಚನೆಯ ವಿನ್ಯಾಸ ಕ್ರಮದಲ್ಲಿ , ಉಪಾಸನೆಯ ವಿಧಿ ವಿಧಾನಗಳಲ್ಲಿ ಆಗಮೋಕ್ತ ವಿಧಿಗಳ ಪ್ರವೇಶ ಕ್ರಮೇಣ ಆಗ ತೊಡಗಿದವು. ಕೆಲವು ಗ್ರಾಮದೇವತೆಗಳ ಪ್ರಖ್ಯಾತಿ ಸುತ್ತೆಲ್ಲಾ ಪಸರಿಸಿ ಭಕ್ತರ ಸಂಖ್ಯೆ ವರ್ಧಿಸಿ, ದೇವಸ್ಥಾನದ ಸಾಂಪತ್ತಿಕ ಸ್ಥಿತಿ ಹೆಚ್ಚಾದ ಮೇಲೆ ಆ ದೇವತೆಯೆಡೆಗೆ ಬ್ರಾಹ್ಮಣರ ಗಮನ ಹರಿದು , ಅವರು ಆ ದೇವತೆಗಳನ್ನು ಸಂಸ್ಕರಿಸಿ ತಮ್ಮದಾಗಿಸಿಕೊಂಡರು. ಬ್ರಾಹ್ಮಣರ ಹೊಸಬಗೆಯ





ಪೂಜಾ ರೀತಿ ನೀತಿಗಳಿಗೆ, ಅವರ ನಾಯಕತ್ವಕ್ಕೆ ಮಾರು ಹೋದ ಅನೇಕ ಸವರ್ಣೀಯರು ಉಚ್ಚವರ್ಗದ ಬ್ರಾಹ್ಮಣರಿಗೆ ತಮ್ಮ ದೇವತೆಗಳ ಪೌರೋಹಿತ್ಯವನ್ನು , ದೇವಸ್ಥಾನದ ಉಸ್ತುವಾರಿಯನ್ನು ಬಿಟ್ಟುಕೊಟ್ಟು ತೃಪ್ತರಾದರು. ಹೀಗಾಗಿ ಅನೇಕ ಮಾರಿ-ಅಮ್ಮನ ಗುಡಿಗಳು ಪುರೋಹಿತರಿಂದ ಜೀರ್ಣೋದ್ಧಾರವನ್ನು ಪಡೆದವು; ಜೊತೆಯಲ್ಲಿಯೇ ಅನೇಕ ದೇವತೆಗಳ ಹೆಸರುಗಳು ಸಂಸ್ಕಾರಗೊಂಡು ಬದಲಾವಣೆ ಪಡೆದವು; ಗ್ರಾಮದೇವತೆ ಅಮ್ಮ ಶಾಂತಾದುರ್ಗಿಯಾಗಿಯೇ, ಪರಮೇಶ್ವರಿಯಾಗಿಯೋ, ಕಾಡಿಯಮ್ಮ, ಬನಶಂಕರಿಯಾಗಿಯೋ, ಬೆಳಿಯಮ್ಮ ಶ್ವೇತಾಂಬಕೆಯಾಗಿಯೋ ಕಾಳವ್ವ, ಕರಿಯಮ್ಮ, ಮಾಂಕಾಳಿಯರು ಮಹಾಕಾಳಿಯಾಗಿ, ಮರಕೆಯಮ್ಮ, ಮಾರಿಯಮ್ಮ ಮಾರಿಕಾಂಬೆಯಾಗಿ, ಚೌಡಮ್ಮ ಚಾಮುಂಡಿಯಾಗಿ ಪುನರ್ ನಾಮಕರಣಗೊಂಡು ತಮ್ಮ ಶೂದ್ರತ್ವವನ್ನು ಕಳೆದುಕೊಂಡರು.

ಸ್ಥಳೀಯ ಗ್ರಾಮದೇವತೆಗಳ ಮಾರ್ಪಾಟಿನ ತರಾತುರಿಯಲ್ಲಿ ವೈದಿಕ ಪುರೋಹಿತರು ಸ್ಥಳೀಯರ ಜಾನಪದೀಯ ಉಪಾಸನಾ ವಿಧಿ ವಿಧಾನಗಳನ್ನು ಸಂಪೂರ್ಣ ಸದೆ ಬಡಿಯಲಿಲ್ಲ. ಅವರ ದೇವತೆಗಳನ್ನು ಕೆಳಮಟ್ಟದಲ್ಲಿಯೂ ಕಾಣಲಿಲ್ಲ. ಹಾಗಿದ್ದರೆ ವೈದಿಕ ದೇವತೆಗಳಾದ ಇಂದ್ರಾದಿ ದೇವತೆಗಳೇ ಇಂದೂ ಅಸ್ತಿತ್ವದಲ್ಲಿದ್ದು, ಪ್ರಮುಖ ಸ್ಥಾನವನ್ನು ಆಕ್ರಮಿಸುತ್ತಿದ್ದರು. ಹಾಗಂತ ಈ ಪುರೋಹಿತ ವರ್ಗ ಸ್ಥಳೀಯ ಧಾರ್ಮಿಕ ಆಚರಣೆಗಳನ್ನೆಲ್ಲ ಸಂಪೂರ್ಣವಾಗಿ ತಮ್ಮದಾಗಿ ಸ್ವೀಕರಿಸಲೂ ಇಲ್ಲ. ಸ್ಥಳೀಯರ ಮನೋಭಾವನೆಗಳಿಗೆ ನೋವಾಗದಂತೆ ಸ್ಥಳೀಯ ಉಪಾಸನಾ ಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ತಂದರು ; ಜೊತೆಗೇ ಅನೇಕ ಅವೈದಿಕ ಮತೀಯ ಆಚರಣೆಗಳನ್ನು ,ವಿಧಿ ನಿಷೇಧಗಳನ್ನು ಗೌರವಿಸಿ ಸ್ವೀಕರಿಸಿದರು; ತಮ್ಮದಾಗಿಸಿಕೊಂಡರು. ಹೀಗಾಗಿ ಮಾತೃದೇವತೆಗಳ ಆರಾಧನೆಯಲ್ಲಿಯ ವಿಧಿ ವಿಧಾನಗಳೆಲ್ಲ, ಆಗಮಾದಿಗಳಿಂದಲೇ ಸಾರಾಸಗಟಾಗಿ ಬಂದಂಥವುಗಳು ಎನ್ನುವಂತಿಲ್ಲ. ಬುದ್ಧಿವಂತರಾದ ವೈದಿಕ ಶಾಸ್ತ್ರಕಾರರು ದ್ರಾವಿಡರ ಕುಲಾಚಾರ, ಮತೀಯ ಸಂಪ್ರದಾಯಗಳಿಂದಲೂ ಹಲವಾರು ಅಂಶಗಳನ್ನು ಸ್ವೀಕರಿಸಿ, ನಮ್ಮ ನಾಡಿನ, ದೇಶದ ಸಂಕೀರ್ಣ ಸಂಸ್ಕೃತಿಗೆ ಕಾರಣರಾದರು. ಇದಕ್ಕೆ ಉತ್ತರ ಕನ್ನಡ ಜಿಲ್ಲೆಯೂ ಹೊರತಾಗಿಲ್ಲ. ಇಲ್ಲಿಯ ಶಿರಸಿಯ (ಮಾರಿ - ಅಮ್ಮ>ಅಂಬೆ) ಮಾರಿಕಾಂಬೆಯೂ ನಮ್ಮ ಸಮ್ಮಿಶ್ರ ಹಾಗೂ ಸಂಕೀರ್ಣ ಮತೀಯ ಆಚರಣೆಗೆ, ಆರ್ಯ - ದ್ರಾವಿಡ ಸಂಯೋಗ ಸಂಕರಕ್ಕೆ ಹಾಗೂ ನಮ್ಮ ನಾಡಿನ ಸಮನ್ವಯ ಸಂಸ್ಕೃತಿಗೆ ಉತ್ತಮ ನಿದರ್ಶನವಾಗುತ್ತಾಳೆ; ನಮ್ಮ ಸಮ್ಮಿಶ್ರ ಸಂಸ್ಕೃತಿಯ ಶಕ್ತಿದೇವತೆಯ ವಿಕಾಸ ಕ್ರಮಕ್ಕೊಂದು ಮಾದರಿಯೂ ಆಗುತ್ತಾಳೆ.

# ಅಧ್ಯಾಯ ೨

# ಶಿರಸಿಯ ಶ್ರೀ ಮಾರಿಕಾಂಬೆ

## ೧. ಮಾರಿಕಾಂಬೆ

ಶಿರಸಿಯ ಶ್ರೀ ಮಾರಿಕಾಂಬೆ ಕನ್ನಡ ನಾಡಿನ ಪ್ರಮುಖ ಶಕ್ತಿದೇವತೆಗಳಲ್ಲಿ ಒಂದಾಗಿದ್ದು ದಕ್ಷಿಣ ಭಾರತದಲ್ಲಿಯೇ ಪ್ರಖ್ಯಾತಿ ಹೊಂದಿದ್ದಾಳೆ. ಇವಳ ಭಕ್ತ ಸಮೂಹ ಕರ್ನಾಟಕದಲ್ಲಷ್ಟೇ ಅಲ್ಲ ನೆರೆಯ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರದ ಕೊಲ್ಲಾಪುರ ಹಾಗೂ ಮುಂಬಯಿಯವರೆಗೂ ಹರಡಿಕೊಂಡಿದೆ. ಶಿರಸಿಯವರಿಗಂತೂ ಈಕೆಯೇ ಪ್ರಮುಖ ಗ್ರಾಮದೇವತೆಯಾಗಿದ್ದಾಳೆ.

ಸಂತೋಷ ಹಾಗೂ ಸಮೃದ್ಧಿಯ ದೇವತೆಯಾದ ಶ್ರೀ ಮಾರಿಕಾಂಬೆ ಪ್ರಪಂಚದ ರಕ್ಷಕಳೆಂಬ ನಂಬಿಕೆ ಆಕೆಯ ಭಕ್ತಾದಿಗಳದು. ಆದಿಶಕ್ತಿ, ಮಹೇಶ್ವರಿ, ಕಾತ್ಯಾಯಿನಿ, ಜಗದಂಬೆ, ಈಶ್ವರಿ, ಚಾಮುಂಡಿ, ಮಹಿಷಾಸುರ ಮರ್ಧಿನಿ ಮುಂತಾದ ವಿವಿಧ ಹೆಸರುಗಳಿಂದ ಪೂಜೆಗೊಳ್ಳುವ ಈ ದುರ್ಗೆ ಸತ್ವ, ರಜ, ತಮೋಗುಣಗಳ ಸಂಕೇತಗಳಾದ ಮಹಾಸರಸ್ವತಿ, ಮಹಾಲಕ್ಷ್ಮಿ, ಮಹಾಕಾಳಿಯಾಗಿಯೂ ರೂಪಾಂತರಗೊಳ್ಳಬಲ್ಲಳು. ಸಾಂಕ್ರಾಮಿಕ ರೋಗಗಳು, ಕ್ಷಾಮ ಡಾಮರಗಳು, ಸಾವು ನೋವುಗಳು ಸಂಭವಿಸಿದಾಗ ಜಾತಿ ಮತ ಭೇದಗಳಿಲ್ಲದೆ ಸರ್ವರೂ ಈ ದೇವತೆಗೆ ಶರಣಾಗುತ್ತಾರೆ. ಹಳ್ಳಿಯ ಜನಸಾಮಾನ್ಯರು ಈ ದೇವತೆಯನ್ನು ಶಿರಸಿಯಮ್ಮ, ಮಾರಿಯಮ್ಮ, ದುರ್ಗಮ್ಮ, ಶಿವಮ್ಮ, ದೊಡ್ಡಮ್ಮ, ಎಂದು ಮುಂತಾಗಿ ಕರೆದು ತಮ್ಮ ದೈವಾನುಶಕ್ತಿಯನ್ನು ಪ್ರಕಟಿಸುತ್ತಾರೆ. ಈ ದೇವಿ ಜನರನ್ನು ಕಾಡುವ ದುಷ್ಟರು, ಭೂತ ಪಿಶಾಚಿಗಳ ಮೇಲೆ ಕೆರಳಿ, ಮುನಿದು ಮಾರಿಯಾದರೆ ಸಜ್ಜನರ ಭಕ್ತಿಗೆ ಒಲಿದು ಪ್ರೀತಿಯ ರಸಧಾರೆಯನ್ನುಣ್ಣಿಸುವ ಅಮ್ಮನಾಗುತ್ತಾಳೆ. ಶಿರಸಿಯ ಸೀಮೆಗೆ ಗಾಳಿಮಾರಿಯಾಗಿ ಬಂದ ಈಕೆ ಇಂದು ಶಿರಸಿಯ ಶಿವಮ್ಮನಾಗಿ ಭಕ್ತರ ಅಭೀಷ್ಟಗಳನ್ನು ಪೂರೈಸುವ, ಮಹೋನ್ನಾತ ಸಂದರ್ಭಗಳಲ್ಲಿ ರಕ್ಷಿಸುವ ದೇವತೆಯಾಗಿದ್ದಾಳೆ. ಹೀಗೆ ಶ್ರೀ ಮಾರಿಕಾಂಬೆಯಲ್ಲಿ



ಜಾನಪದ ಮಾರಿ-ಅಮ್ಮ ಹಾಗೂ ವೈದಿಕ ಶಕ್ತಿ ದೇವತೆಯ ಸಮನ್ವಯ ಸ್ವರೂಪವನ್ನು ಕಂಡುಕೊಳ್ಳಬಹುದಾಗಿದೆ.

ಸುಮಾರು ಮುನ್ನೂರು ವರ್ಷಗಳ ಹಿಂದೆ ಶ್ರೀ ಮಾರಿಕಾಂಬೆ ಶಿರಸಿಗೆ ಆಗಮಿಸುವ ಪೂರ್ವದಲ್ಲಿ ಮರ್ಕಿ, ದುರ್ಗಿಯರೆಂಬ ಜೋಡು ದೇವತೆಗಳನ್ನು ಶಿರಸಿಯ ಜನ ಆರಾಧಿಸುತ್ತಿದ್ದರು. ಇಂದೂ ಈ ಮರ್ಕಿ ದುರ್ಗಿಯರ ದೇವಾಲಯ ಶಿರಸಿಯಲ್ಲಿದೆ. ಶ್ರೀ ಮಾರಿಕಾಂಬೆಯ ಜಾತ್ರೆಯ ಸಮಯಕ್ಕೆ ಬೇವಿನುಡಿಗೆಯ ಸೇವೆ ನಡೆಯುವುದು ಇವುಗಳ ಸನ್ನಿಧಿಯಲ್ಲಿಯೇ. ಶಿರಸಿಯ ರೈತಾಪಿ ಜನ ಈ ದೇವತೆಗಳಿದ್ದರೂ, ಚಂದ್ರಗುತ್ತಿಯ ರೇಣುಕೆಯನ್ನೇ ತಮ್ಮ ಗ್ರಾಮದೇವತೆಯೆಂದು ಗಣಿಸುತ್ತಿದ್ದರು. ಆಸಾದಿಗಳು ಸುಗ್ಗಿಯ ಕಾಲದಲ್ಲಿ ಮರ್ಕಿದುರ್ಗಿಯರ ಪಡಲಿಗೆಯನ್ನು ಹೊತ್ತು ಊರ ಮೇಲೆ ಸುತ್ತಾಡಿ, ಭಕ್ತರ ಹರಕೆಗಳನ್ನು ಸ್ವೀಕರಿಸಿ, ಅವರಿಗೆ ಶ್ರೀದೇವಿಯ ಭಂಡಾರವನ್ನು ನೀಡುತ್ತಿದ್ದರು. ಇಂದಿನ ಪ್ರಖ್ಯಾತ ಮಾರಿಕಾಂಬೆಯ ವಿಗ್ರಹವಾಗಲಿ ದೇವಾಲಯವಾಗಲಿ ಇರಲಿಲ್ಲ.

## ೨. ಮಾರಿಕಾಂಬೆಯ ಕುರಿತ ಹೇಳಿಕೆ-ಕೇಳಿಕೆಗಳು, ದಾಖಲೆಗಳು :

ಶ್ರೀ ಮಾರಿಕಾಂಬೆ ಶಿರಸಿಗವತರಿಸಿದ ಸಂಗತಿಯನ್ನು ಹೇಳುವ ಹಲವಾರು ವದಂತಿ, ಅಂತೆ ಕಂತೆ, ಪುರಾಣ, ಕೈಫಿಯತ್ತುಗಳು ಕುತೂಹಲಕರವಾಗಿವೆ. ಕೆಲವನ್ನು ಗಮನಿಸಬಹುದು.

### ಅ. ಆಸಾದಿಗಳಲ್ಲಿರುವ ವದಂತಿ :

ಶ್ರೀದೇವಿಯ ಸಂತಾನವೆಂದು ತಮ್ಮನ್ನು ಕರೆದುಕೊಳ್ಳುವ, ಮಾರಿಕಾಂಬೆಯ ಜಾತ್ರೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನಾಡುವ ಆಸಾದಿಗಳು ಚಂದ್ರಗುತ್ತಿಯ ರೇಣುಕೆಗೆ ನಡೆದುಕೊಳ್ಳುತ್ತಾರೆ. ಚಂದ್ರಗುತ್ತಿಯ ಜಾತ್ರೆಯ ಸಮಯದಲ್ಲಿ ಮರ್ಕಿ ದುರ್ಗಿಯರ ಅರ್ಚಕನಾದ ಆಸಾದಿ ಬಸವನು ಚನ್ನಾಪುರ ಸೀಮೆಯ ಭಕ್ತರ ಪರವಾಗಿ ಪಡಲಿಗೆಯನ್ನು ತುಂಬಿಸಿಕೊಂಡು, ತನ್ನ ಒಡನಾಡಿಗಳೊಡನೆ ತಾಯಿ ರೇಣುಕಾಂಬೆಗೆ ಕಾಣಿಕೆಯನ್ನು ಸಮರ್ಪಿಸಲು ಪ್ರತಿ ವರ್ಷ ಹೋಗುವ ಪರಿಪಾಠ. ವರ್ಷದ ಸಂಪ್ರದಾಯದಂತೆ ಚಂದ್ರಗುತ್ತಿಯ ಜಾತ್ರೆಗೆ ಆತ ಹೋಗುವಾಗ ಚಂದ್ರಗುತ್ತಿಯ ಜನ ಜಗಳವನ್ನೆಬ್ಬಿಸಿ ಅವನನ್ನು ತಡೆದು ಅವನಿಗೆ ತೊಂದರೆಯನ್ನುಂಟು ಮಾಡಿದರು. ಇದರಿಂದ ಆಸಾದಿಯ ಬಸವ ಹಾಗೂ ಚನ್ನಾಪುರ (ಶಿರಸಿ)ಸೀಮೆಯ ಜನ ಕುಪಿತರಾದರು. ಆಸಾದಿ ಬಸವನು ಅಂದಿನಿಂದ

ಚಂದ್ರಗುತ್ತಿಯ ಜಾತ್ರೆಗೆ ಹೋಗದೆ ಶಿರಸಿಯಲ್ಲಿಯೇ ಉಳಿದುಕೊಂಡು ಶ್ರೀದೇವಿಯನ್ನು ನೆನೆಸಿಕೊಂಡನು. ಅಂದು ರಾತ್ರಿ ಆತ ಸ್ವಪ್ನವೊಂದನ್ನು ಕಂಡು ಸ್ವಪ್ನದಲ್ಲಿ ಹೆಣ್ಣು ಧ್ವನಿಯೊಂದು "ಬಸವಾ ನಾನು ದ್ಯಾಮವ್ವ ನಿನ್ನ ನೋವಿನ ಕರೆಗೆ ಓಗೊಟ್ಟು ಬಂದು ಕೆರೆಯಲ್ಲಿ ನೆಲೆಸಿದ್ದೇನೆ. ನೀನು ಕೆರೆಯೆಡೆಗೆ ಬಂದು ಆಯ್ದು ಸುತ್ತುತಿರುಗಿ ಅಮ್ಮ ಬಾ ಎಂದರೆ ನಾನು ಬಂದು ಬಿಡುತ್ತೇನೆ. " ಎಂದಂತಾಯ್ತು. ಈ ಮಾತಿನಿಂದ ಉತ್ತೇಜಿತನಾದ ಬಸವನು , ಈ ಸಮಾಚಾರವನ್ನು ನಾಡಿಗರಿಗೆ - ಊರ ಗೌಡರಿಗೆ ವಿವರಿಸಿ ಹೇಳಿದ. ಆಗ ಊರಿನ ಪ್ರಮುಖರು, ಜನಸಾಮಾನ್ಯರೆಲ್ಲಾ ಆಸಾದಿ ಬಸವನ ಕನಸನ್ನು ಪರೀಕ್ಷಿಸಲು ಕೆರೆಯೆಡೆ ನೆರೆದರು. ಬಸವ ಕೆರೆಯನ್ನು ಪೂಜಿಸಿ ಆಯ್ದು ಪ್ರದಕ್ಷಣೆಯನ್ನು ಹಾಕಿ ದೇವಿಯನ್ನು ಭಕ್ತಿಯಿಂದ, " ಅಮ್ಮಾ ನೀನು ಕೆರೆಯಲ್ಲಿದ್ದರೆ, ನಿನ್ನ ಕುರಹುದೋರು" ಎಂದು ಭಕ್ತಿಯಿಂದ ಕೈಮುಗಿದಾಗ, ಕೆರೆಯ ಮಧ್ಯದಲ್ಲಿ ಉರಿಯುವ ಧೂಪದ ಹೊಗೆಯಿಂದ ಅವೃತ್ತವಾದ ತೇಲುವ ಪೆಟ್ಟಿಗೆಯೊಂದು ಗೋಚರಿಸಿತು. ಆ ಪೆಟ್ಟಿಗೆಯನ್ನು ತಂದು ಮುಚ್ಚಳವನ್ನು ತೆಗೆದು ನೋಡಲಾಗಿ ಅದರಲ್ಲಿ ದೇವಿಯ ಅಂಗಾಂಗಗಳು ಕಂಡವು. ಅವನ್ನೆಲ್ಲ ಸಕ್ರಮವಾಗಿ ಜೋಡಿಸಲಾಗಿ ಸುಂದರ ಶ್ರೀದೇವಿಯ ಮೂರ್ತಿಯಾದುದನ್ನು ಕಂಡು ಹರ್ಷಚಕಿತರಾದರು. ಹೀಗೆ ಶ್ರೀದೇವಿ ಶಿರಸಿಗೆ ಕೆರೆಯಿಂದವತರಿಸಿ ಬಂದುದನ್ನು ತಮ್ಮ ಹಾಡುಗಳಲ್ಲಿ ಸ್ತುತಿಸಿದ್ದಾರೆ.

*ಕೆರೆಯಲ್ಲಿ ಹುಟ್ಟಿದ್ಯೆಮ್ಮ ಕೆರೆಯಲ್ಲಿ ಬೆಳೆದ್ಯೆಮ್ಮ*

ಧರೆಗೆ ವರವ ತೋರಿದಂಥ ವರಮೂರ್ತಿ ತಾಯೆ ಬಾರ ಬಾರಮ್ಮಾ ಈ ಕಥೆ ಬಸವನ ಆರ್ತ ಮೊರೆಗೆ, ಶ್ರೀ ದೇವಿ ಓಗೊಟ್ಟು ಶಿರಸಿಗೆ ಬಂದುದನ್ನು ತಿಳಿಸುತ್ತದೆ.

**ಆ. ಹಾನಗಲ್ಲಿಂದ ಶಿರಸಿಗೆ ಬಂದವಳು :**

i ಪುರಾಣ ಪ್ರಸಿದ್ಧವಾದ ಹಾನಗಲ್ಲಿನಿಂದ ಶ್ರೀ ದೇವಿ ಶಿರಸಿಗೆ ಬಂದಳೆಂದು ವದಂತಿಗಳಿವೆ. ಹಾನಗಲ್ಲು ಮಹಾಭಾರತ ಕಾಲದ ವಿರಾಟನಗರವೆಂದು ಊಹಿಸುತ್ತಾರೆ. ವಿರಾಟನಗರದ ಹೊರಗೆ ನಗರಾರಂಭದಲ್ಲಿರುವ ಒಂದು ದುರ್ಗಿಯನ್ನು ಪಾಂಡವರು ತಮ್ಮ ಅಜ್ಞಾತವಾಸವನ್ನು ಕಳೆಯಲು ವಿರಾಟನಗರಕ್ಕೆ ಬಂದಾಗ ಸ್ತುತಿಸಿದ ಪ್ರಸ್ತಾಪ ಮಹಾಭಾರತದಲ್ಲಿ ಇದೆ.

*ವಿರಾಟ ನಗರಂ ರಮ್ಯಂ ಗಚ್ಛಮಾನೋ ಯುಧಿಷ್ಠಿರಃ*
*ಅಸ್ತುವನ್ ಮನಸಾ ದೇವೀಂ ದುರ್ಗಾಂ ತ್ರಿಭುವನೇಶ್ವರೀಂ*





ಎಂದು ಮುಂತಾಗಿ ಹತ್ತಿಪ್ಪತ್ತು ಶ್ಲೋಕಗಳಲ್ಲಿ ದೇವಿಯನ್ನು ಸ್ತುತಿಸಲಾಗಿದೆ. ಹಾನಗಲ್ಲಿನಲ್ಲಿ ಇಂದೂ ಕೂಡ ದ್ಯಾಮವ್ವನೆಂದು ಕರೆಯಲಾಗುವ ಈ ದೇವತೆಗೆ ಅದ್ದೂರಿಯ ಜಾತ್ರೆಯಾಗುತ್ತದೆ. ಹಾನಗಲ್ಲಿನ ಜಾತ್ರೆ ಮುಗಿದ ಮೇಲೆ ಮರದಿಂದ ತಯಾರಿಸಿದ ಶ್ರೀ ದೇವಿಯ ಮೂರ್ತಿಯ ಅಂಗಾಂಗಗಳನ್ನು ಕಳಚಿ ಪೆಟ್ಟಿಗೆಯಲ್ಲಿಟ್ಟು ಅಲ್ಲಿಯೇ ಶ್ರೀದೇವಿಯ ಆಭರಣಗಳನ್ನು ತುಂಬಿ ಬೀಗ ಮುದ್ರೆಯನ್ನು ಹಾಕಿಡಲಾಗಿತ್ತು. ಅದನ್ನು ಕಳ್ಳರು ಅಪಹರಿಸಿ ಶಿರಸಿಗೆ ತಂದು, ಪೆಟ್ಟಿಗೆಯಲ್ಲಿಯ ಆಭರಣಗಳನ್ನು ದೋಚಿ ತಮ್ಮಲ್ಲಿ ಹಂಚಿಕೊಂಡು, ದೇವಿಯ ಅಂಗಾಂಗಗಳುಳ್ಳ ಪೆಟ್ಟಿಗೆಯನ್ನು ಕೆರೆಯಲ್ಲೊಗೆದು ಪರಾರಿಯಾದರು. ಶ್ರೀದೇವಿ ಹಾನಗಲ್ಲಿನಿಂದ ಶಿರಸಿಗೆ ಬಂದದ್ದು ಈ ರೀತಿ. ಶ್ರೀದೇವಿ ದೊರಕಿದ ಕೆರೆಗೆ ಕೋಟೆ ಕೆರೆ ಬಸೆಟ್ಟಿ ಕೆರೆಯೆಂದು ಕರೆಯುತ್ತಾರೆ.

ii ಮೇಲಿನ ವದಂತಿಗೆ ಪೂರಕವಾಗುವ ರೀತಿಯಲ್ಲಿ ಇನ್ನೊಂದು ಹೇಳಿಕೆ ಇದೆ: ಹಾನಗಲ್ಲಿನಿಂದ ಕಳ್ಳರ ತಂಡವೊಂದು ಆಭರಣಗಳ ಪೆಟ್ಟಿಗೆಯೆಂದು, ದೇವಿಯ ಅಂಗಾಂಗಗಳಿಂದ ತುಂಬಿದ ಪೆಟ್ಟಿಗೆಯೊಂದನ್ನು ತಂದು ಅದರಲ್ಲಿ ಆಭರಣಗಳು ಸಿಗದೆ ನಿರಾಶರಾಗಿ ಅದನ್ನು ಬಸೆಟ್ಟಿ ಕೆರೆಯಲ್ಲಿ ಒಗೆದರು. ಈ ಕೆರೆಯ ಪಕ್ಕದಲ್ಲಿಯೇ ಗಾಳಿ ಮಾರಿ(ಮಾಸ್ತಿ) ಕಟ್ಟೆ , ಹಾಗೂ ಗಾಳಿ ಮಾರಿಯ ಶಿಲಾ ವಿಗ್ರಹವಿದೆ. ಇಲ್ಲಿಂದಲೇ ಶ್ರೀದೇವಿಯ ಮೂರ್ತಿಯನ್ನು ಹನುಮಂತಾಚಾರಿ ತನ್ನ ಮನೆಗೊಯ್ದು, ಅನಂತರ ಅದನ್ನು ಬಿಡಕೀಬೈಲ್ ರುದ್ರಪ್ಪನಿಂದ ಜಾಗವನ್ನು ತೆಗೆದುಕೊಂಡು ಮೂರ್ತಿ ಸ್ಥಾಪನೆಮಾಡಿದನೆಂಬ ಹೇಳಿಕೆಯಿದೆ. ಶ್ರೀ ಮಾರಿಕಾಂಬೆಯ ಜಾತ್ರೆಯ ಸಮಯದಲ್ಲಿ ಬಾಬ್‌ದಾರರೆಲ್ಲಾ ಅಲ್ಲಿಗೆ ಹೋಗಿ ಪೂಜೆಯನ್ನು ಸಲ್ಲಿಸುವುದಿದೆ. ಕೆಲವರು ದೇವಿಯ ಅಂಗಾಂಗಗಳು ತುಂಬಿದ ಪೆಟ್ಟಿಗೆ ದೊರಕಿದ್ದು ದೇವಿಕೆರೆಯೆಂದೂ' ಹೇಳುತ್ತಾರೆ. ಆದರೆ ದೇವಿ ಕೆರೆಯ ಹತ್ತಿರ ಶ್ರೀ ಮಾರಿಕಾಂಬೆಯ ಜಾತ್ರೆಯ ಕಾಲಕ್ಕೆ ಯಾವ ಕಾರ್ಯಕ್ರಮಗಳು ನಡೆಯುವುದಿಲ್ಲ. ಈ ಕೆರೆಗೂ ಶ್ರೀದೇವಿಗೂ 'ದೇವಿ'ಎಂಬ ಹೆಸರಿನ ಸಾದೃಶ್ಯವನ್ನು ಬಿಟ್ಟರೆ ಯಾವ ಸಂಬಂಧವೂ ಇಲ್ಲ.

iii ಶ್ರೀ ಮಾರಿಕಾಂಬೆಯನ್ನು ಕುರಿತಾಗಿರುವ ಇನ್ನೊಂದು ದಾಖಲೆ ಹೀಗಿದೆ: ಒಮ್ಮೆ ಮರ್ಕೆಮ್ಮ ದುರ್ಗಮ್ಮರ ಪಡಲಿಗೆಯನ್ನು ಹೊತ್ತು ಶಿರಸಿಯ

1. ಈ ಕೆರೆಯನ್ನು ಸೋಂದಾ ರಾಜನೊಬ್ಬನ ಪ್ರೇಯಸಿ 'ದೇವಿ' ಎನ್ನುವವಳು ಕಟ್ಟಿಸಿದ್ದು ಎನ್ನುತ್ತಾರೆ. ಈ ಕೆರೆಯ ಪಕ್ಕದಲ್ಲೇ ಇತಿಹಾಸ ಪ್ರಸಿದ್ಧ ಮುಸ್ಕಿನ ಬಾವಿಯೂ ಇದೆ.

ಬಸವನೆಂಬ ಅರ್ಚಕನು ರೈತರೆಡೆ ಹೋಗುವಾಗ ಚಂದ್ರಗುತ್ತಿಯವರು ಅವನನ್ನು ತರುಬಿದರು. ಇದರಿಂದ ಕೆರಳಿದ ಶಿರಸಿ ಸೀಮೆಯವರು ತಮ್ಮ ಸೀಮೆಗೇ ಪ್ರತ್ಯೇಕವಾದ ಇನ್ನೊಂದು ಗ್ರಾಮದೇವತೆಯನ್ನು ಸ್ಥಾಪಿಸಲು ಸ್ವಾದಿಯ ನಂದಿಕೇಶ್ವರ ಸ್ವಾಮಿಗಳ ಹಿರಿತನದಲ್ಲಿ ಇಮ್ಮಡಿ ಸದಾಶಿವರಾಯನೆಡೆಗೆ ನಿಯೋಗ ಹೊರಟು, ಮನವಿಯನ್ನು ಸಲ್ಲಿಸಿ, ಅವನ ಅಪ್ಪಣೆಯ ಮೇರೆಗೆ ಮಾರಿಕಾಂಬೆಯನ್ನು ಶಿರಸಿಯ ದುರಗಿ ಶ್ಮಶಾನದ ಎದುರಿನ ನಾಗರಗುತ್ತಿ ಪಾರ್ಶ್ವದಲ್ಲಿ ಪ್ರತಿಷ್ಠಾಪಿಸಿದರು.[2] ಅವರಿಗೆ ಶ್ರೀದೇವಿಯ ವಿಗ್ರಹ ಲಭ್ಯವಾದ ಕಥೆ ಇಂತಿದೆ: ಭಕ್ತನೊಬ್ಬನ ಕನಸಿನಲ್ಲಿ ಶ್ರೀಮಾರಿಕಾಂಬೆ ಕಾಣಿಸಿಕೊಂಡು ತನ್ನ ಕುರುಹು ಊರ ಹೊರಗಿನ ಕೆರೆಯಲ್ಲಿರುವುದಾಗಿಯೂ ಅದನ್ನು ತಂದು ಪ್ರತಿಷ್ಠಾಪಿಸಿ ಪೂಜಿಸಿದಲ್ಲಿ ಊರಿಗೆ ಹಿತವಾಗುವುದೆಂದು ತಿಳಿಸಿದಳಂತೆ. ದೇವಿಯ ಆದೇಶದಂತೆ ಕೆರೆಯನ್ನು ಶೋಧಿಸಿದಾಗ ಶ್ರೀ ಮಾರಿಕಾಂಬೆಯ ಅಂಗಾಂಗಗಳಿಂದ ತುಂಬಿದ ಪೆಟ್ಟಿಗೆ ಸಿಕ್ಕಿತಂತೆ. ಈ ಪೆಟ್ಟಿಗೆ ಹಾನಗಲ್ಲಿನ ಜಾತ್ರೆಯ ನಂತರ ದರೋಡೆಖೋರರು ಅಪಹರಿಸಿ ತಂದ ಪೆಟ್ಟಿಗೆಯಾಗಿತ್ತಂತೆ. ಪೆಟ್ಟಿಗೆಯಲ್ಲಿದ್ದ ಶ್ರೀದೇವಿಯ ಅಂಗಾಂಗಗಳನ್ನು ಜೋಡಿಸಿ, ಶಾಲಿವಾಹನ ಶಕೆ ೧೬೧೧ ಶುಕ್ಲ ಸಂವತ್ಸರ ವೈಶಾಖ ಶುದ್ಧ ಅಷ್ಟಮಿಯದಿನ ಶ್ರೀ ಮಾರಿಕಾಂಬೆಯನ್ನು ಪ್ರತಿಷ್ಠಾಪನೆ ಮಾಡಿದರು. ಈ ಐತಿಹ್ಯದಂತೆ ಹಾಗೂ ಹಿಂದೆ ಹೇಳಿದ ವದಂತಿಗಳ ಪ್ರಕಾರ ಇಂದು ಪೂಜೆಗೊಳ್ಳುವ ಶ್ರೀ ಮಾರಿಕಾಂಬೆ ಹಾನಗಲ್ಲಿನಿಂದ ಶಿರಸಿಗೆ ವಲಸೆ ಬಂದವಳು. ಇದನ್ನು ದೃಢೀಕರಿಸಲು ಇಂದಿಗೂ ಹಾನಗಲ್ಲಿನ ಹಾವಳಿ ಹನುಮಂತ ದೇವರ ಗುಡಿಯ ಹತ್ತಿರ ಶಿರಸಿಯಮ್ಮನ ಪಾದಗಟ್ಟೆಯಿದೆ. ಹಾನಗಲ್ಲಿನ ದ್ಯಾಮವ್ವನ ಜಾತ್ರೆಯಲ್ಲಿ ದ್ಯಾಮವ್ವನಿಗೆ ಬಲಿ ಸಮರ್ಪಣೆಯಾದ ಮೇಲೆ ಶಿರಸಿಯಮ್ಮನ ಪಾದಗಟ್ಟೆಗೆ ಬಲಿಕೊಡುವ ಸಂಪ್ರದಾಯವಿದೆ.[3]

ಒಂದು ಕಾಲಕ್ಕೆ ಗುತ್ತೀ ಸೀಮೆಯ ಆಡಳಿತಕ್ಕೊಳಪಟ್ಟ ಶಿರಸಿ, ಆ ಆಡಳಿತದಿಂದ ಪ್ರತ್ಯೇಕಗೊಂಡಾಗ, ಗುತ್ತೀ ಸೀಮೆಯ ಜನ, ಶಿರಸಿಯವರು ಗುತ್ತಿಯ ರೇಣುಕಮ್ಮನಿಗೆ ಭಕ್ತಿಯಿಂದ ನಡೆಕೊಳ್ಳುವುದನ್ನು ನಿಷೇಧಿಸಿ, ಆಸಾದಿ ಬಸವನು ಪಡಲಿಗೆ ಹೊತ್ತು ಗುತ್ತೀ ಸೀಮೆಯಲ್ಲಿಯೂ ಶ್ರೀದೇವಿಯ ಕಾಣಿಕೆಯನ್ನು ಆಕರಿಸುವುದನ್ನು ತಡೆದಿರುವಂತಿದೆ. ಅದಕ್ಕಾಗಿ ಗುತ್ತೀಸೀಮೆಯಿಂದ ಪ್ರತ್ಯೇಕಗೊಂಡ ಶಿರಸಿ

---

2 Gopalkrishna Hegde : Shree Marikamba of Sirsi P.5

3 ಮಾಹಿತಿ ಒದಗಿಸಿದ ಶ್ರೀ .ವೆಂ. ಶ್ರೀ. ಕಲ್ಲಾಪುರ ಹಾನಗಲ್ಲು ಇವರಿಗೆ ಋಣಿ.





ಸೀಮೆಯವರಿಗೆ ಪ್ರತ್ಯೇಕ ಗ್ರಾಮದೇವತೆಯೊಂದನ್ನು ಗುತ್ಯಮ್ಮನ ಹೆಸರಿನಲ್ಲಿ ಸ್ಥಾಪಿಸಿಕೊಳ್ಳುವ ಅನಿವಾರ್ಯತೆ ಯುಂಟಾಗಿ ಶ್ರೀ ಮಾರಿಕಾಂಬೆಯ ಪ್ರತಿಷ್ಠಾಪನೆಯು ಅಂದಿನ ಶಿರಸಿ ಸೀಮೆಯ ಪ್ರಭುವಾದ ಸ್ವಾದಿಯ ಅರಸು ಎರಡನೆಯ ಸದಾಶಿವರಾಯನ ಅಪ್ಪಣೆಯ ಮೇರೆಗೆ ನಡೆದಿರಬೇಕು. ಹೀಗೆ ಮಾರಿಕಾಂಬೆಯ ಪ್ರತಿಷ್ಠಾಪನೆಗೆ ಒಂದು ಐತಿಹಾಸಿಕ ಹಿನ್ನೆಲೆಯೂ ಇದ್ದಂತಿದೆ. ಜಾನಪದರು ಇಂದೂ ಮಾರಿಕಾಂಬೆಯನ್ನು ರೇಣುಕೆಯೆಂದು ಪರಿಗ್ರಹಿಸುತ್ತಾರೆ.

**೯. ಶ್ರೀ ಮಾರಿದೇವಿಯ ಸ್ಥಳದ ಕೈ ಪೈಕಿ ನಕ್ಲು :**

ಸನ್ 1868ನೇ ಇಸವಿಯ ಜೂನ್ ತಿಂಗಳ ತಾರೀಕ 5ರಲ್ಲು ಶ್ರೀ ಮಾರಿದೇವರ ಕಾಗದ ಪತ್ರಗಳ ಜೀರ್ಣಾವಶೇಷಗಳನ್ನು ಒಂದುಗೂಡಿಸಿ ಭೂತಗನ್ನಡಿಯ ಸಹಾಯದಿಂದ ಓದಿಕೊಂಡು ಕೇಳಿ ಬರೆಸಿದ ಪ್ರತಿಯು:

ಶ್ರೀ ಶಾಲಿವಾಹನ ಶಕೆ 1611 ನೇ ಶುಕ್ಲ ಸಂವತ್ಸರದ ವೈಶಾಖ ಶುದ್ಧ 8 ಮಂಗಳವಾರ ಶ್ರೀದೇವಿಯ ಪ್ರತಿಷ್ಠೆ ವಗೈರೆ ಕಾರ್ಯ ಪರತರಣೆಯಲ್ಲು. ಚನ್ನಾಪುರದ ಸೀಮೆಯಲ್ಲಿ ಪರಶುರಾಮನ ಹೆಸರು ಹೇಳಿ ಬಸವಾ ಪಡಲಗಿ ಹೊತ್ತು ತಿರುಗುವರೆ ಗುತ್ತಿ ಸೀಮೆಯವರು ಹರಕತ್ತು ಮಾಡಿದ್ದಕ್ಕೆ, ಮಚಗಾರು, ಚಲುವಾದಿರುಗಳ, ಗುರುಮಠದವರ ಅಪ್ಪಣೆ ಪಡೆದು ಮೂರ್ಧಾಪುರ ಎಂಬ ಹೆಸರಿನ ಶಿರಸಿಯಲ್ಲಿ ದುರಗಿ ಸ್ಮಶಾನದಲ್ಲಿ ಎದುರಿನ ನಾಗರಗುತ್ತಿ ಪಾರ್ಶ್ವದಲ್ಲಿ ಶ್ರೀ ದೇವಿಯನ್ನು ಕುಂದರಿಸಿ , ದೈವದವರು ನಂದಿಕೇಶ್ವರ ಮಠದ ಸ್ವಾಮಿಗಳ ನಿರೂಪಣೆ ಕೆಳಗಿನ ಮನೆಗೌಡರು, ಮೇಲಿನ ಮನೆಗೌಡರು, ಕಟ್ಟೆಮನೆ ಗೌಡರು, ಗೋಲಗೇರಿ ಮಂಜಗೌಡರು, ಹೇಮಶೆಟ್ಟಿ, ಮಡಿವಾಳಪ್ಪಸೆಟ್ಟರು, ಕುಂಬಾರಗುಂಡಪ್ಪನವರು, ಎಸಳೇ ಮೇದಾರ ಭಿರಮಪ್ಪನವರು, ನಗರದ ಮಾದೇವ ಸೆಟ್ಟರು, ಬಿಡಕಿಬೈಲ ಮೈದುರಗಿ ಮಠದ ದುರದುಂಡಿ ಸ್ವಾಮಿಗಳು ಇವರುಗಳೆಲ್ಲ ಸ್ವಾದಿ ಮಹಾಸಂಸ್ಥಾನಕ್ಕೆ ನಿರೂಪ ಕಳ್ಸಿ ಅಪ್ಪಣೆಗೊಂಡು ಶ್ರೀದೇವಿಯ ನಿರುಮಾತ್ರಣಕ್ಕೆ ಮುಂದಾದವರ ವಂತಿಗೆಯ ತಪಶೀಲು:-

ಮೇಲಿನ ಮನೆ ಗೌಡರು ವರಾಹಾ 2 ಕೆಳಗಿನ ಮನೆಗೌಡರು ವರಾಹಾ 2 ಸಿದ್ದೆಗೌಡರು ವರಾಹಾ 1 ಹೇಮಶೆಟ್ಟರು ವರಾಹಾ 1 ಕಟ್ಟೆ, ಮಂಜಗೌಡರು ವರಾಹಾ 1 ಕುಂಬಾರಗುಂಡಪ್ಪನವರು ವರಾಹಾ 1 ಕುಮಟಾ ಅರಳೇ ಸಾವಕಾರರು ವರಾಹಾ 1 ಮೇದಾರ ಭರಮಪ್ಪನವರು ಎಸಳೆ ವರಾಹಾ 1 ಶಾರೋಬಿ ನಾಗಣ್ಣಾ

ವರಾಹಾ 1 ಹುಸರಿ ಬಸವಣ್ಣ ವರಾಹಾ 1 ನಗರದ ಮಹದೇವ ಶೆಟ್ಟರು ವರಾಹಾ1 ಬ್ಯಾಡರ ಜೋಗತೇರು ವರಾಹಾ 1 ಚಲವಾದಿ ಜೋಗತೇರು ವರಾಹಾ 1 ಮೇತ್ರಿ ಜೋಗತೇರು ವರಾಹಾ 1 ಚನ್ನಯ್ಯ ಜಾತೇರ ಜೋಗತೇರು ವರಾಹಾ 1 ಗವಳಿ ಭರಮಪ್ಪ ವರಾಹಾ 1 ಬಡಿಗೇರ ಮಂಜ ವರಾಹಾ 1 ಚಮಗಾರ ಗೌಡರ ಬುದವಂತರು ವರ್ಗಣಿ ಮಾಡಿ ತಂದ ವರಾಹಾ 1 ಅಗ್ಸಾಲ ಮಾರೆಪ್ಪ ವರಾಹಾ! ಮತ್ತು ಶಿರಸಿ, ಬಚಗಾಂವಿ, ಬಸಳೆ ಕೊಪ್ಪ, ಬದ್ರಾಪುರ, ಗೋಣೂರು, ಗೋಕಣಾಪುರ ಬೆಳಗಾಲಪುರ, ಬಾಳೆಗದ್ದೆ, ವಗ್ಯೆರೆ ಹಳ್ಳಿಗಳಿಂದ ಬಂದ ವರ್ಗಣಿ ವರಾಹಾ 10 ಕೊರಗರ ಸಿದ್ದಾ ಪೀರಾ ದುಡ್ಡ 2 ಉಪ್ಪಾರ ದೇವಪ್ಪ ದುಡ್ಡು 2 ಆಚಾರಿ ಲಿಂಗಪ್ಪ ದುಡ್ಡು 2ಇ ಶಿವ್ವಾ ಎಲ್ಲಾ ಗ್ರಾಮದವರಿಂದ ವಸೂಲಿ ಬಂದ ವಟ್ಟು ಅಕ್ಕಿ ಖಂಡುಗ 10, ಇವಿಷ್ಟು ಜಮೆ ಬಂದಿದ್ದು ಮೇಲಿನ ಮನೆ ಪಟೇಲ ಪೇಟೆಗೌಡರು, ಅಗ್ಸಾಲ ಮಾರೆಪ್ಪ, ಬಡಿಗೇರ, ಕಸಬೆಗೌಡರು ಬಸಪ್ಪಗೌಡರು ಬಳಿಗೆ ಶ್ರೀದೇವಿಯ ವಿನಿಯೋಗದ ಬಗ್ಗೆ ಕೊಟ್ಟಿತು.[4] ಇಲ್ಲಿ ಶ್ರೀದೇವಿಯ ಪ್ರತಿಷ್ಠಾಪನೆಗೆ ಜಾತಿಮತ ಭೇದವಿಲ್ಲದೆ ಎರಡು ವರಹ ಕೊಟ್ಟವರಿಂದ ಹಿಡಿದು ಎರಡು ದುಡ್ಡು ಕೊಟ್ಟವರ ಹೆಸರಿನ ಉಲ್ಲೇಖವಾಗಿರುವುದು ಗಮನಾರ್ಹ.

**ಈ. ಶಿರಸಿ ಮಾರ್ಯಮ್ಮ ದೇವರ ಕೈಫಿಯಯತ್ತು :**

ಶಿರಸಿಯಲ್ಲಿ ಶ್ರೀ ಮಾರಿಕಾಂಬೆಯ ಸ್ಥಾಪನೆಯನ್ನು ಕುರಿತು ಮೆಕೆನ್‌ಜೀ ಸಂಗ್ರಹದಲ್ಲಿ ನಮೂದಿಸಲಾದ ಶಿರಸಿ ಮಾರ್ಯಮ್ಮ ದೇವರ ಕೈಫಿಯಯತ್ತು ಕೆಳಗಿನಂತಿದೆ:

ಪ್ರಾಕು ಮೊಗಲರ ಅವಾಂತ್ರದಲ್ಲು ಅವರ ದಂಡು ಬಂದು ಬಂಕಾಪುರದ ಕಿಲ್ಲೇಗೆ ಮುತ್ತಿಗೆ ಹಾಕಿ ಯುದ್ಧಾಮಾಡಿ ಕಿಲ್ಲೆ ಠಾಣ್ಯೆ ಹಾಕಿದರು. ಆಮೇಲೆ ಕಿಲ್ಲೇದಲ್ಲು ಗುಳ್ಯಾಕೆಯಿದ್ಧ ಜನರೆಲ್ಲಾ ನಿಮ್ಮ ನಿಮ್ಮ ಸಾಮಾನು ಯೇನು ಯಿದ್ದದ್ದು ತೆಕ್ಕೊಂಡು ಗಡಿಪಾರು ಆಗಿ ಹೋಗಿಯಂತಾ ಅಪ್ಪಣೆ ಕೊಟ್ಟರಂತೆ. ಆಗ್ಯೆ ಗುಳ್ಯಾದ ಜನರೆಲ್ಲ ಕಿಲ್ಲೇದಿಂದ ಹೊರಟು ಬರುವಾಗ್ಯೆ ಆ ಸ್ಥಳದಲ್ಲೂ ಪ್ರಾಕಾರಭ್ಯ ಮಾರಿ ದೇವರು ಯಿತ್ತು. ಆ ದೇವರ ಯಿಳಿಶಿ ಪೆಟ್ಟಿಗೆಯಲ್ಲು ಹಾಕಿ ಕಟ್ಟಿ ಅರಗಿನ ಮುದ್ರೆ ಹಾಕಿಯಿಟ್ಟಂತಾ ಪೆಟ್ಟಿಗೆಯನ್ನು ಕೋಟೆವೊಳಗಿಂದಾ ಹೊರಟು ಬರುವಾಗ್ಯೆ

4. ವಿನಾಯಕ ಮಾಡಗೇರಿ : ಮಾರಿಕಾಂಬೆ (೧೯೮೯) ಪು. ೧೮ - ೧೯





ವೊಬ್ಬ ಪೆಟ್ಟಿಗೆ ನೋಡಿ, ಬಾರಿ ಅದೆಯಿದರಲ್ಲು ಯೇನಾದರು ಯಿದ್ದೀತು ಯಂತ ಆ ಪೆಟ್ಟಿಗೆ ಹೊತ್ತುಕೊಂಡು ಬಂದು, ಯಾ ಶಿರಶೀ ಕೋಟೆಕೆರೆ ಮೇಲಗಡೆ ಗುಡ್ಡದ ಮೇಲೆ ಆಳದಿಂದಾ ಬಂದ ಜನರು ಯಾವತ್ತು ಆ ಗುಡ್ಡದ ಮೇಲೆ ವುಳಕೊಂಡರು. ಆ ಸ್ಥಳದಲ್ಲಿ ವಬ್ಬ ಸಣ್ಣವನ ಮೇಲೆ ಆ ದೇವರು ಬಂದು ಕೂಗಾಟಕ್ಕೆ ಆರಂಭವಾಯಿತು. ಆಗ್ಯೆ ಸಮೀಪದಲ್ಲುಯಿದ್ದವರು, ನೀನು ಯಾರು ಯಂತ ಕೇಳಿದಲ್ಲಿ ನಾನು ಬಂಕಾಪುರದ ಮಾರಿ ಯೀ ಸ್ಥಳದಲ್ಲಿ ಯಿದ್ದವರ ಯಜಮಾನರ ಗರಶಿಯಂತ ಅಪ್ಪಣೆ ಆಯಿತು. ಅಪ್ಪಣೆ ಪ್ರಕಾರ ವೂರಾಗೆ ಯಿದ್ದವರಿಗೆಲ್ಲಾ ಮಾರೆಮ್ಮ ದೇವರು ನಿಮ್ಮನ್ನ ಯಲ್ಲಾ ಬರ ಹೇಳೋದಕ್ಕೆ ಅಪ್ಪಣೆ ಆಯಿತು. ಅಂತ ಹೇಳಲಾಗಿ ಆಗ್ಯೆ ಸ್ಥಳ, ಪರಸ್ಥಳ, ಮರಾಗೆ ಇದ್ದ ಯಾವತ್ತೂ ಜನರು ಅಲ್ಲಿಗೆ ಹೋಗಿ , ನೀವು ಯಾರು ಯಂತಾ ಕೇಳಿದಲ್ಲಿ ನಾನು ಬಂಕಾಪುರದಲ್ಲಿಯಿದ್ದೆ. ನನ್ನ ಹೆಸರು ಮಾರೆಮ್ಮ ನಾನು ಅವಾಂತ್ರದಿಂದಾ ಈ ಜನರ ಸಂಗಡಾ ಬಂದೆ. ನಿಮ್ಮ ಸ್ಥಳದಲ್ಲಿ ಯಿರಬೇಕು. ನನಗೆ ವೊಂದು ಸ್ಥಳಾ ಮಾಡಿಕೊಡೀ ಯಂತಾ ಅಪ್ಪಣೆ ಆದ್ದರಿಂದ ವಾಲಗ ಭಜಂತ್ರಿಯಿಂದಾ ವೂರು ವೊಳಗೆ ಕರಕೊಂಡು ಬಂದು ಕಸುಬೆಯಲ್ಲು ಸ್ಥಾಪನೆಯೂ ಅಮೃತ ಪಡಿ ನೈವೇದ್ಯದ ಬಗ್ಗೆ ಮಾರೀ ಸರವಿನ ಹೋಲಖ 5 ಗುತ್ತಿಗೆ ಭತ್ತ ಖಂಡುಗ 18, ಹದಿನೆಂಟು ಖಂಡುಗ ಭತ್ತ ಸಲ್ಲುತಿತ್ತು. ಮೂರು ವರ್ಷಕ್ಕೆ ವೊಂದು ದಫಾಲೆ ಹಬ್ಬ ಮಾಡಬೇಕಂತ ಅಪ್ಪಣೆ ಆಯಿತು. ಆ ಪ್ರಕಾರ ಪೂಜೆಗೆ ಪಂಚಾಳ ನರಸಣ್ಣ ಯೆಂಬುವನ ಪೂಜೆಗೆ ಯಿಟ್ಟು ಯಿವರಿಗೂ ಸದಾಶಿವರಾಜನ ಅಮುಲು ಯಿದ್ದ ಪರಿಯಂತರ ಅಮೃತಪಡಿ ಭತ್ತ ಸಲುತ ಬಂತು. ಅಲ್ಲಿಂದಾ ಪೂಜೆ ನಡದು ಬಂತು. ಆಮೇಲೆ ಕುಂಪಣಿ ಅಮುಲು ಆಗುತ್ತಲಿ ತಸದೀಕು ಗ10 ಹತ್ತುವರಿ ವರಹಾ ಸಲ್ಲುತ್ತ ಬರುತ್ತದೆ. ಪೂಜೆ ನಡೆಯುತ್ತಲೆ ಬರುತ್ತದೆ. ಹಾಲಿ ಕುಂಪಣಿಯಲ್ಲಿ ಕಲಂ.......[5]

ಈ ಕೈಫಿಯತ್ತು ಇತಿಹಾಸ ಸತ್ಯಕ್ಕೆ ಸಮೀಪವಿರುವಂತಿದೆಯೆಂದು ಡಾ|| ಎ. ಕೇ. ಶಾಸ್ತ್ರಿಯವರು ಅಭಿಪ್ರಾಯ ಪಡುತ್ತಾರೆ.

**ಉ. ಮಾರಿಕಾಂಬೆ - ಮಹಾಸತಿ :**

ಶ್ರೀ ಮಾರಿಕಾಂಬೆಯನ್ನು ಕುರಿತು ಜನಜನಿತವಾಗಿ ಬಂದ ಐತಿಹ್ಯವೊಂದಿದೆ: ವೇದಾಧ್ಯಯನವನ್ನು ಬ್ರಾಹ್ಮಣೇತರರು ಮಾಡುವುದನ್ನು ನಿಷೇಧಿಸಿದ ಕಾಲದಲ್ಲಿ

5. ಡಾ|| ಎ. ಕೇ. ಶಾಸ್ತ್ರಿ : ಶಿರಸಿ ತಾಲೂಕಾದರ್ಪಣ. ಪು. ೧೬೧ - ೧೬೨

ಭಂಡಾಯ ಮನೋಭಾವನೆಯ ಉತ್ಸಾಹಿ ಹೊಲೆಯರ ಹುಡುಗನೊಬ್ಬ ವೇದ ವಿದ್ಯೆಯನ್ನು ಕಲಿತು ಪಾಂಡಿತ್ಯವನ್ನು ಪಡೆಯಲು ಆಶಿಸಿದ. ಆದರೆ ಹೆಂಗಸರು, ಶೂದ್ರಾದಿಗಳು ವೇದ ವಿದ್ಯೆಯನ್ನು ಕಲಿಯಲು ಅವಕಾಶವಿಲ್ಲದಾಗ ಪಂಚಮನಿಗೆ ಅದು ದೊರಕುವುದಾದರೂ ಹೇಗೆ? ಆದರೆ ಜ್ಞಾನದಾಹಿಯಾದ ಹೊಲೆಯರ ಹುಡುಗ ವೇದಾಧ್ಯಯನವನ್ನು ಪಡೆಯುವ ತರಾತುರಿಯನ್ನು ನಿಗ್ರಹಿಸಲಾಗದೇ ಒಬ್ಬ ಬ್ರಾಹ್ಮಣ ವಟು ವೇಷವನ್ನು ತೊಟ್ಟು ಬ್ರಾಹ್ಮಣ ಗುರುವೊಬ್ಬನನ್ನು ಆಶ್ರಯಿಸಿ, ಅಧ್ಯಯನ ಮಾಡಿ ವೇದ ಪಾರಂಗತನಾದ.

ಹೊಲೆಯರ ಹುಡುಗನ ಚುರುಕು ಬುದ್ಧಿಗೆ, ಅವನ ಉತ್ಸಾಹಶೀಲ ಸಭ್ಯ ನಡತೆಗೆ ಮನಸೋತ ಬ್ರಾಹ್ಮಣಗುರು, ಆತನನ್ನು ಬ್ರಾಹ್ಮಣನೆಂದೇ ನಂಬಿ, ಅವನಿಗೆ ತನ್ನ ಮಗಳನ್ನು ಮದುವೆ ಮಾಡಿದ. ಹಲವಾರು ವರ್ಷಗಳ ಅವನ ಸವಿ ಸುಖದ ದಾಂಪತ್ಯಕ್ಕೆ ಸಾಕ್ಷಿಯಾಗಿ ಅವನಿಗೆ ಮಕ್ಕಳೂ ಆದರು.

ಹೊಲೆಯರ ಯುವಕ ತನ್ನ ಉದರಂಭರಣೆಗಾಗಿ ಮೆಟ್ಟು ಹೊಲಿಯುವ ತನ್ನ ಕುಲಕಸುಬನ್ನು ಹೆಂಡತಿಗೆ ತಿಳಿಯದ ರೀತಿಯಲ್ಲಿ ಮಾಡುವುದರ ಜೊತೆಗೆ, ತನ್ನ ಪೂರ್ವದ ಮಾಂಸಸೇವನೆಯ ಚಟವನ್ನು ಹೊಂದಿದ್ದ; ತನ್ನ ಮಕ್ಕಳಿಗೂ ಅದರ ರೂಢಿ ಮಾಡಿಸಿದ್ದ. ಒಮ್ಮೆ ಆತನ ಮಗು ಊಟವನ್ನು ಮಾಡುವಾಗ ಪದಾರ್ಥದಲ್ಲಿಯ ಕುಂಬಳಕಾಯಿಯ ಹೋಳನ್ನು ನೋಡಿ," ಇದು ಯಾವ ಮಾಂಸದ ಹೋಳಮ್ಮ?" ಎಂದು ಪ್ರಶ್ನಿಸಿದಾಗ, ಗಂಡನ ವಿಷಯದಲ್ಲಿ ಹೆಂಡತಿ ಅನುಮಾನ ತಾಳಿದಳು. ಗಂಡನ ಚಲನವಲನಗಳನ್ನು ರಹಸ್ಯವಾಗಿ ಪರೀಕ್ಷಿಸಿ, ಅವನ ಹೊಲೆತನದ ಹೆಜ್ಜೆ ಗುರುತುಗಳನ್ನು ಕಂಡು ಕೆರಳಿದಳು. ಏನು ಮಾಡಬೇಕೆಂಬುದು ತಿಳಿಯದೆ, ನೇರವಾಗಿ ತಂದೆಯೆಡೆ ಬಂದು," ನಾಯಿ ಮುಟ್ಟಿದ ಗಡಿಗೆಯನ್ನು ಏನು ಮಾಡಬೇಕೆಂದು ಕೇಳಿದಳು. ಪೂರ್ವಾಪರವನ್ನರಿಯದ ಅವಳ ತಂದೆ, ಮಗಳನ್ನು ಕುರಿತು," ಅದನ್ನು ಸುಟ್ಟು ಶುದ್ಧಿಗೊಳಿಸು" ಎಂದು ತಿಳಿಸುತ್ತಾನೆ. ತಂದೆಯ ಮಾತಿನಿಂದ ಪ್ರೇರಣೆಯನ್ನು ಪಡೆದ ನಾರಿ, ತನ್ನನ್ನು ಸುಟ್ಟುಕೊಳ್ಳುವ ನಿರ್ಧಾರಕ್ಕೆ ಬಂದು, ಮನೆಗೆ ಹಿಂದಿರುಗಿದಳು. ತನ್ನ ಈವರೆಗಿನ ಮುಗ್ಧತೆಯನ್ನು ಸ್ನೇಹಮಯ ನಾರಿತನವನ್ನು ಮರೆತು, ಒಲುಮೆಯಂಗಿ ಮುನಿದು ಮಾರಿಯಾದಳು. ರಾತ್ರಿಯ ವೇಳೆ ಗಂಡ ಹಾಗೂ ಮಕ್ಕಳು ಸುಖ ನಿದ್ದೆಯಲ್ಲಿದ್ದಾಗ ಮನೆಗೆ ಕಿಚ್ಚಿಟ್ಟಳು. ಆ ಕಿಚ್ಚಿನಲ್ಲಿ ತಾನೂ ಹಾರಬೇಕೆಂದಿರುವಾಗ, ಬೆಂಕಿಯ ಜಳದಿಂದ ಎಚ್ಚೆತ್ತ ಗಂಡ ಹಾಗೂ ಮಕ್ಕಳು ದಿಕೆಟ್ಟು ಓಡುವುದನ್ನು ಕಂಡ ಅವರನ್ನು ಬೆನ್ನಟ್ಟಿದಳು. ಆಗ ಅವಳ ಗಂಡ





ಸಮಯದ ತೀಕ್ಷ್ಣತೆಯನ್ನರಿತು ತಾನು ಕಲಿತ ಪರಕಾಯ ಪ್ರವೇಶ ವಿದ್ಯೆಯನ್ನು ಬಳಸಿ, ಹೆಂಡತಿಯ ಕೈಯಿಂದ ತಪ್ಪಿಸಿಕೊಳ್ಳಲು, ಕೋಳಿ, ಕುರಿ, ಹಂದಿ, ಕೋಣ ಹೀಗೆ ಬೇರೆ ಬೇರೆ ರೂಪಗಳನ್ನು ತಾಳಿ ಪ್ರಯತ್ನಿಸಿದರೂ, ಆಕೆ ಆ ಎಲ್ಲ ರೂಪಗಳಲ್ಲಿ ಅವನನ್ನು ಸಂಹರಿಸಿ ಚಿತೆಗೆಸೆಯುತ್ತಾಳೆ. ಗಂಡ ಹೆಂಡಿರಲ್ಲಿ ಈ ಬಗೆಯ ಉಗ್ರ ಸೆಣಸಾಟ ನಡೆದಾಗ ಕಂಗೆಟ್ಟ ಮಕ್ಕಳು ಎಲ್ಲೆಲ್ಲೋ ಓಡಿ ತಲೆಮರೆಸಿಕೊಂಡರು. ತಲೆ ಮರೆಸಿಕೊಂಡ ಮಕ್ಕಳನ್ನು ಹುಡುಕುವ ಗೋಜಿಗೆ ಹೋಗದೇ ಮಹಾ ಮಾರಿ ಸ್ವರೂಪದ ಈ ನಾರಿ, ಗಂಡನ ಚಿತೆಗೇರಿ ತಾನೂ ಸಾವ್ನೆದಿದಳು. ಹೀಗೆ ದೇಹ ಬಲಿದಾನ ಮಾಡಿದ ನಾರಿಯೇ ಮತ್ತೆ ತನಗೆ ಶರಣಾದವರನ್ನು ಕಾಪಾಡುವ ಅಮ್ಮನಾಗಿ, ಸೊಕ್ಕೇರಿ ಮೆರೆಯುವ ಶಿಷ್ಟ ಪೀಡಕರಿಗೆ ಭೂತ ಪಿಶಾಚಿಗಳಿಗೆ, ಭಕ್ತರನ್ನು ಕಾಡುವ ರೋಗ ರುಜಿನಗಳಿಗೆ ಕಾಡುವ ಮಾರಿಯೂ ಆಗಿ ಅವತರಿಸಿ, ಮಾರಿಕಾಂಬೆಯೆನಿಸಿಕೊಂಡಳು. ಮಾರಿಯಮ್ಮನನ್ನು ಕುರಿತಾಗಿರುವ ಈ ಐತಿಹ್ಯ ಶಿರಸಿಯಲ್ಲಷ್ಟೇ ಅಲ್ಲ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ಹೀಗೆ ದಕ್ಷಿಣ ಭಾರತದುದ್ದಕ್ಕೂ ಸ್ವಲ್ಪ ಭಿನ್ನ ಪಾಠಾಂತರಗಳಿಂದ ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ಬಗೆಯಲ್ಲಿ ಪ್ರಚಲಿತವಿದೆ. ಶಿರಸಿಯ ಒಂದು ವಿಶೇಷವೆಂದರೆ ಮಾರಿಜಾತ್ರೆಯಲ್ಲಿ ಈ ಕಥೆಯನ್ನು ಸತ್ಯ ಘಟನೆಯೇನೋ ಎನ್ನುವ ಬಗೆಯಲ್ಲಿ ಆಚರಣೆಯಲ್ಲಿಯೂ ಉಳಿಸಿಕೊಂಡು ಬಂದದ್ದು. ಇದರ ವಿವರಣೆಯನ್ನು ಮಾರಿಜಾತ್ರೆಯ ಚಡಂಗಗಳ ವಿಶ್ಲೇಷಣೆಯಲ್ಲಿ ಕಾಣಬಹುದು.

ವರ್ಣ ಸಂಕರದ ಹಿನ್ನೆಲೆಯಲ್ಲಿ ಹುಟ್ಟಿರಬಹುದಾದ ಮಾರಿಕಾಂಬೆಯ ಕತೆಯನ್ನು ಭಿನ್ನ ಭಿನ್ನ ನೆಲೆಯಲ್ಲಿ ವ್ಯಾಖ್ಯಾನಿಸಬಹುದು : i) ವರ್ಣ ಸಂಕರವನ್ನು ನಿಯಂತ್ರಿಸುವುದಕ್ಕೆ ಇಂಥದೊಂದು ಕಥೆಯನ್ನು ಹೆಣೆದು ಜನರಲ್ಲಿ ಭಯವನ್ನು ಕೆರಳಿಸಿ, ಆ ಮೂಲಕ ಮೇಲ್ವರ್ಗದ ಹೆಣ್ಣನ್ನು ಮದುವೆಯಾಗಲು ಹಾತೊರೆಯುವವರ ಉತ್ಸಾಹಕ್ಕೆ ತಣ್ಣೀರೆರಚುವ ಹೇತುವಿನಿಂದ ಇಂಥದೊಂದು ಕಥೆ ರಚಿಸಿರಬಹುದು. ii) ಇಂಥ ಕೆಲವು ಘಟನೆಗಳು ನಡೆದಿರುವುದು ಉಂಟು. ಸಾಮಾನ್ಯವಾಗಿ ಯಾವುದೇ ಒಂದು ಅಪರೂಪದ ಅಸಾಧಾರಣವಾದ ಕಾರ್ಯವನ್ನು ಮಾಡಿ ಸತ್ತವರನ್ನು, ಅವರ ಆತ್ಮುಗ್ರತೆ, ಅಸಂತುಷ್ಟತೆ ತಮ್ಮನ್ನು ಕಾಡದಿರಲಿ, ಅವರ ಸ್ನೇಹ ಶೀಲತೆ, ಮಮತೆ ತಮ್ಮನ್ನು ರಕ್ಷಿಸಲಿ ಎಂಬ ಹೇತುವಿನಿಂದ ಅವರನ್ನು ಪೂಜಿಸುವ ಸಂಪ್ರದಾಯ ಬೆಳೆದು ಬಂದಿರಲೂ ಸಾಕು iii) ದ್ರಾವಿಡರ ಕೃಷಿ ಸಂಸ್ಕೃತಿಯನ್ನು (ಹೊಲೆಯ - ಕೋಣಗಳ) ಬಲಿಕೊಟ್ಟು ಆರ್ಯರು ಆ ನೆಲದಲ್ಲಿಯೇ ಆರ್ಯದ್ರಾವಿಡ ಸಮ್ಮಿಶ್ರ

ಸಂಸ್ಕೃತಿಯ ಫಲವನ್ನು ಬಿತ್ತಿ ಬೆಳೆದ ಸಂಕೇತ ರೂಪದಲ್ಲಿ ಈ ಕಥೆ ಹುಟ್ಟಿ ಇದರ ಹಿನ್ನೆಲೆಯಲ್ಲಿಯೇ ಜಾತ್ರೆಯ ಆಚರಣಾ ವಿಧಿಗಳು ಬೆಳೆದು ಬಂದಿರಲೂ ಸಾಕು. ಇಲ್ಲಿ ಕೋಣನ - (ಹೊಲೆಯನ) ಬಲಿರಕ್ತವನ್ನು ಭೂಮಿಗೆ ಅರ್ಪಿಸಿ ಅವಳಿಂದ ಹುಲುಸಾದ ಬೆಳೆ ಹಾರೈಸುವುದು ಫಲೀಕರಣಕ್ಕೆ, ಫಲ ದೃಢಗೊಳ್ಳಲಿಕ್ಕೆ ಈ ಬಗೆಯ ಸಂಕರ ಅಗತ್ಯವೆನ್ನುವುದನ್ನು ಸೂಚಿಸುವಂತಿದೆ.

ಈ ಕಥೆಯನ್ನು ಇನ್ನೊಂದು ದೃಷ್ಟಿಕೋನದಿಂದ ವ್ಯಾಖ್ಯಾನಿಸಿದ ಡಾ। ಅರವಿಂದ ಮಾಲಗತ್ತಿಯವರ ಅಭಿಪ್ರಾಯವನ್ನು ಹೀಗೆ ಸಂಗ್ರಹಿಸಬಹುದು : ಇಲ್ಲಿಯ ಮಾದಿಗ ಯುವಕನ ಸಾವು ದುರಂತಮಯವಾದದ್ದು. ಮೇಲ್ವರ್ಗದವರು ಕೆಳವರ್ಗದವರ ಹೆಣ್ಣನ್ನು ಮದುವೆಯಾಗಬಹುದಾದರೂ ಮೇಲ್ವರ್ಗದ ಹೆಣ್ಣು ಕೆಳವರ್ಗದ ಗಂಡನ್ನು ಮದುವೆಯಾಗಲು ಸಮಾಜದ ನಿಷೇಧವಿದ್ದ ಕಾಲದಲ್ಲಿ ಈ ಘಟನೆ ನಡೆದು ಹೋದದ್ದು. ಇದನ್ನು ಸಹಿಸದ ಮೇಲ್ವರ್ಗದವರೇ ಮಾದಿಗನನ್ನು ಕೊಂದಿರಬಾರದೇಕೆ? ಕೆಳವರ್ಗದ ಗಂಡೊಬ್ಬ ಮೇಲ್ವರ್ಗದ ಹೆಣ್ಣನ್ನು ಮದುವೆಯಾದಲ್ಲಿ ಅವನ ಶಿಶ್ನವನ್ನೇ ಕತ್ತರಿಸಿಬೇಕೆಂಬ ನಿಯಮವೂ ಇದೆ; ಹಾಗೆಂದರೆ ಅವನ ವಧೆ ಮಾಡಿದಂತೆಯೇ. ಮೇಲ್ವರ್ಗದವರಿಂದ ಮಾದಿಗನ ಕೊಲೆಯಾದುದನ್ನು ತಿರುಚಿ ಈಗಿನ ಕಥೆ ಸೃಷ್ಟಿಯಾಗಿರಬೇಕು. ತಮ್ಮ ಮೇಲೆ ಬರಬಹುದಾದ ಅಪವಾದವನ್ನು ಮಾರಮ್ಮನೇ ಉಗ್ರರೂಪತಾಳಿ ಗಂಡನನ್ನು ಕೊಂದಳೆಂದು ಹೇಳಿರುವ ಸಾಧ್ಯತೆಯಿದೆ. ಮಾರಮ್ಮ ಗಂಡನನ್ನು ಕೊಂದದ್ದೇ ಸತ್ಯವಾಗಿದ್ದರೆ ಕೆಳವರ್ಗದ ಜನತೆ ಅವಳನ್ನು ಪೂಜಿಸುವುದು ಅಸಂಭವ. ಆದರೆ ಅವರು ಮಾರಮ್ಮನನ್ನು ತಾಯಿಯಂತೆ ಆರಾಧಿಸುತ್ತಾರೆ. ಗಂಡನನ್ನು ಕೊಂದವಳು ಮಹಾಸತಿಯಾಗಿ ಪೂಜೆಗೊಳ್ಳಲು ಹೇಗೆ ಸಾಧ್ಯ? ಮಾರಮ್ಮ ಹೊಲೆಯನನ್ನು ಒಪ್ಪಿಯೇ ಮದುವೆಯಾಗಿರಬೇಕು. ಇದನ್ನು ಸಹಿಸದ ಮೇಲ್ವರ್ಗದವರು ಅವನನ್ನು ಕೊಂದಿರಬೇಕು. [ಬಹುಶಃ ಈ ದುರಂತವನ್ನು ಸಹಿಸದ ಮಾರಮ್ಮ ಪತಿಯ ಜೊತೆಗೇ ಸಹಗಮನ ಮಾಡಿ ಮಹಾಸತಿಯಾಗಿರಬೇಕು.] ಈ ಸಂಬಂಧದಲ್ಲಿ ಕೆಳವರ್ಗ ಹಾಗೂ ಮೇಲ್ವರ್ಗಗಳಲ್ಲಿ ಸಂಘರ್ಷ ನಡೆದು ಕೆಳವರ್ಗದವರಿಗೆ ಗೆಲುವಾಗಿರಬೇಕು. ಗೆಲುವಿಗೆ ಕಾರಣಳಾದ ಮಾರಮ್ಮನನ್ನು ಉತ್ಸವ

6. ಡಾ॥ ಅರವಿಂದ ಮಾಲಗತ್ತಿ: ಜಾನಪದ ಜಗತ್ತು. (ವಿಶೇಷ ಸಂಚಿಕೆ) ಮಾರ್ಚ್- ಎಪ್ರಿಲ್ ೧೯೯೦ ಪು.೧೨





ಮೂರ್ತಿಯಾಗಿಸಿಕೊಂಡು ಮೆರೆದಿರಬೇಕು. ಅದಕ್ಕೆಂದೇ ಇಂದು ಅವಳು ಮಾದಿಗರ ಕುಲದೇವತೆಯಾಗಿದ್ದಾಳೆ.[6] ಈ ಕತೆ ಮುಂದೆ ವೈದಿಕರ ಉಚ್ಛ್ರಾಯ ಕಾಲಕ್ಕೆ ಬೇರೊಂದು ತಿರುವನ್ನೇ ಪಡೆದಂತಿದೆ.

iv ಆಂಧ್ರದ ಹಳ್ಳಿಗಳ ಮುಖ್ಯ ದೇವತೆ ಹೊಲಗಳ ತಾಯಿ ಪೋಲೆರಮ್ಮ. ಈಕೆಯ ಗಂಡ ಕೋಣ----- ಹೊಲಗಳ ಮೊದಲ ಒಡೆಯರಾದ ಹೊಲೆಯರ ದೇವತೆ ಪೋಲೆರಮ್ಮ. ಇವರು ಕೋಣಗಳಿಂದ ಹೊಲಗಳನ್ನು ಉಳುತ್ತಿದ್ದರು. ಫಲಕೊಡುವುದಕ್ಕೆ ಅನೇಕ ವಿಧದಿಂದ ಕಾರಣವಾಗಿರುವ ಕೋಣವನ್ನು ಈಕೆಯ ಗಂಡ ಎಂದಿರುವುದೂ ಸಹಜ. ಭೂತಾಯಿಯ ಫಲವಂತಿಕೆ ಗಂಡಿನ ಬಲಿಯನ್ನು ಅವಲಂಬಿಸಿದ್ದರಿಂದ, ಕೋಣನ ಬಲಿ ಮಾನವ ಬಲಿಯ ಸ್ಥಾನದಲ್ಲಿ ಪ್ರಚುರವಾಯಿತು.[7] ಮಾರಿಕಾಂಬೆಯನ್ನು ಭೂಮಿತಾಯಿಯೆಂದೂ ಸಂಭೋದಿಸುವುದಿದೆ. ಭೂಮಿತಾಯಿಯ ಫಲವಂತಿಕೆಗೆ ನೇಗಿಲು, ಕೋಣ, ಬೀಜ ಬೇಕು. ಒಂದು ಕಾಲದಲ್ಲಿ ಭೂಪತಿಗಳಾಗಿ ತಮ್ಮ ನೇಗಿಲು, ಬೀಜ ಕೋಣಗಳಿಂದ ಭೂಮಿಯ ಫಲವಂತಿಕೆಗೆ ಹೊಲೆಯರು ಕಾರಣರಾಗಿದ್ದರು. ಅವರಿಂದಲೇ ಇತರರು ಬಿತ್ತುವ ಬೀಜವನ್ನು ಪಡೆದುದು, 'ಸಣ್ಣಮ್ಮ' ಎನ್ನುವ ಜನಪದ ಕಥೆಯಲ್ಲಿ ನಿರೂಪಿತವಾಗಿದೆ. ಹೊಲೆಯರಿಂದ ಭೂಸ್ವಾಮಿತ್ವವನ್ನು ಆರ್ಯರು ಅವರನ್ನು ಭೂ ಸಮೃದ್ಧಿಗೆ ಬಲಿಕೊಟ್ಟು ಪಡೆದುದನ್ನು ಈ ಕತೆಯಲ್ಲಿ ಸಾಂಕೇತಿಕವಾಗಿ ಹೇಳಿರಬಹುದೇ. ಶಿರಸಿ ಜಾತ್ರೆಯ ಕೆಲವು ಚಡಂಗಗಳನ್ನು ನೋಡಿದರೆ ಹಾಗೆನಿಸುತ್ತದೆ.

### ೩. ಶ್ರೀ ಮಾರಿಕಾಂಬೆಯ ದೇವಾಲಯ :

ಜಾನಪದ ಮೂಲದ ಗ್ರಾಮದೇವತೆಗಳಿಗೆ ಗುಡಿಗಳಿರುವುದು ತೀರ ಕಡಿಮೆ. ಒಂದೊಮ್ಮೆ ಗುಡಿಗಳಿದ್ದರೂ ತೀರ ಚಿಕ್ಕ ಗುಡಿಸಲುಗಳು. ಶ್ರೀ ಮಾರಿಕಾಂಬೆಯು ಶಿರಸಿಯಲ್ಲಿ ಪ್ರತಿಷ್ಠಾಪನೆಗೊಂಡ ಆರಂಭದ ದಿನಗಳಲ್ಲಿ ಅವಳಿಗೆ ಗುಡಿಯಿದ್ದಂತಿಲ್ಲ. ಸುಮಾರು ಇನ್ನೂರು ವರ್ಷಗಳ ಪೂರ್ವದಲ್ಲಿ ಶಿರಸಿಯ ಮಾರಿಕಾಂಬೆ ತೀರ ಚಿಕ್ಕಗುಡಿಸಲನ್ನೇ ಹೊಂದಿದ್ದಳು. ಒಮ್ಮೆ ಕಾರ್ತಿಕ ದೀಪೋತ್ಸವ ನಡೆದ ಕಾಲಕ್ಕೆ, ಭಕ್ತರು ಸಂತೋಷ ಪ್ರದರ್ಶನಕ್ಕಾಗಿ ಸಿಡಿಸಿದ ಸಿಡಿಮದ್ದಿನ ಕಿಡಿ, ಶ್ರೀದೇವಿಯ ಗುಡಿಯ ಮುಂದೆ ಉತ್ಸವಕ್ಕಾಗಿ ಹಾಕಿದ ಅಡಿಕೆ ಮಡಲಿನ ಚಪ್ಪರಕ್ಕೆ ಹೊತ್ತಿಕೊಂಡು,

7. ಎಸ್.ಎಸ್. ಹಿರೇಮಠ : ಜಾತ್ರೆಗಳು ಪು. ೬೩

ದೇವಾಲಯದ ಬಹುಭಾಗ ಸುಟ್ಟು ಹೋಯಿತು. ಆಗ ದೇವಾಲಯದ ಧರ್ಮದರ್ಶಿಗಳು, ಅರ್ಚಕರು ಊರಿನ ಗಣ್ಯರು ಹಾಗೂ ಶಿರಸಿಯ ಹತ್ತುಮಂದಿ, ಶ್ರೀ ಮಾರಿಕಾಂಬೆಗೆ ನಡಕೊಳ್ಳುವ ಭಕ್ತ ಪರಿವಾರ ಎಲ್ಲರೂ ಒಟ್ಟಾಗಿ, ತಮ್ಮ ತಾಯಿಗೊಂದು ಭವ್ಯವಾದ ಗುಡಿ ಕಟ್ಟುವ ತೀರ್ಮಾನ ಕೈಕೊಂಡರು. ಈ ಸುದ್ದಿ ಶ್ರೀದೇವಿಯ ಭಕ್ತ ಸಮುದಾಯಕ್ಕೆ ಗೊತ್ತಾಗಿ ಕಾಣಿಕೆಗಳ ಮಹಾಪೂರವೇ ಬಂತು. ಅನೇಕರು ತಮ್ಮ ಕರಸೇವೆಯ ಮೂಲಕ ಶ್ರೀದೇವಿಗೆ ಭಕ್ತಿಗೌರವವನ್ನರ್ಪಿಸಲು ಮುಂದಾದರು. ಶಿರಸಿಯ ಸುತ್ತು ಮುತ್ತಲ ಹಳ್ಳಿಯವರಂತೂ ಮನೆಗೊಬ್ಬರಂತೆ ದೇವರಿಗೆ ಬಿಟ್ಟಿ ಕೆಲಸ ಸೇವೆಯನ್ನು ಸಲ್ಲಿಸಿದರು. ಹೀಗಾಗಿ ಶ್ರೀ ದೇವಿಗೆ ಗರ್ಭಗುಡಿ, ಶಿಖರ, ರಂಗಮಂಟಪ ಹಾಗೂ ಚಂದ್ರ ಶಾಲೆಯನ್ನೊಳಗೊಂಡ, ಭವ್ಯ ಕೋಟೆಯನ್ನು ಹೋಲುವ ದೇವಾಲಯತನವನ್ನು ೧೮೭೩ ರ ಸುಮಾರಿಗೆ ಕಟ್ಟಿ ಮುಗಿಸಲು ಸಾಧ್ಯವಾಯಿತು. ಈ ಕಲಾತ್ಮಕ ದೇವಾಲಯದ ಜೀರ್ಣೋದ್ಧಾರಕ್ಕೆ ಹಾಗೂ ನವೀನಿಕರಣಕ್ಕೆ ದಾಕಪ್ಪ, ಮರಾಠೆ ಹಾಗೂ ಇಸಳೂರು ಮನೆತನದವರು ಹಾಗೂ ದೇವಾಲಯದ ಬಾಬ್‌ದಾರರು ಕಾರಣರು. ಯಾದರಾಜ ಮಹಾರಾಜರ ಆರ್ಥಿಕ ನೆರವನ್ನೂ ಆಶ್ರಯಿಸದೆ ಕೇವಲ ಜನಸಾಮಾನ್ಯರ ನೆರವಿನಿಂದ ರಾಜ ಮಹಲಿನಂತಹ ಕಲಾತ್ಮಕವೂ ಭವ್ಯವೂ ಆದ ದೇವಾಲಯ ನಿರ್ಮಾಣವಾದದ್ದು ಬಹುಶಃ ಕರ್ನಾಟಕದಲ್ಲಿ ಇದ್ದಂತಿಲ್ಲ.

ಶ್ರೀ ಮಾರಿಕಾಂಬೆಯ ದೇವಾಲಯದ ಗರ್ಭಗುಡಿಯ ತಳಪಾಯ ಭಾರತೀಯ ಶೈಲಿಯದ್ದಾದರೆ, ಅದರ ಗೋಪುರ ಫರ್ಶಿಯನ್ ಶೈಲಿಯದು. ಹೀಗೆ ಶ್ರೀದೇವಿಯ ದೇವಾಲಯ ಭಾರತೀಯ ಹಾಗೂ ಫರ್ಶಿಯನ್ ಶೈಲಿಯ ಸುಂದರ ಸಂಗಮವಾಗಿ ನಮ್ಮ ಮತೀಯ ಸಾಮರಸ್ಯದ ಹೆಗ್ಗುರುತಾಗಿ ನಿಂತಿದೆ. ದೇವಾಲಯದ ಸುಂದರವಾದ ಗೋಪುರ, ಶಿಖರದ ಮೇಲಿರುವ ಆಕರ್ಷಕ ಸಿಂಹಗಳು, ಸಾವಿರಾರು ಜನರಿಗೆ ಕುಳಿತುಕೊಳ್ಳಲು ಅವಕಾಶವನ್ನು ನೀಡುವ ವಿಶಾಲವಾದ ಸಭಾಗೃಹ, ಆಸ್ತಿಕ ಭಕ್ತರಿಗೆ ನಿಲುನೆಲವಾದ ಸುವ್ಯವಸ್ಥಿತ ಚಂದ್ರಶಾಲೆ, ದೇವಾಲಯದ ಗೋಡೆಗಳ ಮೇಲೆ ಬಿಡಿಸಿದ ಸುಂದರವಾದ ಕಾವಿಕಲೆಯ ರಾಮಾಯಣ ಮಹಾಭಾರತಗಳ ಚಿತ್ತಾಕರ್ಷಕ ಚಿತ್ತಾರಗಳು, ದೇವಾಲಯದ ಬಾಗಿಲಿನ ಕುಸುರಿ ಕೆಲಸದ ಕಲಾತ್ಮಕತೆ, ಮಹಾದ್ವಾರದ ಬಳಿ ಭಕ್ತ, ಭಾವುಕರಿಗೆ ಸ್ವಾಗತ ಕೋರುವ ಆನೆಗಳು ಎಲ್ಲ ಒಟ್ಟಂದದಲ್ಲಿ ಪ್ರೇಕ್ಷಕ ಸಮುದಾಯಕ್ಕೆ ಹರ್ಷದ ಹೊನಲುಕ್ಕಿಸುತ್ತವೆ. ನನಗೆ ತಿಳಿದ ಮಟ್ಟಿಗೆ ಇಷ್ಟು ದೊಡ್ಡದಾದ ಸುಂದರ ಅರಮನೆಯನ್ನು ನೆನಪಿಸುವಂಥ ಮಾರಿಗುಡಿ





ಕರ್ನಾಟಕದಲ್ಲಿ ಇನ್ನೊಂದಿಲ್ಲ. ಶ್ರೀ ಮಾರಿಕಾಂಬಾ ದೇವಾಲಯವು ಇಂದು ಕರ್ನಾಟಕದ ಸುಪ್ರಸಿದ್ಧ ಧರ್ಮಸಂಸ್ಥೆಗಳಲ್ಲಿ ಒಂದಾಗಿದೆ.

**೪. ಶ್ರೀ ಮಾರಿಕಾಂಬೆಯ ಮೂರ್ತಿ:**

ಶ್ರೀ ಮಾರಿಕಾಂಬೆಯ ದೇವಾಲಯದಲ್ಲಿರುವ ಶ್ರೀ ದೇವಿಯ ವಿಗ್ರಹವು ಕಟ್ಟಿಗೆಯದು. ಅದರ ವಿವಿಧ ಅಂಗಾಂಗಗಳನ್ನು ಪ್ರತ್ಯೇಕಿಸಿ ಜೋಡಿಸಲು ಬರುವಂತಿದೆ. ಶ್ರೀದೇವಿಯ ಮುಖದ ಭಾಗವನ್ನು ಎಣ್ಣೆಯ ತೇವಾಂಶವುಳ್ಳ, ಯಾವಕಾಲಕ್ಕೂ ಹುಳುಕು ಹತ್ತದ, ರಕ್ತ ಚಂದನದಿಂದ ಕೆತ್ತಲಾಗಿದೆ. ಸುಮಾರು ಏಳು ಅಡಿ ಎತ್ತರವುಳ್ಳ, ಈ ಭವ್ಯ ವಿಗ್ರಹವನ್ನು ಅದರ ಗಾತ್ರಕ್ಕೆ ತಕ್ಕಂತೆ ಜಾನಪದರು ದೊಡ್ಡಮ್ಮನೆಂದೇ ಕರೆಯುತ್ತಾರೆ :

ಸಿರಸಿ ಸೇವಮ್ಮ ೧ ಊರಿಗೇ ದೊಡ್ಡವ್ವ
ಓಂಜರದೋ-ಲೀ ೨ ಕಿಮಿಯಲ್ಲೇ ೩ । ಇಕ್ಕಂಡೇ ೪
ಕೆಂಡದ ರತವಾ ಎಳದಾಳ । ೫

ಸಿರಸೀ ಸೇವಮ್ಮ ಕಾಂಬಕೇ ೬ ದೊಡ್ಡವ್ವ
ರಜನೆಂಪೀನೋಳ ರವಿಯೋಳ । ಕುಳ್ಳಲ್ಲೇ ೭
ನೇತ್ರದ ಮುತ್ತ ೮ ಉಳುವಾರ್ದೇ ೯

ಸಿರಸಿ ಸೀವಮ್ಮ ಊರಿಗೆ ದೊಡ್ಡವಳು
ಕಡುಗೆಂಪಿನವು ಕಲಿಯವ್ವ ೧೦ । ದೊಡ್ಡಮ್ಮ
ಸಿರಸೀಯ ಕ್ವಾಟೀ ೧೧ ಮನಿಯವ್ವ ।

ಕಾಲಿಗೆ ಕಡ್ಗಾನಟ್ಟೇ ೧೨ ನಿಳ್ಳಗ್ ೧೩ ಸತ್ತುಗಿ ತಡದೆ
ಹಾಲದುತ್ತರಗಿ ೧೪ ಬುಜಕಣಟ್ಟೇ । ಸೀವಮ್ಮ
ದಾಲೂ ಗತ್ಕನೇ ೧೫ ತಡದಾಳೆ ೧೬

ಪ್ರಕೃತಿ ತತ್ವವನ್ನು ಸಾಮಾನ್ಯವಾಗಿ ಕೆಂಪು ಬಣ್ಣದಿಂದ ಸೂಚಿಸುವುದಿದೆ. ಪ್ರಕೃತಿ ದೇವಿಯಾದ ಶ್ರೀ ಮಾರಿಕಾಂಬೆಯನ್ನು ಕಡುಗೆಂಪಿನವಳು ಎಂದು ಹಾಡುಗಾರ್ತಿ ಸರಿಯಾಗಿಯೇ ಬಣ್ಣಿಸಿದ್ದಾಳೆ. ಇವಳು ದುರ್ಗರಕ್ಷಕಿಯಾದ

---

೧. ಶಿವಮ್ಮ ೨. ಬಂಗಾರದ ಓಲೆ ೩. ಕಿವಿಯಲ್ಲಿ ೪. ಇಟ್ಟುಕೊಂಡು ೫. ಇಳಿದಳು ೬. ಕಾಣಲಿಕ್ಕೆ ೭. ಕೊರಳಲ್ಲಿ ೮. ಒಂದು ಜಾತಿಯ ದೊಡ್ಡ ಮುತ್ತು ೯. ಹೊಳೆಯುವುದು. ೧೦. ಶಕ್ತಿಶಾಲಿನಿ ೧೧. ಕೋಟೆಯ ೧೨. ಕಡಗವನ್ನು ತೊಟ್ಟು ೧೩. ನೆರಳಿಗೆ ೧೪. ಬೆಳ್ಳಗಿನ ಉತ್ತರಿಯ? ಅಮೃತ ಕವಚ? ೧೫. ಗುರಾಣಿ, ಡಾಲು ಕತ್ತಿಯನ್ನು ೧೬. ಹಿಡಿದಾಳೆ.

ದುರ್ಗಮ್ಮನೂ ಹೌದು. ಅದಕ್ಕಾಗಿಯೇ ಇವಳನ್ನು ಕೋಟೆಯ ಮನೆಯವಳೆಂದೂ ಕರೆಯಲಾಗಿದೆ. ಶಿರಸಿಯ ಮಾರಿಕಾಂಬೆಯ ದೇವಾಲಯ ಕೋಟೆಯಂತಿರುವುದೂ ಗಮನಾರ್ಹ. ಮಾರಿಕಾಂಬೆಯ ಮೂರ್ತಿಗೆ ಎಂಟು ಕೈಗಳು. ಆ ಕೈಗಳಲ್ಲಿ ಶಂಕ, ಚಕ್ರ, ಡಮರು, ಪಾಶ, ಪಾನಪಾತ್ರೆ[8] ತ್ರಿಶೂಲ, ಖಡ್ಗ ರುಂಡಗಳಿವೆ. ಶ್ರೀದೇವಿಯು ಸಿಂಹದ ಮೇಲೆ ಆಸೀನಳಾಗಿದ್ದಾಳೆ. ಅವಳ ಕೈಯಲ್ಲಿ ಸಾವ್ಯೆದಿದ ಕೋಣ (ಮಹಿಷಾಸುರ) ನನ್ನು ಸಿಂಹ ಮೋದಿ ಮುರಿದಿದೆ. ಹೀಗೆ ಶಿರಸಿಯ ಇಂದಿನ ಮಾರಿಕಾಂಬೆಯ ವಿಗ್ರಹ ನಿರ್ಮಾಣದಲ್ಲಿ ವೈದಿಕತಂತ್ರಾಗಮಗಳ ದಟ್ಟ ಪ್ರಭಾವವಾಗಿ ಶ್ರೀದೇವಿಯು ಪುರಾಣೋಕ್ತ ಮಹಿಷಾಸುರ ಮರ್ದಿನಿಯಂತೆ ರೂಪುಗೊಂಡಿದ್ದಾಳೆ. ಮೆಡಿಟರೇನಿಯನ್ ಸಾಗರ ತೀರದ ಪ್ರದೇಶದಲ್ಲಿನ ಜನರು ಸಿಂಹದ ಮೇಲೆ ಸವಾರಿ ಮಾಡುವಂತಹ ಒಂದು ಉಗ್ರ ಹಾಗೂ ಶಕ್ತಿ ಶಾಲಿ ದೇವತೆಯನ್ನು ಪೂಜಿಸುತ್ತಿದ್ದರೆಂದು ಗೊತ್ತಾಗುತ್ತದೆ. ಇದನ್ನು ಒಪ್ಪುವುದಾದರೆ ಮಾರಮ್ಮ ದೇವತೆಯು ದ್ರಾವಿಡರಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಸ್ತ್ರೀ ಶಕ್ತಿದೇವತೆಯ ರೂಪದಲ್ಲಿ ಪೂಜೆಗೊಳ್ಳುತ್ತ ಇತ್ತೆಂದು, ಅವಳು ಸಿಂಹವಾಹನೆಯಾದ್ದರಿಂದ ಉಗ್ರದೇವತೆಯೆಂದೂ ಕರೆಯಿಸಿ ಕೊಂಡಿರುವುದು ಸತ್ಯವಾಗುತ್ತದೆ.[9] ದುರ್ಗೆಗೆ ಸಿಂಹದ ನಂಟಿರುವುದು ಪ್ರಪಂಚದಲ್ಲಿ ಹಲವೆಡೆಯಿದೆ. ಕ್ರಿ.ಶ. ಪೂ. ೨೨೫೦ ರ ಸುಮಾರಿನ ಸುಮೇರಿಯಾ ದೇಶದ ಮುದ್ರೆಯೊಂದರಲ್ಲಿ ಮಾತೃದೇವಿಯು ಸಿಂಹದೊಂದಿಗಿರುವ ಚಿತ್ರವಿದೆ.[10]

ಸುಶಿಕ್ಷಿತರು ಶ್ರೀದೇವಿಯನ್ನು ಶ್ರೀ ಮಾರಿಕಾಂಬೆಯೆಂದು ಕರೆದರೂ ಜಾನಪದರು ಇವಳನ್ನು ಕರೆಯುವುದು ಶಿವಮ್ಮನೆಂದು. ತಾಯಿ ಮಕ್ಕಳನ್ನು ತರತಮ ಭಾವವಿಲ್ಲದೆ ಕಾಪಾಡುವಂತೆ ಇವಳೂ ಕಾಪಾಡುವವಳೆಂಬ ನಂಬಿಕೆ ಇವರದು. ದುಷ್ಟರಿಗೆ, ಭಕ್ತರನ್ನು ಕಾಡುವ ಭೂತ ಪಿಶಾಚಿಗಳಿಗೆ, ರೋಗ ರುಜಿನಗಳಿಗೆ ಇವಳು ಮಹಾಮಾರಿ; ಇವಳ ಉಗ್ರರೂಪವನ್ನು ಕಂಡೇ ಅವು ಕಾಲ್ಕಿತ್ತು ಭಕ್ತರನ್ನು ಕಾಡುವ ಕಾಯಕದಿಂದ ಹಿಂದೆ ಸರಿಯಬೇಕು. ಪೀಡಕರನ್ನು ಹೆದರಿಸಲಿಕ್ಕೆ ಮಾತ್ರ ಇವಳೂ ರುದ್ರ ರೂಪತಾಳುವುದು. ಆದರೆ ಇಂದಿನ

8. ಇದನ್ನು ಕೆಲವರು ಅಗ್ನಿಪಾತ್ರೆಯೆಂದು ಕರೆದರೆ ಕೆಲವರು ಕುಂಕುಮ ಪಾತ್ರೆಯೆನ್ನುತ್ತಾರೆ.
9. ಡಾ| ಅಬ್ದುಲ್ ಹಮೀದ್: ಹಂದನ ಕೆರೆ ಮಾರಮ್ಮ ಜಾನಪದ ಜಗತ್ತು (ವಿಶೇಷ ಸಂಚಿಕೆ) ಮಾರ್ಚ್-ಎಪ್ರಿಲ್ ೧೯೯೦
10. ಓದು. ಎಸ್.ಕೇ. ರಾಮಚಂದ್ರರಾವ್: ಭಾರತೀಯ ದೇವಾಲಯಗಳ ಜಾನಪದ ಮೂಲ, ಪು.೯೨





ಮಾರಿಕಾಂಬೆಯ ವಿಗ್ರಹದಲ್ಲಿ ಅಂತಹ ಭೀಕರ ಮುಖಲಕ್ಷಣವಿಲ್ಲ. ಇವಳ ಹಳೆಯ ವಿಗ್ರಹ ಕೋರೆ ದಾಡೆಯಿಂದ ಕೂಡಿ ತನ್ನ ಕೆಕ್ಕರು ಗಣ್ಣಿನಿಂದ ಇಂದಿನ ವಿಗ್ರಹಕ್ಕಿಂತ ಭೀಕರವಾಗಿತ್ತೆಂದು ಹಳೆಯ ತಲೆಮಾರಿನ ಭಕ್ತ ಜನ ಹೇಳುತ್ತಾರೆ.

ಶ್ರೀ ಮಾರಿಕಾಂಬೆಯ ಇಂದಿನ ವಿಗ್ರಹ ಆಕರ್ಷಕವಾಗಿದ್ದು ರುದ್ರ-ಶಿವ ಎರಡೂ ಮುಖವುಳ್ಳವಳಾಗಿದ್ದಾಳೆ. ಅವಳಿಗೆ ತೊಡಿಸಿದ ನವರತ್ನ ಖಚಿತವಾದ, ಕಲಾತ್ಮಕವಾಗಿ ಕೆತ್ತಿದ ದೊಡ್ಡ ಕಿರೀಟ, ಮುತ್ತಿನ ಮೂಗುತಿ, ಕಿವಿಯ ಓಲೆ, ಕುತ್ತಿಗೆಯಲ್ಲೊಪ್ಪುವ ಪುತ್ತಲಿಸರ, ಪವನ ಸರ, ಚಕ್ರಸರ, ತೋಳುಗಳಲ್ಲೊಪ್ಪುವ ಬಾಜು ಬಂದಿ, ಒಂಕಿ, ಸೊಂಟದ ಪಟ್ಟೆನೇವಳ ಒಂದೆ ಎರಡೆ ಹಲವಾರು ಆಭರಣಗಳಿಂದ ಭೂಷಿತೆಯಾದ ಶ್ರೀದೇವಿಯು ಮೊದಲ ನೋಟಕ್ಕೇ ಭಕ್ತ ಜನರಿರಲಿ, ಭಾವುಕ ಪ್ರೇಕ್ಷಕರಿರಲಿ, ಯಾರನ್ನಾದರೂ ಮಂತ್ರಮುಗ್ಧಗೊಳಿಸುತ್ತಾಳೆ. ಶ್ರೀದೇವಿಯ ಬೆಳ್ಳಿಯ ಪಾಲಕಿ, ಅವಳ ಹಿಂಬದಿಯ ಪ್ರಭಾವಳಿ ಇವುಗಳ ಮೇಲೆ ಬಿಡಿಸಿದ ನಯ ನಾಜೂಕಿನ ಕುಸುರಿ ಕೆಲಸ ಮೋಹಕವಾಗಿದೆ, ಶ್ರೀದೇವಿಯ ಮೂರ್ತಿಯ ಕಳೆಯನ್ನೂ ಹೆಚ್ಚಿಸಿದೆ.

## ೫. ಹಲವು ದೇವತೆಗಳ ಸಮನ್ವಯ ಸ್ವರೂಪ :

ಶ್ರೀ ಮಾರಿಕಾಂಬೆ ವೃಕ್ಷದೇವತೆ, ಗಾಳಿಮಾರಿ, ಸಂತಾನ ರಕ್ಷಕದೇವತೆ, ರೇಣುಕೆ, ಮಹಿಷಾಸುರ ಮರ್ದಿನಿ ಹೀಗೆ ಹಲವು ದೇವತೆಗಳ ಸಮನ್ವಯ ಮೂರ್ತಿಯಾಗಿದ್ದಾಳೆ.

(ಅ) ಮರಕೆ+ಅಮ್ಮ(ಅಂಬ) ಮರಕೆಯಮ್ಮ>ಮಾರಿಕಾಂಬೆ:

ನಮ್ಮ ನಾಡಿನಲ್ಲಿ ಮಾರಿಯಮ್ಮನನ್ನು ಮರದಮ್ಮ, ಮರಗಮ್ಮ, ಮರಕೆಯಮ್ಮ, ಮರ್ಕಿಯಮ್ಮ ಎಂದೆಲ್ಲಾ ಕರೆಯುವ ವಾಡಿಕೆಯಿದೆ. ಈ ಮರಗಮ್ಮನೇ ಸಂಸ್ಕೃತೀಕರಣಗೊಂಡು ಮಾರಿಕಾಂಬೆಯಾದಳು. ಉತ್ತರ ಕನ್ನಡ ಜಿಲ್ಲೆಯಲ್ಲಿ, ಕಾಡಿಯ, ಕಾಡಿಯಮ್ಮ (ಕಾಡಿನ+ಅಮ್ಮ) ಬನದಮ್ಮ, ಬನಶಂಕರಿಯಾಗಿ ಸಂಸ್ಕಾರಗೊಂಡಿದ್ದಾಳೆ. ಈ ಕಾಡಿಯಮ್ಮನೇ ಒಮ್ಮೊಮ್ಮೆ ಕಾಡುವ ಅಮ್ಮನೂ ಆಗುತ್ತಿದ್ದಳು. ಅದಕ್ಕಾಗಿಯೇ ಸಾಂಸರ್ಗಿಕ ರೋಗಗಳು ಬಂದಾಗ ಕಾಡಿಯಮ್ಮನ ಸಂತೃಪ್ತಿಗಾಗಿ ಮಾವಿನ ತಳಿರನ್ನು ತೊಟ್ಟು, ಕಾಡಿನ ಜಲ್ಲಿಯನ್ನು ಹಿಡಿದು ಕಾಡಿಯ ವೇಷ ತೊಟ್ಟು ಕಾಡಿಯಾ ಕುಣಿತವನ್ನು ಕುಣಿದು ಕಾಡಿಯಮ್ಮನನ್ನು ಸಂತೃಪ್ತಿಗೊಳಿಸುವುದಿದೆ. ಕೆಲವೆಡೆ ಮಾರಿಕಾಂಬೆಗೆ

ನಡಕೊಳ್ಳುವ ಭಕ್ತರು ಮಾರಿಕಾಂಬೆಗೆ ಬೇವಿನ ಸೊಪ್ಪಿನ ಹರಕೆ ಹೊರುವುದಿದೆ. ಮಾರಿ ಜಾತ್ರೆಯ ಸಮಯದಲ್ಲಿ ಶ್ರೀದೇವಿಗೆ ಹರಕೆಯನ್ನು ಹೊತ್ತವರು, ಬೇವಿನ ಸೊಪ್ಪನ್ನು ಉಡುಗೆಯಾಗಿ ಧರಿಸಿ, ಹರಕೆಯನ್ನು ಪೂರೈಸುವುದಿದೆ. ಅವರ ಈ ಆಚರಣೆಗಳಿಗೆ ಮೂಲ ಪ್ರೇರಣೆ ಬೇವಿನ ಮರ, ಶ್ರೀದೇವಿಯ ವಾಸಸ್ಥಾನವೆಂಬ ನಂಬಿಕೆ. ಬೇವಿನ ಸೊಪ್ಪನ್ನು ಧರಿಸುವುದೆಂದರೆ ಶ್ರೀದೇವಿಯನ್ನೇ ರಕ್ಷಾಕವಚವಾಗಿ ಧರಿಸಿದಂತೆ. ಬೇವಿನ ಸೊಪ್ಪನ್ನು ಧರಿಸಿ ಸ್ವತಃ ಬೇವಿನ ಮರದಮ್ಮನಾಗಿ, ಮಾವಿನ ತಳಿರುಟ್ಟು, ಕಾಡಿಯಮ್ಮನಾಗಿ ಅನುಕರಿಸುವ ಮಾಂತ್ರಿಕ ಆಚರಣೆಯಿಂದ ರೋಗ ವಿಮುಕ್ತಿಯನ್ನು ಪಡೆಯುವ ಹುನ್ನಾರು ಇಲ್ಲಿದೆ.

ಮಾರಮ್ಮನ ಅಲಂಕಾರದಲ್ಲಿ ಬೇವಿನ ಸೊಪ್ಪು ಪ್ರಧಾನವಾಗಿರುತ್ತದೆ. ಮಾರಿಕಾಂಬೆಯನ್ನು ಬೇವಿನ ಮರದಮ್ಮ, ಈಚಲ ಮರದಮ್ಮನೆಂದು ಕರೆದು ದೇವಿಯ ಹೆಸರಿನಲ್ಲಿ ಆಯಾ ಮರನಡಿ ಕಲ್ಲನ್ನಿಟ್ಟು ಪೂಜಿಸುವ ಪರಿಪಾಠವಿದೆ. ಈಚಲುಮರದಮ್ಮನೇ ಸಂಸ್ಕರಣಗೊಂಡು "ಕದಂಬವನ ಚಾರಿಣಿ" ಯಾದಳು. ಈಚಲು ಮರವು ಅಮಲ ಮದ್ಯದಾಯಿನಿ. ಅದಕ್ಕಾಗಿಯೇ ಮಾರಿಕಾಂಬೆಯ ಕೈಯ್ಯಲ್ಲಿ ಪಾನಪಾತ್ರೆಯಿರುವುದುಂಟು. ಕೆಲವರು ಹೆಂಡದ ಗಡಿಗೆಯನ್ನೇ ಮಾರಿಕಾಂಬೆಯ ಹೆಸರಿನಲ್ಲಿ ಪೂಜಿಸುವುದೂ ಇದೆ.

ಸೈಂಧವ ಸಂಸ್ಕೃತಿಯಲ್ಲಿ ಹೆಣ್ಣು ದೇವತೆಯೊಂದು ತಲೆಕೆಳಗಾಗಿದ್ದು, ಆಕೆಯ ಗುಹ್ಯಸ್ಥಾನದಿಂದ ವೃಕ್ಷವೊಂದು ಹೊರಹೊಮ್ಮಿದ ಚಿತ್ರವಿದೆ.[11] ಶ್ರೀದೇವಿಯ ಪುಜನ ಶಕ್ತಿಯ ಸಂಕೇತವನ್ನಲ್ಲಿ ಗುರುತಿಸಬಹುದು. ಶ್ರೀದೇವಿಯನ್ನು ಶಾಕಂಬರಿ, ಅನ್ನಪೂರ್ಣೆ ಎಂದು ಮುಂತಾಗಿ ಕರೆಯುವಲ್ಲಿಯೂ ವೃಕ್ಷ ದೈವತ್ವವನ್ನೇ ಕಾಣುತ್ತೇವೆ. ಹಸುರಿನಿಂದ ಕಂಗೊಳಿಸುವ ವನಸ್ಪತಿಗಳು ಕೇವಲ ವನಸ್ಪತಿಗಳಲ್ಲ. ಶ್ರೀದೇವಿಯ ಸ್ವರೂಪಗಳೆಂಬ ನಂಬಿಕೆ ಅನೇಕರಲ್ಲಿದೆ. ಶ್ರೀದೇವಿಯ ಮೂರ್ತಿ ಬರಿಯಕಂಬು, ಮರದ ಕೊರಡಾಗಿದ್ದುದುಂಟು. ಓಡಿಸಾದ ಕಂಬೇಶ್ವರಿ ಜನಪ್ರಿಯ ದೇವತೆ.

ಪಾಂಡವರು ಅಜ್ಞಾತವಾಸಕ್ಕೆ ತೆರಳುವ ಪೂರ್ವದಲ್ಲಿ ಶಮೀವೃಕ್ಷದ ಮೇಲೆ ತಮ್ಮ ಆಯುಧಗಳನ್ನಿಟ್ಟು, "ಬನ್ನಿಮಾಕಾಳಿ"ಯೆಂದು ಕರೆಯುವ ದುರ್ಗೆಯ ಸ್ತೋತ್ರವನ್ನು ಮಾಡಿದ ಉಲ್ಲೇಖವಿದೆ. ಪಾರ್ವತಿಯ ಮಾರ್ಪಾಟಾದ ರೂಪ `ಮಾರಿ'ಎನ್ನಲಾಗುತ್ತದೆ. ಈ ಪಾರ್ವತಿ ಪರ್ವತರಾಜನ ಮಗಳು. ಅಂದರೆ

11. ಎಸ್.ಕೇ. ರಾಮಚಂದ್ರರಾವ್ : ಭಾರತೀಯ ದೇವಾಲಯಗಳ ಜಾನಪದ ಮೂಲ ಪು. ೮೦





ವನದೇವಿಯಲ್ಲದೇ ಬೇರೊಬ್ಬಳಲ್ಲ. ಈ ಸಂದರ್ಭದಲ್ಲಿ ಏಳುಗುಡ್ಡದಮ್ಮನೆಂದು ಕರೆಯಲಾಗುವ ಎಲ್ಲಮ್ಮನನ್ನೂ ನೆನೆಯಬೇಕು. ಕೊಡಲಿರಾಮನು ರೇಣುಕೆಯ ಹನನ ಮಾಡಿದ್ದು ವೃಕ್ಷಹನನವೇ ಎನ್ನಬೇಕು. ಮಾರಿಕಾಂಬೆ ಬೇರೆಯಲ್ಲ - ಎಲ್ಲಮ್ಮ, ರೇಣುಕೆಯರು ಬೇರೆಯಲ್ಲ ಒಂದೇ ಶಕ್ತಿಯ ಭಿನ್ನಹೆಸರುಗಳು.

ಶಿರಸಿಯಲ್ಲಿ ಮರ್ಕಿ ದುರ್ಗಿಯರೆಂಬ ಜೋಡು ದೇವತೆಗಳ ಗುಡಿಯೂ ಇದ್ದು ಅವೂ ಮಾರಿಕಾಂಬೆಯ ಜೊತೆಗೇ ಪೂಜೆ ಪಡೆಯುತ್ತವೆ. ಮಾರಿಕಾಂಬೆ ಶಿರಸಿಗೆ ಬರುವ ಪೂರ್ವದಲ್ಲಿ ಇವೇ ಸ್ಥಳಿಯ ದೇವತೆಗಳಾಗಿದ್ದು ಗುತ್ತಿಯಮ್ಮನನ್ನು ಪ್ರತಿನಿಧಿಸುತ್ತಿದ್ದವು ಈ ಮರ್ಕಿದುರ್ಗಿಯರನ್ನು ಆಸಾದಿಗಳು ಸುಗ್ಗಿಯ ಸಮಯದಲ್ಲಿ ಊರಿಂದೂರಿಗೆ ತೆಗೆದುಕೊಂಡು ಹೋಗಿ ಶ್ರೀದೇವಿ ಮಾರಿಕಾಂಬೆಯ ಹೆಸರಿನಲ್ಲಿ ಭಕ್ತರಿಂದ ಕಾಣಿಕೆಗಳನ್ನು ಆಕರಿಸುವ ರಿವಾಜಿದೆ. ಈ ದೇವತೆಗಳನ್ನು ಜಾನಪದರು ಮರ್ಕಿಯಮ್ಮ > ಮರ್ಕೆಮ್ಮ, ದುರ್ಗಮ್ಮ ಎಂದು ಕರೆಯುತ್ತಾರೆ. ಈ ದೇವತೆಗಳ ಹಾಗೂ ಮಾರಿಕಾಂಬೆಯ ಮೂರ್ತಿಗಳನ್ನು ಮರದಿಂದಲೆ ಕೆತ್ತುವ ಸಂಪ್ರದಾಯವಿದೆ. ಮರದಮ್ಮ ಮರಕೆಯಮ್ಮ ಮಾರಿಕಾಂಬೆ ಇವೆಲ್ಲ ಒಂದೇ ವೃಕ್ಷದೇವತೆಯ ಭಿನ್ನಹೆಸರುಗಳು; ಸಮಾನಾರ್ಥವುಳ್ಳವುಗಳು. ಮರಕೆಯಮ್ಮನು ಮಾರಿಕಾಂಬೆಯಾಗಿ ಸಂಸ್ಕರಣಗೊಂಡದ್ದು ಹೀಗೆ :

ಮರಕೆ+ಅಮ್ಮ=ಮರಕೆಯಮ್ಮ <br>
→ ಮರಕೆ+ಅಂಬ >ಮರಕೆಯಂಬ>ಮಾರಿಕಾಂಬ <br>
→ ಮರ್ಕೆಯಮ್ಮ > ಮರ್ಕೆಮ್ಮ[12]

ಈ ವರೆಗಿನ ಸಮೀಕ್ಷೆಯಿಂದ ಮಾರಿಕಾಂಬೆ ವೃಕ್ಷದೇವತೆಯೆನ್ನುವುದು ಸುಸ್ಪಷ್ಟ. ವೃಕ್ಷಪೂಜೆಯ ಸಂಪ್ರದಾಯ ಕರ್ನಾಟಕದಲ್ಲಷ್ಟೇ ಅಲ್ಲ ಕರ್ನಾಟಕದ ಹೊರಗೂ ಪ್ರಚಲಿತವಿದೆ. "ಗಂಗಾತೀರದ ಕುರುಬರು ಮರದಮ್ಮನಿಗೆ ಭಯಭಕ್ತಿಯಿಂದ ತಲೆಬಾಗುತ್ತಾರೆ. ಅಲ್ಲಿಯ ಓರಾನರು ವೃಕ್ಷಗಳು ದೈವೀಶಕ್ತಿಯ ವಾಸಸ್ಥಾನವೆಂದು ನಂಬುತ್ತಾರೆ.

**ಆ. ಗಾಳಿ ಮಾರಿ : ಮಾರಿಕಾಂಬೆ :**

ಶ್ರೀ ಮಾರಿಕಾಂಬೆಯನ್ನು ಗಾಳಿಮಾರಿಯೆಂದೂ ಕರೆಯಲಾಗುತ್ತದೆ. ಹಾನಗಲ್ಲಿನಿಂದ ಶಿರಸಿಗೆ ಬಂದ ಮಾರಿಕಾಂಬೆ ಮೊದಲು ನೆಲೆನಿಂತ ಗಾಳಿ ಮಾರಿಯ

12. ಡಾ| ಎನ್.ಆರ್. ನಾಯಕ: ಶಿರಸಿಯ ಶ್ರೀಮಾರಿಕಾಂಬೆ, ಜನಪದ ಸಾಹಿತ್ಯ ದರ್ಶನ ಸಂ. ೮ ಪು. ೧೪೬

ಕಟ್ಟೆ, ಬಸೆಟ್ಟಿ ಕೆರೆಯ ಹತ್ತಿರವಿದೆ. ಅಲ್ಲಿಯ ಒಂದು ಚಿಕ್ಕ ಗೂಡಿನಲ್ಲಿ ಗಾಳಿ ಮಾರಿಯ ಶಿಲಾ ವಿಗ್ರಹವಿದೆ. ಸಾಮಾನ್ಯವಾಗಿ ಹೊರಗಿನಿಂದ ಬಂದ ದೇವಿಗೆ ಗಾಳಿಮಾರಿಯೆಂದು ಕರೆಯುವ ವಾಡಿಕೆ. ಸಾಂಕ್ರಾಮಿಕ ಬೇನೆಗಳು ಗಾಳಿಯ ಮೂಲಕವಾಗಿಯೇ ಊರಮೇಲೆಲ್ಲಾ ಪಸರಿಸಿ, ಜನರನ್ನು ಕಾಡುವುದು. ಹೀಗಾಗಿ ಮಾರಿಕಾಂಬೆ ಗಾಳಿ-ಮಾರಿಯಾಗಿ ಸಂಹಾರಕಳಾಗುತ್ತಾಳೆ. ಪ್ರಪಂಚದ ಜೀವ ಕೋಟಿಯ ಸಮತೋಲನವನ್ನು ಶ್ರೀ ದೇವಿ ತನ್ನ ಸಂಹಾರ ಕಾರ್ಯದಿಂದ ಪೂರೈಸಬೇಕಾಗುತ್ತದೆ.

ಭೂಮಿಯನ್ನು ಮಹಾಶೇಷ ಹೊತ್ತಿದ್ದಾನೆಂಬ ಪುರಾಣ ಕಲ್ಪನೆ ಜಾನಪದದಲ್ಲಿಯೂ ಇದೆ. ಜೀವ ಕೋಟಿಗಳಿಂದ ಭೂಭಾರವಾದಾಗಲೆಲ್ಲ ಅದನ್ನು ಹೊತ್ತ ಮಹಾಶೇಷನಿಗೆ ತಲೆಭಾರವಾಗುತ್ತದೆ. ಆಗ ಆತ ಗಂಗಮ್ಮ ಹಾಗೂ ಅವಳ ಅಕ್ಕ ಮಾರಮ್ಮರಿಗೆ ಮೊರೆಯಿಡುವನಂತೆ:

ದುಡ್ಡೀ ೧ ಗುಡ್ಡೀ ತುಕ್ಕಿ ೨ ಗುಡ್ಡಿ ಕಾಲನೆ ತುಕ್ಕಿ
೩ ವಿಳೊಳಿ ತುಕ್ಕಿ ನಾಬಂದೆ । ಮಾಸೇಸ
ಅರ್ಥಬಾರಗಳ ೪ ಇಳ್ಸೀದೆ । ಮಾಸೇಶ
ಸಿರ್ಸಿಯಲ್ಲೋಗು, ಸೆರಗೊಡ್ಡು।

ಮಹಾಶೇಷನ ಕೋರಿಕೆಯ ಮೇರೆಗೆ ಗಂಗಮ್ಮ ಜಲಸ್ವರೂಪಿಣಿಯಾಗಿ ಉಕ್ಕಿ ಹರಿದು ಜಲಪ್ರಳಯದಿಂದ ಮಹಾಶೇಷನ ಅರ್ಧಭಾರವನ್ನು ಇಳಿಸಿ, ಉಳಿದರ್ಧ ಭಾರವನ್ನು ಇಳಿಸಲು ಗಾಳಿ ಸ್ವರೂಪಿಣಿಯಾದ ಶಿರಸಿಯ ಗಾಳಿಮಾರಿಯ ಹತ್ತಿರ ಹೋಗಿ ಸೆರಗೊಡ್ಡಲು ಆಜ್ಞಾಪಿಸುತ್ತಾಳೆ. ಮಹಾಶೇಷನ ಕಷ್ಟವನ್ನು ಅರ್ಥಮಾಡಿಕೊಂಡ ಗಾಳಿಮಾರಿ

ಹತ್ತೂ ಸಾವಿರ ಬಂಡಿ ಮೊದಲೇ ಕಳಗಿದೆ ಮಾಸೇಸ
ಇನ್ನೂ ಸಾವಿರವ ಕಳಗೂವೆ ೫ । ಮಾಸೇಸ
ಅರುದ ಬಾರಗಳ ಇಳುಸೂವೆ । ೬

ಎಂದು ಅವನಿಗೆ ಭೂಭಾರವನ್ನು ಕಡಿಮೆ ಮಾಡುವ ಬರವಸೆಯನ್ನು ನೀಡಿ, ಸಿಡುಬು, ಗೋಣಿ, ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳನ್ನು

---

೧. ಗುಡ್ನ ೨. ತುಳುಕಿ ೩. ಮಹಾಶೇಷ ೪. ಅರ್ಧಭಾರವನ್ನು ೫. ಕಳಿಸುವೆ ೬. ಡಾ। ಎನ್.ಆರ್. ನಾಯಕ : ಜೇಂಗೊಡ.. ಪು. ೬೮





ಗಾಳಿಯಲ್ಲಿ ಬಿತ್ತಿ, ಊರಮೇಲೆಲ್ಲ ಹರಡಿ, ಲಯಕಾರಿಣಿಯಾಗಿ ಲಕ್ಷಗಟ್ಟಲೆ ಜನರನ್ನು ಕೊಂದು ಜನ ಜೀವನವನ್ನು ಕಲಕು ಮಲಕುಗೊಳಿಸುತ್ತಾಳೆ. ಗಾಳಿಯ ಉಪದ್ರವದಿಂದ ಕಂಗಾಲಾದ ಜನ ಕೊನೆಯಲ್ಲಿ ಶರಣಾಗುವುದು ಗಾಳಿಮಾರಿ - ದೊಡ್ಡಮ್ಮನಿಗೇ.

ಹರ್‍ಯ[೧] ಹಾವಿಗಂಜೆ ಉರುವಾ[೨] ಜೋತಿಗಂಜೆ
ಹುಲಿಗಂಜೆ ಹುಲಿಯಾ ಮರಿಗಂಜೆ । ದೊಡ್ಡಮ್ಮ
ನಿನಗಂಜೆ ನಾನು ನಡೆವಳು

ಹೀಗೆ ಮಾರಿಕೋಟಲೆಗಂಜಿ ಶಿರಸಿಯ ದೊಡ್ಡಮ್ಮನಿಗೆ ಶರಣಾಗಿ ಅವಳ ಸಂತೃಪ್ತಿಗಾಗಿ ಕೋಳಿ, ಕುರಿ, ಕೋಣಗಳ ಬಲಿಸಮರ್ಪಣೆಯ ಮೂಲಕ ಬಚಾವಾಗ ಬಯಸುತ್ತಾರೆ :

ಚಿರ್ಶಿಲ[೩] ಚೀವಮ್ಮಗೇ[೪] ಯಾತರ ಹರಕೆಯೋ
ಕೊಟ್ಟೈಲೆ ಬಂದ್ ಕೋಳಿ ಹರಕೆಯೋ । ಚೀವಮ್ಮಗೆ[೫]
ಕುಂಟಲೇ ಬಂದ್ ಕುರಿ ಹರಕೆಯೋ । ಚೀವಮ್ಮಗೆ
ಗೊಂಡೆ ಬಾಲದ ಕೋಣ ಹರಕೆಯೋ।

ಹೀಗೆ ತಮ್ಮ ಮೇಲೆ ಬಂದ ಕೋಟಲೆಯ ನಿವಾರಣೆಗಾಗಿ ಪ್ರಾಣಿಬಲಿಯ ಬದಲಿ ವ್ಯವಸ್ಥೆಯಿಂದ ಬಚಾವಾಗಲು ಮುಂದಾಗುತ್ತಾರೆ. ಆಧುನಿಕ ವಿಚಾರ ವಾದಿಗಳು ದಯಾಪರ ಸಂಘ ಸಂಸ್ಥೆಗಳು ಮುಂದಾಗಿ ಇಂದು ಈ ಮೂಢ ಆಚರಣೆ ಶಿರಸಿಯಲ್ಲಿ ಕಾಲಿರಿಸದಂತೆ ಮಾಡಿದ್ದಾರೆ. ಆದರೂ ಬೇರೆಡೆ ಗ್ರಾಮದೇವತೆಗಳ ಉತ್ಸವಗಳಲ್ಲಿ ಈ ಬಲಿಯ ಆಚರಣೆ ಸಂಪೂರ್ಣವಾಗಿ ನಿಂತಿಲ್ಲ.

**೯. ಮಾರಿಕಾಂಬೆ ಸಂತಾನ ರಕ್ಷಕ ದೇವತೆ :**

ತಮ್ಮ ಸಂತಾನ ರಕ್ಷಣೆಯ ಭಾರ ಮಾರಿಕಾಂಬೆಯ ಮೇಲಿದೆ ಎಂಬ ಮನೋಭಾವನೆ ಜನಸಾಮಾನ್ಯರಲ್ಲಿ ಇನ್ನೂ ಇದೆ. ಆ ಭಾವನೆಯ ದೃಢೀಕರಣಕ್ಕಾಗಿ, ಮಾರಿಕಾಂಬೆಯ ವಿಷಯದಲ್ಲಿ ಭಯ ಭಕ್ತಿ ಹುಟ್ಟಿಸಲು ಮುಂದಾಗುತ್ತಾರೆ.

---

೧. ಹರಿಯುವ ೨. ಉರಿಯುವ. ೩. ಶಿರ್ಶಿಯ ೪. ಶಿವಮ್ಮಗೆ ೫. ಬುಟ್ಟಿ ೬. ಗರ್ಭಿಣಿಯರಿಗೆ ೭. ಕೊಂಟರೆ ೮. ಮಗುವಿಗೆ

ಸಿರ್ಸಿ ಸೀವಮ್ಮ ಊರಿಗೇ ದೊಡ್ನೋಳು
ಬಸ್ರೀರ್ಗೆ ೧ ಬಂಗ ೨ ಕೊಡುವಳು। ಏನೇಳಿ
ಸಿಸುಗೆ ೩ ನನ್ನೇಸ್ರು ಇಡ್ರೆಂದಿ ।

ಹುಟ್ಟಲಿರುವ ಶಿಶುಗಳಿಗೆ ಮಾರಿಕಾಂಬೆಯ ಹೆಸರಿಡದಿದ್ದಲ್ಲಿ ಸುಖಪ್ರದ ಹೆರಿಗೆಗೆ ಆಕೆ ಆತಂಕವೊಡ್ಡುವಳೆಂಬ ಭಯದಿಂದ ಅನೇಕರು ತಮ್ಮ ಮಕ್ಕಳಿಗೆ ಶ್ರೀ ಮಾರಿಕಾಂಬೆಯ ಹೆಸರನ್ನಿಟ್ಟು ಮಕ್ಕಳ ರಕ್ಷಣೆಯ ಭಾರವನ್ನು ಶ್ರೀದೇವಿಯ ಕೊರಳಿಗೇ ಕಟ್ಟುತ್ತಾರೆ. ಗರ್ಭಿಣಿಯರು ತಮ್ಮ ಗರ್ಭ ರಕ್ಷಣೆಗಾಗಿ ಮಾರಿಕಾಂಬೆಗೆ ಗಬ್ಬದ ಕುರಿಯ ಹರಕೆ ಹೊರುವ ಸಂಪ್ರದಾಯವೂ ಇತ್ತು.

**ಈ. ಮಾರಿಕಾಂಬೆ - ರೇಣುಕೆ - ಎಲ್ಲಮ್ಮ :**

ಮಾರಿಕಾಂಬೆಯನ್ನು ಕುರಿತಿರುವ ವದಂತಿಯ ಆಧಾರದ ಮೇಲೆ ಶಿರಸಿಯವರ ಗ್ರಾಮದೇವತೆಯೂ ಆದ ಚಂದ್ರಗುತ್ತಿಯ ರೇಣುಕೆಗೆ ಪರ್ಯಾಯ ವ್ಯವಸ್ಥೆಯಾಗಿ, ಮಾರಿಕಾಂಬೆಯನ್ನು ಶಿರಸಿಯ ಗ್ರಾಮದೇವತೆಯಾಗಿ ಸ್ಥಾಪಿಸಿಕೊಂಡಿರಬಹುದಾದ ಸಾಧ್ಯತೆಯನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಆದ್ದರಿಂದ ಮಾರಿಕಾಂಬೆ, ರೇಣುಕೆಯರು ಅಭಿನ್ನರೆನ್ನುವುದು ಸುಸ್ಪಷ್ಟ. ದಕ್ಷಿಣ ಭಾರತದಲ್ಲನೇಕ ಕಡೆ ರೇಣುಕೆಯ ಮಾರ್ಪಾಟಾದ ರೂಪವೇ ಮಾರಿಯೆನ್ನುವ ಅಭಿಪ್ರಾಯವಿದೆ. ಮಾರ್+ಅಮ್ಮ=ಮಾರಮ್ಮ ಎಂದರೆ ಬದಲಾದ(ಮಾರ್+ಪಡು) ಮಾರ್ಪಟ್ಟ ಅಮ್ಮನೇ ಮಾರಮ್ಮ. ಪುರಾಣದಲ್ಲಿ ಪರಶುರಾಮನು ತಂದೆಯ ಆದೇಶದಂತೆ ತನ್ನ ತಾಯಿಯ ತಲೆಕಡಿದು ತಂದೆಯನ್ನು ತೃಪ್ತಿಪಡಿಸಿ, ಪುನಃ ತಾಯಿಯನ್ನು ಬದುಕಿಸಲು ತಂದೆಯಿಂದ ವರ ಪಡೆದು, ತಾಯಿಯ ಬೇರ್ಪಟ್ಟ ರುಂಡ ಮುಂಡಗಳನ್ನು ಕೂಡಿಸುವಾಗ, ತಾಯಿಯ ರುಂಡಕ್ಕೆ ಬೇರೊಂದು ರುಂಡವನ್ನು ಜೋಡಿಸಿದುದರಿಂದ ರೇಣುಕೆ ವಿಕಾರಗೊಂಡು ಮಾರಿಯಾದಳು ಎನ್ನುತ್ತಾರೆ. ಏಳು ಗುಡ್ಡದ ಅಮ್ಮ-ಎಲ್ಲಮ್ಮನ ವಿಷಯದಲ್ಲಿಯೂ ಇದೇ ಕತೆಯಿದೆ. ಆದ್ದರಿಂದ, .ರೇಣುಕೆ, ಎಲ್ಲಮ್ಮ ಮಾರಿಯಮ್ಮ ಎಲ್ಲ ಒಂದೇ ದೇವತೆಯ ಭಿನ್ನಹೆಸರುಗಳು ಎನ್ನುವುದು ಸ್ಪಷ್ಟ.

**ಉ. ಮಾರಿಕಾಂಬೆ - ಮಹಿಷಾಸುರ ಮರ್ದಿನಿ :**

ಶ್ರೀ ಮಾರಿಕಾಂಬೆಯನ್ನು ಆದಿ ಶಕ್ತಿ ಸ್ವರೂಪಿಣಿಯಾಗಿ ಕಂಡು, ಅವಳ





ಮೂರ್ತಿಯನ್ನು ಮಹಿಷಾಸುರ ಮರ್ದಿನಿಯಂತೆ ಕೆತ್ತಲಾಗಿದೆ. ಮಹಿಷಾಸುರ ಮರ್ದಿನಿಯ ಕತೆಗೂ, ಕೋಣನ ರೂಪತಾಳಿ ಶ್ರೀದೇವಿಯಿಂದ ಹತನಾದ ಮಾದಿಗ ಯುವಕನ ಕತೆಗೂ ಹೇಗೋ ಸಂಬಂಧ ಕಲ್ಪಿಸಿ ಹೇಳುವವರೂ ಇದ್ದಾರೆ. "ಸಕಲ ದೇವತೆಗಳಿಗೆ ಪೀಡಕನಾಗಿ, ಪ್ರಪಂಚವನ್ನೇ ನಡುಗಿಸಿದ, ಕೊನೆಗೆ ಶ್ರೀ ದೇವಿಯಿಂದ ಹತನಾದ ದೇವಿಯ ಪತಿಯಲ್ಲದ ಮಹಿಷಾಸುರನ ಕತೆಗೂ ದೇವಿಯ ಪತಿಯಾಗಿ ಅವಳಿಂದ ಕೋಣನ ರೂಪದಲ್ಲಿ ಹತನಾದ ಮಾದಿಗ ಯುವಕನ ಕತೆಗೂ ಸಂಬಂಧ ಕಲ್ಪಿಸುವುದು ಆಭಾಸ"[13] ಮಾರಿಕಾಂಬೆಯ ಕತೆಯಲ್ಲಿ ಬರುವ ಮಾದಿಗ ಯುವಕ ಲೋಕ ಕಂಟಕನಲ್ಲ. ಆಧುನಿಕ ದೃಷ್ಟಿಗೆ ಅವನು ಮಾಡಿದ ಅಪರಾಧವೂ ಕಾಣಿಸದು. ಸ್ಥಾನ ದಾನಕ್ಕಾಗಿ ಆತ ವೇಷ ಬದಲಿಸಿಕೊಂಡುದ್ದು ಬ್ರಾಹ್ಮಣ ವಟುವೆಂದು ಸುಳ್ಳು ಹೇಳಿದ್ದು ಅಪರಾಧವಾದರೆ, ದಲಿತರಿಗೆ ವೇಧಾಧ್ಯಯನವೇ ದಕ್ಕದಂತೆ ಮಾಡಿದ್ದೂ ಅಷ್ಟೇ ಅಪರಾಧವಾಗುತ್ತದೆ. ಆವಿಚಾರವಿಲ್ಲ ಅಪ್ರಕೃತ. ಒಟ್ಟಿನಲ್ಲಿ ದೇವಿಯು ಮಹಿಷಾಸುರಮರ್ದಿನಿಯಂತೆ ರೂಪುಗೊಳ್ಳಲು ವೈದಿಕ ತಂತ್ರಾಗಮಗಳ ಪ್ರಭಾವ ಕಾರಣವೇ ವಿನಃ ಮಾದಿಗ ಯುವಕನ ಕತೆಯಲ್ಲ ಎನ್ನುವುದು ನನಗೆ ಹೇಳಬೇಕಾದದ್ದು.

**ಊ. ಮಾರಿಕಾಂಬೆಯ ಪರಿವಾರ ದೇವತೆಗಳು :**

ಮಾರಿಕಾಂಬೆಯ ಗರ್ಭಗುಡಿಯಲ್ಲಿ, ಆವಾರದಲ್ಲಿ ಹಾಗೂ ಹೊರಗೆ ಊರೂರುಗಳಲ್ಲಿ ಮಾರಿಕಾಂಬೆಯ ಜೊತೆಯಲ್ಲಿ ಸಂಬಂಧವನ್ನು ಹೊಂದಿದ ಅನೇಕ ದೇವತೆಗಳಿವೆ.

**ಅ. ಭೂತಪ್ಪ - ಬೂತರಾಜ :**

ಶ್ರೀ ಮಾರಿಕಾಂಬೆಗೆ ಭೂತಪ್ಪ ಭೂತರಾಜನೆಂಬ ಶಕ್ತಿಶಾಲಿಯಾದ ಕಾವಲುಗಾರ ಮಾರಿಗುಡಿಯ ಪಕ್ಕದಲ್ಲಿಯೇ ಇದ್ದಾನೆ ಈ ಭೂತಪ್ಪನ ಗುತ್ತಿಗೆ ಹಿಂದೆ'ನಾಗರಗುತ್ತಿ' ಎಂದು ಕರೆಯುತ್ತಿದ್ದರಂತೆ. ಆದ್ದರಿಂದ ಇದು ನಾಗದೇವತೆಯ ಗುತ್ತಾಗಿರಬೇಕು. ನಾಗದೇವತೆ ಸಂತಾನ ರಕ್ಷಕ ದೇವತೆಯೆಂಬ ನಂಬಿಕೆಯಿದೆ. ಗರ್ಭಿಣಿ ಹೆಂಗಸರು ತಮ್ಮ ಗರ್ಭರಕ್ಷಣೆಗಾಗಿ ಭೂತಪ್ಪನಿಗೆ ಹರಕೆ ಹೊರುವುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಹುಚ್ಚು ಹಿಡಿದವರು ಅದರಿಂದ ವಿಮುಕ್ತಿ ಪಡೆಯಲು,

13. ಡಾ|| ಎನ್. ಆರ್. ನಾಯಕ: ಶಿರಸಿಯ ಶ್ರೀ ಮಾರಿಕಾಂಬೆ, ಜಾನಪದ ಸಾಹಿತ್ಯದರ್ಶನ, ಸಂ. ೮ ಪು. ೧೫೩

ಸಪ್ಪುಕಡಿಯಲು ಕಾಡಿಗೆ ಹೋಗುವ ಸೇರೇಗಾರರು ಸಪ್ಪಿನ ಗಿಡದಲ್ಲಿ ವಾಸವಾಗಿರುವ ದುಷ್ಟ ಶಕ್ತಿಗಳನ್ನು ನಾಶ ಮಾಡಲು, ಭೂತಪ್ಪನಿಗೆ ಹರಕೆ ಹೊರುತ್ತಾರೆ. ಭೂತಪ್ಪನ ಮುಂದೆ ದುಷ್ಟಶಕ್ತಿಗಳ ಆಟವಾಗಲಿ ಥಾಂಬಿಕ ನಡವಳಿಕೆಯಾಗಲಿ ನಡೆಯುವದಿಲ್ಲ.

ಮಾರಿಜಾತ್ರೆಗೆ ಒಂದು ವಾರ ಮೊದಲು ಶ್ರೀದೇವಿಯ ಮೂರ್ತಿಗೆ ಬಣ್ಣಹಾಕಲು ಶ್ರೀದೇವಿಯನ್ನು ವಿಸರ್ಜನೆ ಮಾಡಿದ ದಿನದಿಂದ, ಮರು ಪ್ರತಿಷ್ಠಾಪನೆಯ ವರೆಗೂ ಶ್ರೀದೇವಿಗೆ ಸಲ್ಲಿಸುವ ಪೂಜೆಯನ್ನು ಭಕ್ತಾದಿಗಳು ಭೂತಪ್ಪನಿಗೇ ಸಲ್ಲಿಸುತ್ತಾರೆ. ಜಾತ್ರೆಯ ಸಮಯದಲ್ಲಿ ಶ್ರೀದೇವಿ ರಥವನ್ನೇರಲು ಹೋಗುವಾಗ ಭೂತಪ್ಪನಿಗೆ ಬಲಿ ನೀಡುವ ರಿವಾಜಿದೆ.

**ಆ. ಮರ್ಕಿ-ದುರ್ಗಿ :**

ಮಾರಿಕಾಂಬೆ ಶಿರಸಿಗೆ ಬರುವ ಪೂರ್ವದಲ್ಲಿ ಮರ್ಕಿ-ದುರ್ಗಿಯರೆಂಬ ಈ ಜೋಡು ದೇವತೆಗಳು ಶಿರಸಿಯ ಗ್ರಾಮದೇವತೆಗಳಾಗಿದ್ದಂತಿದೆ. ಲಮಾಣಿಗಳು ಹಾಗೂ ಕುರುಬರು ಇಂದೂ ಸಹ ಗ್ರಾಮದೇವತೆಯೆಂದೇ ಇವಳನ್ನು ಪರಿಗಣಿಸುತ್ತಾರೆ. ಶಿರಸಿಗೆ ಮಾರಿಕಾಂಬೆಯ, ಆಗಮನದ ನಂತರ ಈ ದೇವತೆಗಳ ಪ್ರಭಾವ ಕುಂದಿದಂತಿದೆ. ಆದರೂ ಕೆಳವರ್ಗದ ಅನೇಕರು ಈ ದೇವತೆಗಳಿಗೆ ಇನ್ನೂ ನಿಷ್ಠೆಯಿಂದ ನಡಕೊಳ್ಳುತ್ತಾರೆ. ಮರ್ಕಿ ಅಕ್ಕನಾದರೆ ದುರ್ಗಿ ತಂಗಿ. ಹೊಲಬೆಳೆ ಬೇಸಾಯಗಳ ರಕ್ಷಕಿ ಮರ್ಕೆಮ್ಮನಾದರೆ, ದುರ್ಗಕೋಟೆ ಕೊತ್ತಳಗಳ ರಕ್ಷಕಿ ದುರ್ಗಮ್ಮ. ಹಿಂದೆ ಪಡಲಿಗೆಯ ರೂಪದಲ್ಲಿ ಪೂಜೆಗೊಳ್ಳುವ ಈ ದೇವತೆಗಳನ್ನು ಈಗ ಮರದ ಮೂರ್ತಿಗಳಾಗಿ ಕಂಡರಿಸಲಾಗಿದೆ. ಜಾತ್ರೆಯ ಸಮಯಕ್ಕೆ ಶ್ರೀ ಮಾರಿಕಾಂಬೆಗೆ ಬಣ್ಣ ಹಾಕಲು ಕೊಡುವ ಸಮಯದಲ್ಲಿಯೇ ಈ ಮೂರ್ತಿಗಳನ್ನೂ ವಿಸರ್ಜಿಸಿ ಜಿನಗಾರರಿಗೆ ಬಣ್ಣ ಹಾಕಲು ಕೊಡಲಾಗುತ್ತದೆ. ಬಣ್ಣ ಹಾಕಿದ ಜಿನಗಾರರು ಮಾರಿಕಾಂಬೆಯ ಜೊತೆಯಲ್ಲಿಯೇ ಈ ಜೋಡು ದೇವತೆಗಳಿಗೂ ದೃಷ್ಟಿಯನ್ನು ನೀಡಿ, ಪೂಜಿಸಿ, ಮೂರ್ತಿಗಳನ್ನು ಅವುಗಳ ಗುಡಿಯಲ್ಲಿ ಪೂಜೆಗೆ ಅನುವು ಮಾಡಿಕೊಡುತ್ತಾರೆ. ಜಾತ್ರೆಯ ಸಮಯದಲ್ಲಿ ಈ ದೇವತೆಗಳಿಗೂ ಹಣ್ಣುಕಾಯಿ, ಉಡಿ ತುಂಬಿಸುವುದು, ಬೇವಿನುಡಿಗೆಯ ಸೇವೆಯನ್ನು ಸಲ್ಲಿಸುವುದು ಮುಂತಾದ ಹರಕೆಗಳನ್ನು ಸಲ್ಲಿಸುತ್ತಾರೆ.

**ಇ. ಆವಾರದಲ್ಲಿಯ ಇನ್ನಿತರ ದೇವತೆಗಳು:**

ಇಂದು ಮಾರಿಗುಡಿಯಿರುವ ಸ್ಥಳ ಕೋಟೆಗೆ ಸಂಬಂಧಿಸಿದ ರುದ್ರಭೂಮಿಯಾಗಿತ್ತೆಂದು ಹೇಳಲಾಗುತ್ತದೆ. ಇದನ್ನು ದುರ್ಗಿ ಶ್ಮಶಾನವೆಂದೂ





ಕರೆಯುತ್ತಿದ್ದರು. ಈ ಸ್ಥಳದಲ್ಲಿ ವೀರಗಲ್ಲು, ಮಾಸ್ತಿಗಲ್ಲು ಹಾಗೂ ಸಾಧು ಸಂತರಿಗೆ ಸಂಬಂಧಿಸಿದ ಕಲ್ಲುಗಳೂ ಇವೆ. ಎರಡಡಿ ಎತ್ತರದ ಕೈತೋಳು ಮೇಲೆತ್ತಿದ ವೀರಗಲ್ಲೊಂದು ಗರ್ಭಗುಡಿಯ ಬಲ ಪಾರ್ಶ್ವದ ಗೋಡೆಯ ಗೂಡಿನಲ್ಲಿದೆ. ನಾಗರ ಕಲ್ಲುಗಳೊಡನೆ ಅದೂ ಪೂಜೆಗೊಳ್ಳುತ್ತದೆ. ಈ ಅಂಶಗಳೆಲ್ಲ ಇಂದು ಮಾರಿಗುಡಿಯಿದ್ದ ಸ್ಥಳ ಒಂದು ವೀರ ಕಳವಾಗಿತ್ತೆಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ.

**ಈ. ಊರ ಮೇಲಿನ ಪರಿವಾರ ದೇವತೆಗಳು :**

ಶಿರಸಿಯ ಮಾರಿಕಾಂಬೆಗೆ ದ್ಯಾಮವ್ವ, ದುರ್ಗವ್ವ, ಸಣ್ಣಮ್ಮ, ಕರಿಯಮ್ಮ, ಬೆಳಿಯಮ್ಮ, ಕಾಡಿಯಮ್ಮ ಮುಂತಾದ ತಂಗಿಯರಂತೆ. ಈ ಏಳು ಮಂದಿ ಅಕ್ಕತಂಗಿಯರ ಕಲ್ಪನೆ ಮುಂದೆ ಸಪ್ತಮಾತೃಕೆಯರ ಉಗಮಕ್ಕೆ ಪ್ರೇರಣೆ ನೀಡಿರಬೇಕು ಅಥವಾ ತದ್ವಿರುದ್ಧವಾಗಿಯೂ ಆಗಿರಬಹುದು. ಏಳು ಮಂದಿ ಅಕ್ಕ ತಂಗಿಯರ ಹೆಸರುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಕೆಲವರು ಹಾನಗಲ್ಲಿನ ದ್ಯಾಮವ್ವನೇ ಹಿರಿಯಳೆಂದು ಹೇಳುತ್ತಾರೆ. ಮಾರಿಕಾಂಬೆ ಶಿರಸಿಗೆ ಬಂದ ಕತೆಗನುಸಾರವಾಗಿ ಚಿಂತನೆ ಮಾಡಿದರೆ, ದ್ಯಾಮವ್ವ ಹಿರಿಯಳಾಗುತ್ತಾಳೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ದ್ಯಾಮವ್ವನ ಜಾತ್ರೆಯಲ್ಲಿ ದ್ಯಾಮವ್ವನು ಶಿರಸಿಯ ಅಕ್ಕನ ಮನೆಗೆ ಹೋಗುತ್ತೇನೆಂದು ಹೊರಡುವ ಚಡಂಗವೊಂದಿದೆ. ಅದೇನೇ ಇದ್ದರೂ ಉತ್ತರ ಕನ್ನಡದ ಮಟ್ಟಿಗೆ ಶಿರಸಿಯ ಮಾರಿಕಾಂಬೆಯೇ ಎಲ್ಲರಿಗಿಂತ ಹಿರಿಯಳು. ಈ ದೊಡ್ಡಮ್ಮನ ಕೈ ಕೆಳಗೆ ಪ್ರತಿ ಊರುಗಳಲ್ಲಿ ಇವಳ ತಂಗಿಯರಾದ ಬೇರೆ ಬೇರೆ ಅಮ್ಮನವರಿರುತ್ತಾರೆ. ಅವರಿಗೆ ಬಂಟರಾಗಿ ಬೀರ ಜಟಗಗಳಿರುತ್ತವೆ. ಈ ತಂಗಿಯರು ಅಕ್ಕನ ಆದೇಶದಂತೆ ತಮ್ಮ ಬಂಟರ ಸಹಾಯದಿಂದ ಊರಿನಲ್ಲಿ ಹರಡುವ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುತ್ತಾರೆ. ಈ ಉಪಕಾರ ಸ್ಮರಣೆಗಾಗಿ ಭಕ್ತರು ಅಮ್ಮ ಹಾಗೂ ಅವಳ ಪರಿವಾರ ಬಂಟರಿಗೆ ಬಂಡಿಹಬ್ಬವನ್ನು ಆಚರಿಸಿ, ಕೋಳಿ ಕುರಿಗಳ ಬಲಿಯಿಂದ ಆ ದೇವತೆಗಳನ್ನು ಸಂತೃಪ್ತಿ ಪಡಿಸುತ್ತಾರೆ. ಬಂಡಿ ಹಬ್ಬದಲ್ಲಿ ಕೋಣನ ಬಲಿಗೆ ನಿಷೇಧವಿದೆ. ಬಂಡಿ ಹಬ್ಬದಲ್ಲಿ ಬಲಿ ಕೊಡುವುದರಲ್ಲಿ ಏನಾದರೂ ಏರು ಪೇರಾದರೆ `ಅಮ್ಮ' ಕೆರಳಿ ಊರ ಮೇಲೆಲ್ಲ ಪಿಡುಗನ್ನು ಹರಡಿ, ಪೈರು ಪಸಲು, ದನಕರು, ಮಾನವರ ಸಂಹಾರಕ್ಕೆ ತೊಡಗಿ, ತನಗೆ ಬೇಕಾದ ರಕ್ತ ಬಲಿಯನ್ನು ಪೂರೈಸಿಕೊಳ್ಳುವಳೆಂಬ ನಂಬಿಕೆ ಜನಸಾಮಾನ್ಯರಲ್ಲಿದೆ.

ಶ್ರೀ ಮಾರಿಕಾಂಬೆ ಶಿರಸಿಯ ಜನಸಾಮಾನ್ಯರಿಗೆ ಗ್ರಾಮದೇವತೆಯಾದರೂ ತನ್ನ ಮಹಿಮೆಯಿಂದ ದೇಶದ ನಾನಾ ಮೂಲೆಗಳಿಂದ ಭಕ್ತ ಸಮುದಾಯವನ್ನು

ಹೊಂದಿದ್ದಾಳೆ. ಕರ್ಮಠ ಬ್ರಾಹ್ಮಣರು, ಶಿವನಲ್ಲದೆ ಅನ್ಯದೇವತೆಗಳಿಗೆರಗದ ವೀರಶೈವರು, ಕ್ರಿಶ್ಚನ್ನರು, ಮುಸಲ್ಮಾನರು ಹೀಗೆ ಜಾತಿ, ಮತ, ಪಂಥ ಭೇದವಿಲ್ಲದೆ ಮೈಲಿ, ಸಿಡುಬು, ಗೋಣಿಕಾಲರಾ ಮುಂತಾದ ಭಯಾನಕವಾದ ಸಾಂಕ್ರಾಮಿಕ ರೋಗಗಳು ಬಂದು ಜನಸಮೂಹವನ್ನು ಕಾಡುವಾಗ, ದನಕರುಗಳಿಗೆ ಕಾಲೊಡೆತ, ಬಾಯೊಡೆತ ರೋಗಗಳು ಬಂದು ಹುಲ್ಲು, ನೀರು, ಬಿಟ್ಟಗಳಿಗೆಯಲ್ಲಿ ಈ ದೇವತೆಗೆ ಹರಕೆ ಸಲ್ಲಿಸಿ ರೋಗ ವಿಮುಕ್ತಿಗೆ ಹಾರೈಸುವುದುಂಟು. ಹೀಗೆ ಮಾರಿಕಾಂಬೆ ಸರ್ವರಕ್ಷಕ ದೇವತೆಯಾಗಿದ್ದಾಳೆ.

ಮಾರಿ-ಅಮ್ಮನ ಉಪಾಸನೆಯ ಪ್ರಾಥಮಿಕ ಹಂತದಲ್ಲಿ ದೇವತೆಯ ಮೂರ್ತಿಯಾಗಲಿ ನಿತ್ಯ ಉಪಾಸನೆಯಾಗಲಿ, ಮೂರ್ತಿಗೆ ಗುಡಿಯಾಗಲಿ ಇದ್ದಂತಿಲ್ಲ. ಶ್ರೀ ದೇವಿಯ ಹೆಸರಿನಲ್ಲಿ ಪಡಲಿಗೆಗಳನ್ನು ಮಾತ್ರ ಪೂಜಿಸುತ್ತಿದ್ದಂತಿದೆ; ಇಂದೂ ಶಿರಸಿಯ ಜಾತ್ರೆಯಲ್ಲಿ ಪಡಲಿಗೆಗಳನ್ನು ಪೂಜಿಸುವ ರಿವಾಜಿದೆ. ಶ್ರೀದೇವಿಯ ಮೂರ್ತಿ ಕಲ್ಪನೆ ಅನಂತರಿನ ಬೆಳವಣಿಗೆಯಾಗಿದೆ. ಹಬ್ಬ ಇಲ್ಲವೆ ಜಾತ್ರೆಯ ಕಾಲಕ್ಕೆ ಶ್ರೀದೇವಿಯ ಜಂಗಮಮೂರ್ತಿಯನ್ನು ಮಾಡಿಸಿ, ಜಾತ್ರೆಯ ಅನಂತರದಲ್ಲಿ ವಿಸರ್ಜಿಸುವ ಪದ್ಧತಿ ಹಲವೆಡೆಯಿತ್ತು. ಹಾನಗಲ್ಲಿನ (ಬಂಕಾಪುರದ?) ವಿಸರ್ಜಿತ ಮೂರ್ತಿಯನ್ನೇ ತಮ್ಮ ಹಿಂದಿನ ಗ್ರಾಮದೇವತೆಯಾದ ಚಂದ್ರಗುತ್ತಿಯ ರೇಣುಕೆ (ಗುತ್ತಿಯಮ್ಮ)ಗೆ ಬದಲಾಗಿ, ಆರಂಭಿಕ ಹಂತದಲ್ಲಿ ಶಿರಸಿಯವರು ಪ್ರತಿಷ್ಠಾಪಿಸಿ, ಜಾತ್ರೆಯನ್ನು ನಡೆಸಿ, ತಮ್ಮೂರಿಗೊಂದು ಗ್ರಾಮ ದೇವತೆಯನ್ನು ಸ್ಥಿರವಾಗಿರಿಸಿಕೊಂಡಿರಬಹುದಾದದ್ದನ್ನು ಹಿಂದೆ ನಿರೂಪಿತ ಕೆಲವು ವದಂತಿಗಳು ಸ್ಥಿರೀಕರಿಸುತ್ತವೆ. ಕ್ರಮೇಣ ದೇವಿಯ ಮಹಿಮೆ ಬೆಳೆಯುತ್ತ ಹೋದಂತೆ, ಜಾನಪದೀಯ ಆರಾಧನಾ ಕ್ರಮ ಸ್ವಲ್ಪಸ್ವಲ್ಪ ಕಡಿಮೆಯಾಗುತ್ತ, ದೇವಿಯ ಮೂರ್ತಿ ರಚನೆ, ದೇವಾಲಯದ ವಿನ್ಯಾಸ ಕ್ರಮ, ಉಪಾಸನೆಯ ವಿಧಿ ವಿಧಾನಗಳಲ್ಲಿ ವೈದಿಕ ತಂತ್ರಾಗಮಗಳ ಪ್ರಭಾವವಾಗಿ ಶಿರಸಿಯ ಮಾರಿಕಾಂಬೆ ಕ್ರಮೇಣ ಶಕ್ತಿ ಸ್ವರೂಪಿಣಿಯಾಗಿ ಮಾರ್ಪಟ್ಟಳು. ಹೀಗಾಗಿ ಇಂದಿನ ಮಾರಿಕಾಂಬೆ, ಮರದಮ್ಮ, ಮಹಾಸತಿ, ರೇಣುಕೆ, ಮಹಿಷಾಸುರ ಮರ್ದಿನಿ, ವೇದಶಾಸ್ತ್ರಾಗಮಗಳಲ್ಲಿ ಪ್ರಖ್ಯಾತಳಾದ ಅಂಬಾ, ಜಗದಂಬಾ, ಆದಿಶಕ್ತಿ, ಅವಳ ಭಿನ್ನ ಸ್ವರೂಪಗಳಾದ ಮಹಾಸರಸ್ವತಿ, ಮಹಾಲಕ್ಷ್ಮಿ, ಮಹಾಕಾಳಿಯರ ಸಮನ್ವಯ ಮೂರ್ತಿಯಾಗಿದ್ದಾಳೆ; ಜಾನಪದ - ಅಭಿಜಾತ ಮಾತೃದೇವತೆಯರ ಸಂಗಮವಾಗಿದ್ದಾಳೆ. ಮಾತೃದೇವತೆಯ ಪೂರ್ಣವಿಕಾಸದ ದ್ಯೋತಕವಾಗಿದ್ದಾಳೆ.



ಅಧ್ಯಾಯ ೩

# ಜಾತ್ರೆ - ಉತ್ಸವಗಳು

**ಉತ್ಸವಗಳು :**

ಶ್ರೀ ಮಾರಿಕಾಂಬೆಯ ದೇವಾಲಯದಲ್ಲಿ ನಡೆಯುವ ಪ್ರಮುಖವಾದ ಜಾತ್ರೋತ್ಸವದ ಪದರು ಪದರುಗಳನ್ನು ಬಿಚ್ಚಿ ಎಳೆ ಎಳೆಯಾಗಿ ವಿವರಿಸುವುದು ನನ್ನ ಮುಖ್ಯ ಉದ್ದೇಶವಾದರೂ, ಇಲ್ಲಿ ನಡೆಯುವ ಇನ್ನಿತರ ಉತ್ಸವಗಳ ಸ್ಥೂಲ ವಿವರಣೆಯನ್ನು ನೀಡುವುದು ವಿಷಯ ವಸ್ತುವಿನ ಪೂರ್ಣತೆಯ ದೃಷ್ಟಿಯಿಂದ ಮಹತ್ವದ್ದಾಗುತ್ತದೆ. ಶ್ರೀ ಮಾರಿಕಾಂಬೆ, ಜಾನಪದ ಮಾರಿ-ಅಮ್ಮ ಹಾಗೂ ಅಭಿಜಾತ ಶಕ್ತಿದೇವತೆ ಇವುಗಳ ಸಮ್ಮಿಶ್ರ ಸಂಕೀರ್ಣ ಸ್ವರೂಪದವಳಾಗಿದ್ದುದರಿಂದ ಇಲ್ಲಿ ನಡೆಯುವ ಉತ್ಸವಗಳೂ ಸಹ ಅವೆರಡು ಮೂಲಗಳಿಗೂ ಸಂಬಂಧಿಸಿದವುಗಳೇ ಆಗಿವೆ. ಇಲ್ಲಿ ನಡೆಯುವ ಉತ್ಸವಗಳನ್ನು ಪ್ರಮುಖವಾಗಿ ಎರಡು ಬಗೆಯಲ್ಲಿ ವಿಂಗಡಿಸಬಹುದು (ಅ) ವಾರ್ಷಿಕ ಉತ್ಸವಗಳು (ಬ) ವಿಶೇಷ ಉತ್ಸವಗಳು.

**ಅ) ವಾರ್ಷಿಕ ಉತ್ಸವಗಳು :**

ಸಾಮಾನ್ಯವಾಗಿ ಈ ಉತ್ಸವಗಳು ವರ್ಷಕ್ಕೊಮ್ಮೆ ನಿಶ್ಚಿತ ತಿಥಿ ಮಿತಿ, ಇಲ್ಲವೇ ದಿನಾಂಕಗಳಲ್ಲಿ ನಡೆಯುತ್ತವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ (i) ನವರಾತ್ರಿ (ii) ದೀಪಾವಳಿ (iii) ಕಾರ್ತಿಕ ಉತ್ಸವ (iv) ಜಯಂತಿ ಉತ್ಸವ (v) ರಾಷ್ಟ್ರೀಯ ಉತ್ಸವಗಳು.

**I. ನವರಾತ್ರಿ :**

ಶಕ್ತಿಯ ಉಪಾಸನೆಗೆ ಮೀಸಲಾದ ನವರಾತ್ರಿಯ ಉತ್ಸವವು ಬಹುಮಟ್ಟಿಗೆ ಜಾನಪದೀಯವಲ್ಲ, ಶಾಸ್ತ್ರೋಕ್ತ. ಆಶ್ವಿನ ಶುದ್ಧ ಪ್ರತಿಪದೆಯಂದು ಮಂಗಲ ಘಟಸ್ಥಾಪನೆಯಿಂದ ಹಿಡಿದು ವಿಜಯದಶಮಿಯವರೆಗೆ ಈ ಉತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ನವದುರ್ಗೆಯರನ್ನು ಶಾಸ್ತ್ರೋಕ್ತ ರೀತಿಯಲ್ಲಿ ಆರಾಧಿಸಲಾಗುತ್ತದೆ. ಶಕ್ತಿ ಸ್ವರೂಪಿಣಿಯರಾದ ಮಹಾಸರಸ್ವತಿ ಮಹಾಲಕ್ಷ್ಮಿ

ಮಹಾಕಾಳಿಯರನ್ನು ಪೂಜಿಸಲಾಗುತ್ತದೆ. ಲೋಕ ಕಂಟಕರಾದ ರಕ್ತ ಬೀಜ ಚಂಡ, ಮುಂಡ ಮಹಿಷಾಸುರಾದಿ ರಕ್ಕಸರನ್ನು ಶ್ರೀದೇವಿಯು ಕೊಂದಿಕ್ಕಿ ಶಿಷ್ಟ ರಕ್ಷಣೆ ಮಾಡಿದ್ದನ್ನು ನೆನೆಯಲಾಗುತ್ತದೆ.

ನವಮಿಯಂದು ಕುಮಾರಿಕಾ ಪೂಜೆ ನಡೆದು, ಅಂದು ಶ್ರೀದೇವಿಗರ್ಪಿಸಿದ ಎಡೆಯನ್ನು ಕುಮಾರಿಕೆಯರ ಪ್ರತಿನಿಧಿಗಳಾದ ಜೋತಗಿಯರಿಗೆ ನೀಡಲಾಗುತ್ತದೆ. ವಿಜಯದಶಮಿಯಂದು ಶ್ರೀದೇವಿಯ ಪಡಲಿಗೆಗಳನ್ನು ಹೊತ್ತ ಜೋಗತೇರು, ನಗರದ ಮನೆ ಮನೆಗಳಿಗೆ ಹೋಗಿ, ಉಡಿ ತುಂಬಿಕೊಂಡು ಬರುತ್ತಾರೆ. ಸೀಮೋಲಂಘನೆಯ ಮೆರವಣಿಗೆ, ಬನ್ನಿಮುಡಿಯುವುದೆಲ್ಲ ವಿದ್ಯುಕ್ತವಾಗಿ ನಡೆಯುತ್ತವೆ. ಕೊನೆಯಲ್ಲಿ ಶ್ರೀದೇವಿಯ ನವರಾತ್ರಿಯ ಕಲಶ ಮಾಲೆಗಳನ್ನು ವಿಸರ್ಜಿಸಲು ದೇವಿಯ ಉತ್ಸವಮೂರ್ತಿ ಕೋಟೆ ಕೆರೆಗೆ ಹೋಗಿ, ಮಾಲೆಯನ್ನು ವಿಸರ್ಜಿಸಿ ಹಿಂತಿರುಗುತ್ತದೆ. ವಿಸರ್ಜನೆಯ ಕಾರ್ಯದ ಮೊದಲು ಅಲ್ಲಿ ನೆರೆದ ಗಂಡು, ಹೆಣ್ಣುಗಳೆಂಬ ಭೇದವಿಲ್ಲದೆ ಎಲ್ಲರಿಗೆ ಅಕ್ಕಿ, ಕಡ್ಲೆ, ಎಲೆ ಅಡಿಕೆ, ಬಾಳೆಹಣ್ಣುಗಳ ಉಡಿ ತುಂಬುವ ವಿಶೇಷ ಕಾರ್ಯಕ್ರಮವೊಂದು ನಡೆಯುತ್ತದೆ. ಇದಕ್ಕೆ "ದೇವಸ್ಥಾನದ ದಾಖಲೆಗಳಲ್ಲಿ ಪಡಿಯಾಟವೆಂದೂ ಕಳಸ ವಿಸರ್ಜನೆಗೆ, ತೆಪ್ಪೋತ್ಸವವೆಂದೂ ಹೆಸರು ಇದ್ದುದು ನೋಡಿದರೆ, ಕೋಟೆಕೆರೆಯಲ್ಲಿ ಒಂದು ಕಾಲಕ್ಕೆ ವೈಭವದ ತೆಪ್ಪೋತ್ಸವ ದೋಣಿಗಳ ಮೇಲೆ ನಡೆಯುತ್ತಿರಬೇಕು"[1] ಎಂದು ಊಹಿಸಲಾಗುತ್ತದೆ.

ಮಾರಿಕಾಂಬೆಯ ನವರಾತ್ರಿಯ ಉತ್ಸವವು ಇಂದು ಬರಿಯ ಧಾರ್ಮಿಕ ಉತ್ಸವವಷ್ಟೇ ಆಗುಳಿಯದೆ, ಅದೊಂದು ಸಾಂಸ್ಕೃತಿಕ ಉತ್ಸವವೂ ಆಗಿದೆ. ಉತ್ಸವದ ಅಂಗವಾಗಿ ಕೀರ್ತನೆ, ಭಜನೆ, ಭಾಷಣಗಳು ನಡೆಯುತ್ತವೆ. ನಾಡಿನ ದೊಡ್ಡ ವಿದ್ವಾಂಸರನ್ನು, ಕಲಾವಿದರನ್ನು ಕರೆದು ಗೌರವಿಸಲಾಗುತ್ತದೆ. ನೃತ್ಯ, ನಾಟಕ, ರಂಗೋಲಿ, ಭಾಷಣ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಕರಕುಶಲಕಲೆಗಳಿಗೆ ಪ್ರೋತ್ಸಾಹ ನೀಡಲಾಗುತ್ತದೆ.

**ii ದೀಪಾವಳಿ :**

ದೀಪಾವಳಿಯಂದು ಶ್ರೀ ಮಾರಿಕಾಂಬೆಯನ್ನು ವಿಶೇಷ ಚಿನ್ನಾಭರಣಗಳಿಂದ ಅಲಂಕರಿಸಿ, ಎಲ್ಲೆಡೆ ಲಕ್ಷ್ಮೀ ಪೂಜೆಯನ್ನು ಮಾಡುವಂತೆ ಇಲ್ಲಿಯೂ

1. ವಿನಾಯಕ ಮಾಡಗೇರಿ : ಶ್ರೀ ಮಾರಿಕಾಂಬೆ, ಪು ೩೯.





ಮಾಡಲಾಗುತ್ತದೆ. ಇಲ್ಲಿಯ ದೀಪಾವಳಿಯ ಉತ್ಸವದ ವಿಶೇಷವಿರುವುದು ಶ್ರೀದೇವಿಯ ಪಟ್ಟದ ಕೋಣನಿಗೆ ವಿಶೇಷ ಅಲಂಕಾರವನ್ನು ಮಾಡಿ, ಪೂಜಿಸಿ, ಅದನ್ನು ಊರ ಮೇಲೆಲ್ಲಾ ವಾದ್ಯಘೋಷದೊಡನೆ ಮೆರವಣಿಗೆಯನ್ನು ಮಾಡುವಲ್ಲಿ. ಒಂದು ಕಾಲಕ್ಕೆ ಈ ಮೆರವಣಿಗೆಯಲ್ಲಿ ಶಿರಸಿಯ ಮನ್ನೆಯ ಮಾನ್ಯರೆಲ್ಲ ಪಾಲ್ಗೊಂಡು ಅದ್ದೂರಿಯಿಂದ ಆಚರಿಸಲಾಗುವ ಈ ಗೋಪೂಜೆಯ ಉತ್ಸವ ಇಂದು ತನ್ನ ಹಿಂದಿನ ರಂಗು ಕಳೆದುಕೊಂಡು ಸೊರಗಿ ಬಡವಾಗಿದೆ.

**iii ಕಾರ್ತಿಕ ಉತ್ಸವ :**

ನಮ್ಮ ನಾಡಿನ ಬೇರೆ ಬೇರೆ ದೇವಾಲಯಗಳಲ್ಲಿ ಕಾರ್ತಿಕ ಮಾಸದಲ್ಲಿ ದೀಪೋತ್ಸವಗಳು ನಡೆದರೆ, ಮಾರಿಕಾಂಬೆಯ ದೇವಾಲಯದಲ್ಲಿ ಮಾರ್ಗಶಿರಮಾಸದಲ್ಲಿ ನಡೆಯುತ್ತದೆ. ಈ ಕಡೆಯ ಒಕ್ಕಲು ಮಕ್ಕಳಿಗೆ ಅದು ಸುಗ್ಗಿಯ ಕಾಲ. ಕಾರ್ತಿಕೋತ್ಸವಕ್ಕೆ ಶಿರಸಿಯ ಸುತ್ತು ಮುತ್ತಲ ಹಳ್ಳಿಗಳಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸುತ್ತಾರೆ. ಉತ್ಸವಕ್ಕೆ ಬರುವಾಗ, ತಾವು ಬೆಳೆದ ಕಬ್ಬು, ಬಾಳೆ, ಅಡಿಕೆ ಸಸಿಗಳನ್ನು ತಂದು, ದೇವಾಲಯದ ಮುಂದೆ ತಳಿರು ತೋರಣಗಳನ್ನು ಕಟ್ಟಿ, ಅವನ್ನು ತೋರಣದ ಇಕ್ಕೆಲಗಳಲ್ಲಿ ನಿಲ್ಲಿಸಿ, ರಾತ್ರಿ ಸಮಯದಲ್ಲಿ ಶ್ರೀದೇವಿ ಪಾಲಕಿಯ ಮೆರವಣಿಗೆಯಲ್ಲಿ ಬರುವಾಗ, ಹಣತೆಯ ಸಾಲುದೀಪಗಳನ್ನು ಹಚ್ಚಿ, ಮದ್ದು, ಗುಂಡು, ಬಿರುಸು ಬಾಣಗಳನ್ನು ಸುಟ್ಟು, ದೇವತೆಯ ದರ್ಶನ ಪಡೆದು ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ.

ರಾತ್ರಿಸಮಯದಲ್ಲಿ ದೊಳ್ಳು, ಹಲಗೆಗಳನ್ನು ಬಡಿಯುತ್ತ ಜನಪದ ಗೀತೆಗಳನ್ನು ರಾಗಲಯಬದ್ಧವಾಗಿ ಹಾಡುತ್ತ ಕುಣಿಯುತ್ತಾರೆ, ಕೋಲಾಟವಾಡುತ್ತಾರೆ. ವಿವಿಧ ಮನೋರಂಜನೆಯ ಕಾರ್ಯಕ್ರಮಗಳು ದೇವಾಲಯದ ರಂಗಮಂಟಪದಲ್ಲಿ ನಡೆಯುತ್ತವೆ.

ಸ್ವಾತಂತ್ರ್ಯದ ಪೂರ್ವದ ದಿನಗಳಲ್ಲಿ, ಊರಿನ ಪ್ರತಿಷ್ಠಿತ ರಾಯರು ಕಾರ್ತಿಕೋತ್ಸವವನ್ನು ವೀಕ್ಷಿಸಲು ಉತ್ಸಾಹದಿಂದ ಬಂದು, ಅದನ್ನು "ರಾಯರ ಕಾರ್ತಿಕ" ವಾಗಿಸಿದ್ದನ್ನು ಅನೇಕರು ನೆನಪು ಮಾಡಿಕೊಳ್ಳುತ್ತಾರೆ. ಆದರೆ ಆ ರಾಯರ ಠೀವಿ ಇಂದಿನ ಕಾರ್ತಿಕ ಉತ್ಸವದಲ್ಲಿ ಕಂಡುಬರುವುದಿಲ್ಲ. ಕಾರ್ತಿಕೋತ್ಸವದಲ್ಲಿ ನೂರಾರು ಚೀಲ ಮಂಡಕ್ಕಿಯನ್ನು ದೇವಾಲಯದ ಬಾಬ್‌ದಾರರಿಗೆ ಪ್ರಸಾದರೂಪದಲ್ಲಿ ಹಂಚುವ ರಿವಾಜಿದೆ. ಇಂಥ ಎರಡು ಕಾರ್ತಿಕ ಉತ್ಸವಗಳು

ನಡೆಯುತ್ತವೆ. ಒಂದು ಹುಣ್ಣಿಮೆಗೆ ಮೊದಲಿನ ಮಂಗಳವಾರ, ಇನ್ನೊಂದು ಈ ಮಂಗಳವಾರದ ಅನಂತರಿನ ಶುಕ್ರವಾರ.

**iv ಜಯಂತಿ ಉತ್ಸವ :**

ಶ್ರೀ ಮಾರಿಕಾಂಬೆ ಶಿರಸಿಯಲ್ಲಿ ಪ್ರತಿಷ್ಠಾಪನೆಗೊಂಡ ವೈಶಾಖಶುದ್ಧ ಅಷ್ಟಮಿಯನ್ನು, ಶ್ರೀದೇವಿಯ ಜಯಂತಿ ಉತ್ಸವವನ್ನಾಗಿ ಆಚರಿಸುವ ಸಂಪ್ರದಾಯವು, ೧೯೬೦ ರಿಂದ ನಡೆದುಕೊಂಡು ಬಂದಿದೆ. ಅಂದು ಅಲಂಕರಣ ಗೊಂಡ ಶ್ರೀದೇವಿಯ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಉತ್ಸವ ಸಮಯದಲ್ಲಿಯೇ ಲೋಕಕಲ್ಯಾಣಕ್ಕಾಗಿ ನವಚಂಡಿ ಹೋಮವನ್ನಾಚರಿಸುವ ಪದ್ಧತಿಯನ್ನು ಮೊಟ್ಟಮೊದಲು ತಾರಮಕ್ಕಿ ಕಮಲಾಬಾಯಿಯವರು ಬಳಕೆಯಲ್ಲಿ ತಂದರು. ಜಯಂತಿ ಉತ್ಸವದ ಅಂಗವಾಗಿ ದೇವಾಲಯದಲ್ಲಿ ಭಜನೆ, ನಾಟಕ, ಸಂಗೀತ ಮೇಳಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದುಕೊಂಡು ಬಂದಿವೆ.

ಈ ಉತ್ಸವಗಳ ಹೊರತಾಗಿ ಶ್ರಾವಣ ಮಾಸದಲ್ಲಿ ಕೆಲವು ಚಿಕ್ಕಪುಟ್ಟ ಉತ್ಸವಗಳು ನಡೆದು ವಿದ್ವಾಂಸರಿಂದ ಕೀರ್ತನೆ ಪ್ರವಚನಾದಿಗಳನ್ನು ನಡೆಸುವ ಪರಿಪಾಠವಿದೆ.

**v ರಾಷ್ಟ್ರೀಯ ಉತ್ಸವಗಳು :**

ಸಾಮಾನ್ಯವಾಗಿ ರಾಷ್ಟ್ರೀಯ ಉತ್ಸವಗಳಾದ ಸ್ವಾತಂತ್ರ್ಯ ದಿನಾಚರಣೆ, ಪ್ರಜಾರಾಜ್ಯೋತ್ಸವಾದಿಗಳನ್ನು ದೇವಾಲಯಗಳಲ್ಲಿ ಒಂದು ಉತ್ಸವವೆಂಬಂತೆ ಆಚರಿಸುವ ಪರಿಪಾಠ ಇಲ್ಲವೆನ್ನುವಷ್ಟು ಕಡಿಮೆ. ಆದರೆ ಶ್ರೀ ಮಾರಿಕಾಂಬೆಯ ಸನ್ನಿಧಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಪ್ರಜಾರಾಜ್ಯೋತ್ಸವಗಳು ಆಯಾ ದಿನಾಂಕದಂದು ನಡೆಯುತ್ತವೆ. ಅಂದು ಶ್ರೀದೇವಿಯನ್ನು ಅಲಂಕರಿಸಿ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ರಾಷ್ಟ್ರೀಯ ಧ್ವಜಾರೋಹಣಾದಿಗಳು ವಿದ್ಯುಕ್ತವಾಗಿ ನಡೆಯುತ್ತವೆ. ಇವುಗಳ ಹೊರತಾಗಿ ದೇವಾಲಯದಲ್ಲಿ ಮೇಲಿಂದ ಮೇಲೆ ಅನೇಕ ಸಾಂಸ್ಕೃತಿಕ ಉತ್ಸವಗಳು, ಶೈಕ್ಷಣಿಕ ಚಟುವಟಿಕೆಗಳು, ನೈತಿಕ ಮೌಲ್ಯವನ್ನು ಎತ್ತಿಹಿಡಿಯುವ ಸಾಮಾಜಿಕ ಕಾರ್ಯಕ್ರಮಗಳು ಮೇಲಿಂದ ಮೇಲೆ ಆಗಿ, ದೇವಾಲಯ ಕೇವಲ ಧಾರ್ಮಿಕ ಕೇಂದ್ರವೊಂದೇ ಆಗದೆ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರಬಿಂದುವೂ ಆಗಿ ನಾಡಿನಾದ್ಯಂತ ಪ್ರಖ್ಯಾತಿಹೊಂದಿದೆ.





**ಆ. ವಿಶೇಷ ಉತ್ಸವಗಳು :**

ಈ ಉತ್ಸವಗಳು ಪ್ರತಿವರ್ಷ ನಡೆಯುವ ಉತ್ಸವಗಳಲ್ಲ. ಸಾಂಕ್ರಾಮಿಕ ಪಿಡುಗುಗಳು, ಊರಮೇಲೆಲ್ಲಾ ಹರಡಿ ಪ್ರಾಣಿಕೋಟಿ ಸಾವಿನ ದವಡೆಯಲ್ಲಿ ಸಿಕ್ಕು ತತ್ತರಿಸುವಂಥ ಸಂದರ್ಭಗಳಲ್ಲಿ ಊರಿನ ಹತ್ತು ಮಂದಿ ನೆರೆದು ಉತ್ಸವವನ್ನು ನಿಶ್ಚಯಿಸಿ ಆಚರಿಸಲು ಮುಂದಾಗುತ್ತಾರೆ. ಇಂಥ ಉತ್ಸವಗಳಲ್ಲಿ i) ಗಡಿ ಶಾಂತಿ ಉತ್ಸವ ii) ಗಡಿ ಮಾರಿ ಉತ್ಸವ iii) ಮಾರಿಕಾಂಬೆಯ ಜಾತ್ರೋತ್ಸವಗಳು ಮುಖ್ಯವಾಗಿರುತ್ತವೆ.

**i ಗಡಿ ಶಾಂತಿ ಉತ್ಸವ :**

ಗೋಣಿ, ಸಿಡುಬು, ಪ್ಲೇಗು, ಕಾಲರಾ ಮುಂತಾದ ಸಾಂಸರ್ಗಿಕ ರೋಗಗಳು ಊರನ್ನು ತುಂಬಿಕೊಂಡು ಮಹೋತ್ಪಾತ ಘಟಿಸಿ, ಪ್ರಾಣಿಕೋಟಿ ಸಾಯುವ ಸಂದರ್ಭದಲ್ಲಿ ಜನ ತತ್ತರಿಸಿ ಅದು ಮಾರಿಕಾಂಬೆಯ ಮುನಿಸೆಂದು ಬಗೆಯುತ್ತಾರೆ; ಪಿಡುಗನ್ನು ನಿಯಂತ್ರಿಸುವ, ಗಡಿಬಂಟರು ರಕ್ತ ಬಲಿಯನ್ನಪೇಕ್ಷಿಸುತ್ತವೆಯೆಂದು ಭಾವಿಸುತ್ತಾರೆ. ಗಡಿ ಬಂಟರನ್ನು ನಿಯಂತ್ರಿಸುವವಳು ಮಾರಿಕಾಂಬೆ. ಅದಕ್ಕಾಗಿ ಅವಳನ್ನು ಪೂಜಿಸಿ, ಬಲಿಸಮರ್ಪಿಸಿ ಸುಪ್ರಸನ್ನಗೊಳಿಸಿ, ಅವಳನ್ನು ಮೆರವಣಿಗೆಯಿಂದ ಗಡಿಬಂಟರೆಡೆಗೂ ಕರೆದೊಯ್ದು, ಅವರಿಗೂ ಬಲಿ ಸಮರ್ಪಣೆಯನ್ನು ಮಾಡಿ, ಅವರ ರಕ್ತದಾಹವನ್ನು ಹಿಂಗಿಸಿ, ಅವರ ಮನವನ್ನು ಉಪಶಮನಗೊಳಿಸುವ ಉತ್ಸವವನ್ನು ಗಡಿ ಶಾಂತಿ ಉತ್ಸವವೆಂದು ಕರೆಯುತ್ತಾರೆ. ಪ್ರಾಣಿ ರಕ್ತದಿಂದ ಸಂತೃಪ್ತಿಹೊಂದಿದ ಗಡಿಬಂಟರು ಮಾನವ ಸಂಹಾರ ಕಾರ್ಯವನ್ನು ನಿಲ್ಲಿಸುತ್ತವೆಯೆಂಬ ನಂಬಿಕೆ ಜಾನಪದರದು.

**ii ಗಡಿ ಮಾರಿ ಉತ್ಸವ :**

ವೈದ್ಯಕೀಯ ಸವಲತ್ತುಗಳು ಇಲ್ಲದ ಹಿಂದಿನಕಾಲದಲ್ಲಿ ಸಾಂಸರ್ಗಿಕ ರೋಗಗಳು ಬಂದಾಗ, ರೋಗಿಗಳ ಸಂಸರ್ಗದಿಂದ ತಮಗೆ ರೋಗ ತಗಲಬಾರದೆಂಬ ಹೇತುವಿನಿಂದ, ಅನೇಕರು ಊರು ಬಿಟ್ಟು ಕೆಲಕಾಲ ಊರಹೊರಗೇ ಉಳಿದು, ರೋಗದ ಹಿಡಿತದಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಉದಾಹರಣೆಗಳುಂಟು. ಆದರೆ ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಊರಜನರೆಲ್ಲ ಒಟ್ಟಾಗಿ ಊರಿನ ಕಸ, ಕಡ್ಡಿಗಳನ್ನೆಲ್ಲ ಉಡುಗಿ, ಊರು ಶುಚಿಗೊಳಿಸಿ ಕಸವನ್ನೆಲ್ಲ ಗಂಟು ಕಟ್ಟಿ ಮಾರಿ ಹೊರೆ ತಯಾರಿಸಿ, ಅಲ್ಲೊಂದು ಮಾರಿಯ ಮೂರ್ತಿಯಿಟ್ಟು ಪೂಜಿಸಿ, ತಮ್ಮೂರಿನ

ಗಡಿ ದಾಟಿಸಿ ಇನ್ನೊಂದೂರಿನ ಗಡಿಯಲ್ಲಿಡುತ್ತಾರೆ. ಇನ್ನೊಂದು ಊರಿನವರೂ ಇದೇ ಬಗೆಯಲ್ಲಿ ಕರ್ಯಾಚರಣೆಯೆಸಗಿ ಆ ಮಾರಿ ಹೊರೆಯನ್ನು ಮುಂದಿನೂರ ಗಡಿಗೆ ಮುಟ್ಟಿಸುತ್ತಾರೆ. ಹೀಗೆ ಹೊರಟ ಈ ಹೊರೆ ಸಮುದ್ರ ಸೇರುವವರೆಗೂ ಈ ಕಾರ್ಯ ನಿರಂತರವಾಗಿ ನಡೆಯುತ್ತದೆ. ಗಡಿಮಾರಿ ಉತ್ಸವವೆಂದು ಕರೆಯುವುದು ಇದಕ್ಕೇ.

ಆಧುನಿಕ ವೈದ್ಯಕೀಯ ಸವಲತ್ತಿನ ಕಾರಣದಿಂದಾಗಿ ಇಂಥ ಗಂಡಾಂತರಗಳು ಈಗ ಕಡಿಮೆಯಾಗಿವೆ ; ಹೀಗಾಗಿ ಗಡಿಮಾರಿ ಉತ್ಸವಗಳು ಕಡಿಮೆಯಾಗಿವೆ.

**iii ಮಾರಿಕಾಂಬೆಯ ಜಾತ್ರೆ :**

ಶಿರಸಿಯ ಮಾರಿ ಜಾತ್ರೆಯಂಥ ವೈಭವ ಪೂರ್ಣವಾದ, ಆಕರ್ಷಕವಾದ ಹಾಗೂ ಸುವ್ಯವಸ್ಥಿತವಾಗಿ ನಡೆಯುವ ಮಾರಿಜಾತ್ರೆ ಕರ್ನಾಟಕದಲ್ಲಿ ಇನ್ನೊಂದಿಲ್ಲ.

ಹಬ್ಬಂಬುದ ಹಾವೇರೆ ತೇರೆಂಬುದ ಬನವಸೆ
ಜಾತರಂಬುದ ಶಿರಸೀಯೇ । ದೊಡ್ಡಮ್ಮನಾ
ವಾಲೆ ಸಿಕ್ಕಿದರೆ ತರುಬಾರಾ । ದೊಡ್ಡಮ್ಮನಾ
ಬಂಡಾರಾ ಸಿಕ್ಕೋರು ಬಿಡುಬಾರಾ ।

ಶಿರಸಿಯ ಜಾತ್ರೆಯಂಥ ಹಿರಿಯಜಾತ್ರೆ ಹಾಗೂ ಶಿರಸಿಯ ದೊಡ್ಡಮ್ಮನ ಪ್ರಸಾದಕ್ಕಿಂತ ಬೆಲೆಯುಳ್ಳದ್ದು ಇನ್ನೊಂದಿಲ್ಲವೆಂದು ಮಾರಿಕಾಂಬೆಯ ಭಕ್ತಪರಿವಾರದ ನಂಬಿಕೆ. ನಮ್ಮ ನಾಡಿನಲ್ಲಿ ಖ್ಯಾತಿವೆತ್ತ ಈ ಜಾತ್ರೆಯ ವಿಧಿ ವಿಧಾನಗಳನ್ನು ಸೂಕ್ಷ್ಮವಾಗಿ ಪರಿಭಾವಿಸಿದಲ್ಲಿ, ಮಾರಿಕಾಂಬೆಯ ಆರಾಧನೆಯ ಹಿನ್ನೆಲೆಯಲ್ಲಿ ಅಡಕವಾಗಿರುವ ಜಾನಪದ ಮನೋಧರ್ಮದ ಗಡಿರೇಖೆಗಳನ್ನು ಗುರುತಿಸಲು ಸುಲಭವಾಗುವುದು.

ಶ್ರೀ ಮಾರಿಕಾಂಬೆಯ ಜಾತ್ರೆಯ ವಿಧಿ ವಿಧಾನಗಳನ್ನು ಆಗಮೋಕ್ತ ವಿಧಿವಿಧಾನಗಳ ಹಿನ್ನೆಲೆಯಲ್ಲಿ ನಡೆಯುವ ರಥೋತ್ಸವಗಳ ಜೊತೆಗೆ ಹೋಲಿಸಲಾಗದು. ಈ ಜಾತ್ರೆಯ ಚಡಂಗಗಳೆಲ್ಲ ಸಾಮಾನ್ಯವಾಗಿ ಜಾನಪದೀಯ ಹಿನ್ನೆಲೆಯಲ್ಲಿಯೇ ನಡೆಯುತ್ತವೆ. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ತೀರ ಕೆಳ ಹಂತದವರೆಂದು ಪರಿಗಣಿಸಲಾದ ಶೂದ್ರರು ಹಾಗೂ ಪಂಚಮರ ಉಸ್ತುವಾರಿಯಲ್ಲಿಯೇ ನಡೆಯುತ್ತಿದ್ದ ಈ ಜಾತ್ರೆ, ದೇವಿಯ ಮಹಿಮೆ ಬೆಳೆದಂತೆಲ್ಲ, ಈಗಿತ್ತಲಾಗಿ ಉನ್ನತ ವರ್ಗದವರ ಪ್ರವೇಶವಾಗಿದೆ. ಜಾತ್ರೆಯ ಬೇರೆ ಬೇರೆ





ಚಡಂಗಗಳಲ್ಲಿ ಕ್ರಚಿತ್ತಾಗಿ ಆಗಮೋಕ್ತ ವಿಧಿವಿಧಾನಗಳ ಸೇರ್ಪಡೆಯಾಗುತ್ತಿರುವುದೂ ಗೋಚರಿಸುತ್ತದೆ ; ಆದರೂ ಅವುಗಳಿಂದ ಜಾತ್ರೆಯಲ್ಲಿ ನಡೆಯುವ ಜಾನಪದೀಯ ಆಚರಣೆಗಳನ್ನು ಅಳಿಸಿಹಾಕಲಾಗಲಿಲ್ಲವೆನ್ನುವುದು ಜಾತ್ರೆಯ ಅವಲೋಕನದಿಂದ ವಿಧಿತವಾಗುತ್ತದೆ.

ಶ್ರೀ ಮಾರಿಕಾಂಬೆಯ ಜಾತ್ರೆಯು ಹೊರತೋರಿಕೆಗೆ ಎಂಟು ದಿನಗಳ ಪರ್ಯಂತ ನಡೆಯುವ ಉತ್ಸವದಂತೆ ಗೋಚರಿಸುತ್ತಿದ್ದರೂ, ವಾಸ್ತವವಾಗಿ ಈ ಜಾತ್ರೋತ್ಸವದ ಪೂರ್ವತಯಾರಿಯು ಸುಮಾರು ಎರಡು ತಿಂಗಳ ಪೂರ್ವದಿಂದಲೇ ಆರಂಭವಾಗುತ್ತದೆ. ಜಾತ್ರೆಯ ಮುಹೂರ್ತವನ್ನು ನಿಶ್ಚಯಿಸುವುದು, ಹೊರ ಬೀಡುಗಳ ಕಾರ್ಯವನ್ನು ನೆರವೇರಿಸುವುದು, ಜಾತ್ರೆಯ ರಥದ ಮರವನ್ನು ಕಡಿಯುವುದು, ರಥವನ್ನು ನಿರ್ಮಿಸುವುದು, ಅಂಕೆ ಹಾಕುವುದು ಜಾತ್ರೆಯ ಪ್ರತಿಷ್ಠೆಯನ್ನು ಮಾಡುವುದು, ರಥೋತ್ಸವವನ್ನು ಆರಂಭಿಸುವುದು, ಬಲಿಸಮರ್ಪಿಸುವುದು ಜಾತ್ರೆಯ ಸೇವೆಯನ್ನು ಕೈಕೊಳ್ಳುವುದು, ಜಾತ್ರೆಯ ವಿಸರ್ಜನೆಯನ್ನು ಮಾಡುವುದು, ದೇವಿಯನ್ನು ಮರು ಪ್ರತಿಷ್ಠಾಪಿಸುವುದು ಈ ಮುಂತಾದ ಧಾರ್ಮಿಕ ಆಚರಣೆಗಳನ್ನು ನಿರ್ವಹಿಸಲು ಶ್ರೀ ಮಾರಿಕಾಂಬೆಗೆ ನಡಕೊಳ್ಳುವ ವಿಶಿಷ್ಟ ಬಾಬ್‌ದಾರರ ಕುಟುಂಬಗಳಿವೆ.

**೧. ಬಾಬ್‌ದಾರರು :**

ಬಾಬ್‌ದಾರರೆಂದರೆ ತನ್ನ ಜಾತಿ ಇಲ್ಲವೆ ಕುಟುಂಬ ಪದ್ಧತಿಯಂತೆ, ವಂಶ ಪರಂಪರೆಯಿಂದ ಶ್ರೀದೇವಿಗೆ ನಿರ್ದಿಷ್ಟ ಸೇವೆಯನ್ನು ಸಲ್ಲಿಸುವ ವಿಶಿಷ್ಟ ಕುಟುಂಬದವರು. ಇವರು ಕಾಲಕಾಲಕ್ಕೆ ನಡೆಯುವ ಶ್ರೀದೇವಿಯ ಧಾರ್ಮಿಕ ಆಚರಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಅವರಿಗೆ ನಿಗದಿಪಡಿಸಿದ ಸೇವೆಯನ್ನು ತಪ್ಪದೆ ಸಲ್ಲಿಸುತ್ತಾರೆ. ಇಂಥ ಹಲವಾರು ಕುಟುಂಬಗಳಿವೆ.

**(ಅ). ನಾಡಿಗರ ಕುಟುಂಬ :**

ಈ ಕುಟುಂಬದವರನ್ನು ಶ್ರೀ ಮಾರಿಕಾಂಬೆಯ ತವರು ಮನೆಯವರೆಂದು ಪರಿಗಣಿಸಲಾಗುತ್ತದೆ. ಇವರು ಮಾರಿಕಾಂಬೆಯ ಜಾತ್ರೆಯು ನಿಶ್ಚಯವಾದ ಕೂಡಲೇ ಶ್ರೀದೇವಿಯನ್ನು ಪೂಜಿಸಿ, ಜಾತ್ರೆಯು ಸಾಂಗವಾಗಿ ನೆರವೇರಲೆಂದು ಪ್ರಾರ್ಥಿಸುವುದು, ಅಯ್ಯನೆಯ ಹೊರಬೀಡಿನಿಂದ ಶ್ರೀದೇವಿಯ ಪಲ್ಲಕ್ಕಿಯು ಹಿಂತಿರುಗಿ ಬಂದಾಗ, ಜಾತ್ರೆಯ ಗದ್ದಿಗೆಯ ಹತ್ತಿರ ಅಂಕೆಯನ್ನು ಹಾಕುವಾಗ ದೇವಿಗೆ ಮಂಗಳಾರತಿಯನ್ನು ಮಾಡುವುದು, ಶ್ರೀದೇವಿಯ ವಿವಾಹ ಮಹೋತ್ಸವವನ್ನು ನೆರವೇರಿಸಿ, ಶ್ರೀದೇವಿಗೆ

ಪ್ರಥಮ ಪೂಜೆಯನ್ನು ಮಾಡುವುದು, ಜಾತ್ರೆಯ ಸಂದರ್ಭದಲ್ಲಿ ಬೆಳಿಗ್ಗೆ ಮತ್ತು ರಾತ್ರಿಯ ಸಮಯದಲ್ಲಿ ಮೊದಲಿನ ಹಾಗೂ ಕೊನೆಯ ಮಂಗಳಾರತಿಯನ್ನು ಮಾಡುವುದು, ಶ್ರೀದೇವಿಗೆ ಯುಗಾದಿಯ ಪ್ರತಿಷ್ಠಾಪನೆಯ ಪ್ರಥಮ ಪೂಜೆಯನ್ನು ಮಾಡುವುದು ಮುಂತಾದ ತಮ್ಮ ಪಾಲಿನ ಸೇವಾ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

**(ಆ) ಕಸಬೆ ಗೌಡರ ಕುಟುಂಬ :**

ಶಿರಸಿಯ ರೈತ ಸಮುದಾಯವು ಸಲ್ಲಿಸುವ ಎಲ್ಲ ಸೇವೆಗಳ ಉಸ್ತುವಾರಿಯ ಮಹತ್ವಪೂರ್ಣವಾದ ಹೊಣೆಗಾರಿಕೆಯನ್ನು ಇವರು ಹೊರುತ್ತಾರೆ.

**(ಇ) ಕಟ್ಟೇರ ಕುಟುಂಬ :**

ಕಟ್ಟೆಮನೆಯವರೆಂದು ಹೆಸರುವಾಸಿಯಾದ ಈ ಪ್ರಮುಖ ರೈತ ಕುಟುಂಬದವರು ಉಳಿದೆಲ್ಲ ರೈತರ ಸಹಾಯದಿಂದ ಜಾತ್ರೆಯ ಹೊರಬೀಡಿನ ವ್ಯವಸ್ಥೆಯನ್ನು ಮಾಡುವುದು, ಕೊನೆಯ ನಾಲ್ಕು ಮತ್ತು ಅಯ್ದನೆಯ ಹೊರಬೀಡುಗಳಲ್ಲಿ ಅಡಿಗೆಯನ್ನು ತಯಾರಿಸುವುದು, ರಥದ ಮರವನ್ನು ತರುವುದು, ಶ್ರೀದೇವಿಯ ವಿಗ್ರಹವನ್ನು ಕಳಚುವುದಕ್ಕೆ ಮತ್ತು ಕೂಡಿಸುವುದಕ್ಕೆ ಸಹಾಯವನ್ನು ಸಲ್ಲಿಸುವುದು, ಉತ್ಸವ ಸಮಯಗಳಲ್ಲಿ ಪಡಲಿಗೆಗಳಿಗೆ ಉಡಿಯ ಸಾಮಾನುಗಳನ್ನು ತುಂಬುವುದು, ಜಾತ್ರೆಯಲ್ಲಿ ತೆಂಗಿನಕಾಯಿಗಳನ್ನು ಒಡೆಯುವುದು, ಗಡಿಮಾರಿಯನ್ನು ಕಳಿಸುವುದು, ಗಡಿಶಾಂತಿ ಉತ್ಸವದ ಏರ್ಪಾಡು ಮಾಡುವುದು, ದೀಪೋತ್ಸವದ ಸಂದರ್ಭಗಳಲ್ಲಿ ತೋರಣಗಳನ್ನು ಹಾಕಿ, ದೀಪಗಳನ್ನು ಬೆಳಗುವುದು ಮುಂತಾದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

**(ಈ) ಎರಡು ಪೂಜಾರಿಗಳ ಕುಟುಂಬಗಳು :**

ಶ್ರೀಮಾರಿಕಾಂಬೆ ಹಾಗೂ ಅದರ ಪರಿವಾರ ದೇವತೆಗಳಾದ ಮರ್ಕಿ-ದುರ್ಗಿಯರ ಹಾಗೂ ಭೂತರಾಜನ ಪೂಜಾಕಾರ್ಯವನ್ನು ಈ ಕುಟುಂಬದವರು ಮಾಡುತ್ತಾರೆ.

**(ಉ) ಮೂವರು ರೈತ ಮುಖ್ಯಸ್ಥರು :**

i ಗುಡ್ಡದ ಮನೆ ii ಕೊಟ್ನಗೇರಿ iii ಹೊಸಪೇಟೆ ಬದಿಯ ರೈತ ಮುಖ್ಯಸ್ಥರು ಹೊರಬೀಡುಗಳಲ್ಲಿ ಅಡಿಗೆಯನ್ನು ಮಾಡುವ ಹಾಗೂ ಪಡಲಿಗೆಗಳಿಗೆ ಉಡಿಯನ್ನು ತುಂಬುವ ಕಾರ್ಯಗಳ ಹೊರತಾಗಿ ಕಟ್ಟೇರ ಕುಟುಂಬದವರು





ಮಾಡುವ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ಜಾತ್ರೆಯ ರಥದ ಮೂಕದ ಮರವನ್ನು ತರುವ ಹಕ್ಕು ಗುಡ್ಡದ ಮನೆಯ ರೈತ ಮುಖಂಡನದಾದರೆ, ಅಚ್ಚಿನ ಮರವನ್ನು ತರುವ ಹೊಣೆಗಾರಿಕೆ ಕೊಟ್ನಗೇರಿ ರೈತ ಮುಖ್ಯಸ್ಥನದು.

**(ಊ) ಚಕ್ರಶಾಲಿ ಕುಟುಂಬ :**

ಜಾತ್ರೆಗೆ ಬೇಕಾಗುವ ಮಣ್ಣಿನ ಪಾತ್ರೆಗಳನ್ನು ಒದಗಿಸುವುದು, ಜಾತ್ರೆ ಪ್ರತಿಷ್ಠೆಯ ಎರಡನೆಯ ಪೂಜೆಯನ್ನು ಮಾಡುವುದು, ಗಡಿ ಬಲಿಯ ಅನ್ನವನ್ನು ತಯಾರಿಸುವುದು ಈ ಕುಟುಂಬದವರ ಕರ್ತವ್ಯವಾಗಿರುತ್ತದೆ.

**(ಎ) ಕೇದಾರಿ ಕುಟುಂಬ :**

ಜಾತ್ರೆಯ ಪ್ರತಿಷ್ಠೆಯ ದಿನ ರೈತರ ವತಿಯಿಂದ ಮೂರನೆಯ ಚೌತಮನೆಯ ಪೂಜೆಯನ್ನು ಕೇದಾರಿ ಕುಟುಂಬದವರು ಮಾಡುತ್ತಾರೆ.

**(ಏ) ಮಡಿವಾಳ ಕುಟುಂಬ :**

ಜಾತ್ರೆಯ ಚಪ್ಪರದಲ್ಲಿ ಹಾಗೂ ಇನ್ನಿತರ ಉತ್ಸವಗಳಲ್ಲಿ ಮೇಲ್ಕಾವಣಿಯ ವಸ್ತ್ರವನ್ನು ಕಟ್ಟುವುದು, ದೇವಿಯು ಹೊರಡುವಾಗ ಪ್ರತಿಷ್ಠೆಯ ಗದ್ದಿಗೆಯಿಂದ ರಥದವರೆಗೆ, ರಥದಿಂದ ಜಾತ್ರೆಯ ಗದ್ದಿಗೆಯವರೆಗೆ ದಾರಿಯಲ್ಲಿ ನಡೆಮಡಿಯನ್ನು ಹಾಸುವದು, ದೇವಿಯ ಪಲ್ಲಕ್ಕಿ ಕೂಡುವ ಗದ್ದಿಗೆಗಳ ಮೇಲೆ ಮಡಿಯನ್ನು ಹಾಸುವುದು, ದೀವಟಿಗೆಗಳಿಗೆ ವಸ್ತ್ರದ ಕೋಡುಬಳೆ ಒದಗಿಸುವುದು ಈ ಮುಂತಾದ ಕಾರ್ಯಭಾರವನ್ನು ಮಡಿವಳ ಕುಟುಂಬದವರು ಹೊರುತ್ತಾರೆ.

**(ಐ) ಕುರುಬರ ಕುಟುಂಬ :**

ಶ್ರೀದೇವಿಯ ಜಾತ್ರೆ ಹಾಗೂ ಇನ್ನಿತರ ಉತ್ಸವಗಳಲ್ಲಿ ಈ ಕುಟುಂಬದವರು ಡೊಳ್ಳು ಬಡಿಯುತ್ತಾರೆ.

**(ಒ) ಟಕಾರೇ ಕುಟುಂಬ :**

ಶ್ರೀದೇವಿಯ ಪಲ್ಲಕ್ಕಿಯ ವಸ್ತ್ರಗಳನ್ನು ದುರಸ್ತಿಯನ್ನು ಮಾಡುವುದು, ಜಾತ್ರೆಗೆ ಬೇಕಾದ ಪತಾಕೆಯ ಹಾಗೂ ಇನ್ನಿತರ ವಸ್ತ್ರಗಳನ್ನು ಇವರು ಹೊಲಿದುಕೊಡುತ್ತಾರೆ.

**(ಓ) ಮಾರಿಗುಡಿ ಶೆಟ್ಟಿ, ಅಣವೇಕರ ಶೆಟ್ಟಿ ಕುಟುಂಬಗಳು :**

ಈ ಕುಟುಂಬದವರು ಶ್ರೀದೇವಿಯ ಆಭರಣಗಳನ್ನು ರಿಪೇರಿ ಮಾಡುವುದು ಅವನ್ನು ತೊಳೆದು ಸ್ವಚ್ಛಗೊಳಿಸುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಾರೆ.

**(ಔ) ಉಪ್ಪಾರ ಕುಟುಂಬ :**

ಶ್ರೀದೇವಿಯ ರಥದ ಗೂಡುಗಳನ್ನು ತಯಾರಿಸುವುದು, ರಥಕ್ಕೆ ಸೊನ್ನೆಯನ್ನು ಕೊಡುವುದು, ಜಾತ್ರೆಯ ಅನಂತರದಲ್ಲಿ ರಥವನ್ನು ಬಿಚ್ಚುವುದು ಪಲ್ಲಕ್ಕಿಯನ್ನು ಹೊರುವುದು ಇತ್ಯಾದಿ ಸೇವಾಕಾರ್ಯಗಳಲ್ಲಿ ಈ ಕುಟುಂಬದವರು ನಿರತರಾಗುತ್ತಾರೆ.

**(ಕ) ಎರಡು ಪೂಜಾರಿ, ಒಂದು ಆಚಾರಿ, ಇನ್ನೊಂದು ಬಡಗಿ ಕುಟುಂಬಗಳು :**

ಈ ನಾಲ್ಕು ಕುಟುಂಬಗಳು ಜಾತ್ರೆಯ ರಥವನ್ನು ಸಿದ್ಧಗೊಳಿಸುವ, ಶ್ರೀದೇವಿಯ ಮೂರ್ತಿಯನ್ನು ಕಳಚಿ ಕೂಡಿಸುವ ಕೆಲಸಗಳನ್ನು ಮಾಡುತ್ತಾರೆ.

**(ಖ) ಒಂಬತ್ತು ಗ್ರಾಮಗಳ ಮುಖ್ಯಸ್ಥರು :**

ಲಿಂಗನ ಕೋಣದ ಇಬ್ಬರು, ರಾಗಿ ಹೊಸಳ್ಳಿ, ಎಸಳೆ, ಬಿಕ್ಕನಹಳ್ಳಿ, ನರೇಬೈಲು, ಬಚಗಾಂವ, ಪಡಂಬೈಲು, ಲಂಡಕನ ಹಳ್ಳಿ ಈ ಗ್ರಾಮಗಳ ಒಬ್ಬೊಬ್ಬ ಮುಖ್ಯಸ್ಥರು, ಜಾತ್ರೆಯ ಸಮಯದಲ್ಲಿ ನಾಡಿನ ಬೇರೆ ಬೇರೆ ಕಡೆಗಳಿಂದ ಬರುವ ಸಹಸ್ರಾರು ಭಕ್ತಾದಿಗಳು ಶ್ರೀದೇವಿಗೆ ಒಪ್ಪಿಸುವ ಸೇವೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದು, ತುಲಾಭಾರ ಬುಟ್ಟಿಯೇ ಮೊದಲಾದ ಬೆತ್ತದ ಸಾಮಾನುಗಳನ್ನು ಒದಗಿಸುವುದು, ಕಟ್ಟೇರ ಕುಟುಂಬದವರಿಗೆ ಜಾತ್ರೆಯ ಸಮಯದಲ್ಲಿ ಸಹಾಯವನ್ನು ಮಾಡುವುದು, ತಮ್ಮ ತಮ್ಮ ಗ್ರಾಮಗಳಿಂದ ಮಾರಿ ಪಟ್ಟಿಯನ್ನು ವಸೂಲಿ ಮಾಡುವುದು, ಜಾತ್ರೆಯಲ್ಲಿ ಹೆಬ್ಬಾಗಿಲಿಗೆ ತೋರಣವನ್ನು ಕಟ್ಟುವುದು, ಪತಾಕೆಗಳನ್ನು ಸುರಿದುಕೊಡುವುದು ಈ ಮುಂತಾದ ಕಾರ್ಯಗಳನ್ನು ಅವರವರಿಗೆ ಗೊತ್ತುಪಡಿಸಿದ ರೀತಿಯಲ್ಲಿ ನಿಗದಿತ ಅವಧಿಯಲ್ಲಿ ಮುಗಿಸಿಕೊಡುತ್ತಾರೆ.

**(ಗ) ಮೇಟಿ ಕುಟುಂಬ :**

ಅಂಕೆ ಹಾಕುವ ದಿನದಿಂದ ಜಾತ್ರೆಯ ಅಂತ್ಯದ ಪರ್ಯಂತ ಮೇಟಿಯ ದೀಪವನ್ನು ಅಹೋರಾತ್ರಿ ಸಂರಕ್ಷಿಸುವ ಕಾರ್ಯವನ್ನು ಈ ಕುಟುಂಬದವರು ಮಾಡುತ್ತಾರೆ.





**(ಘ) ಚಲವಾದಿ ಮುಖ್ಯಸ್ಥರು:**

ಜಾತ್ರೆಯ ಪ್ರತಿಷ್ಠೆಯ ದಿನ, ದೇವಸ್ಥಾನದ ಒಳ ಆವರಣವನ್ನು ತೊಳೆಯುವುದು, ಜಾತ್ರೆಯ ತೋರಣಕ್ಕೆ ಬೇಕಾಗುವ ಮಾವಿನತಳಿರುಗಳನ್ನು ಒದಗಿಸುವುದು, ರಥದ ಗಾಲಿಗಳಿಗೆ ಎಣ್ಣೆಯನ್ನು ಕುಡಿಸುವುದು, ಗಾಲಿಗಳು ಸುಗಮಗಾಗಿ ಸಾಗುವಂತೆ ಕಾಳಜಿಯನ್ನು ವಹಿಸುವುದು, ಹೊರಬೀಡುಗಳ ಅಡಿಗೆಗೆ ಕಟ್ಟಿಗೆಗಳನ್ನು ಒದಗಿಸುವುದು, ಶ್ರೀದೇವಿಯ ಗದ್ದಿಗೆಗಳ ಸುತ್ತ ಮುತ್ತ ಬಿದ್ದ ಕಸ ವುಡುಗುವುದು, ಚಲವಾದಿ ಜೋಗತಿಯರ ಸಹಾಯದಿಂದ ಬೇವಿನ ಉಡುಗೆಯನ್ನು ಬಿಚ್ಚುವುದು, ರಥದ ಸಾಮಗ್ರಿಗಳನ್ನು ಕೋಣೆಯಿಂದ ಹೊರತರುವುದು ಹಾಗೂ ಅವುಗಳನ್ನು ಒಳಗಿಡುವುದು, ಈ ಮುಂತಾದ ಕೈಂಕರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

**(ಙ) ಎರಡು ಮೇತ್ರಿ ಕುಟುಂಬಗಳು :**

ಜಾತ್ರೆಯ ಸಮಯದಲ್ಲಿ ನಡೆಯುವ ಬುಧವಾರದ ಬಲಿಯ ಕೆಲಸ, ಜಾತ್ರೆಯ ವಿಸರ್ಜನೆಯ ದಿನ, ಕೋಣನಿಗೆ ಉಡಿಸಾಮಾನುಗಳನ್ನು ಕಟ್ಟುವುದು, ಒಂದನೆಯ ಹೊರಬೀಡಿನಲ್ಲಿ ಮಾತಂಗಿ ಪೂಜೆಯನ್ನು ಮಾಡುವುದು, ಮೇತ್ರಿ ಮತ್ತು ಜೋಗತಿಯರ ಸಹಕಾರದಿಂದ ಬೇವಿನುಡುಗೆಯನ್ನು ಬಿಚ್ಚುವುದು, ಜಾತ್ರೆಯ ಮಂಟಪ ದ್ವಾರದಲ್ಲಿ ಗಾವದ ಹೊಂಡವನ್ನು ತೋಡುವುದು, ಮುಂತಾದ ಕೆಲಸಗಳನ್ನು ಪಕೀರಾ ಕುಟುಂಬದವರು ನಿರ್ವಹಿಸಿದರೆ, ಆಯತ್ರಾಕುಟುಂಬದವರು ಉತ್ಸವದಲ್ಲಿ ಹಲಗೆಯನ್ನು ಬಾರಿಸುತ್ತಾರೆ.

**(ಚ) ಮೇದಾರರ ಕುಟುಂಬ :**

ಎಸಳೆ ಗ್ರಾಮದ ಮೇದಾರ ಕುಟುಂಬದವರು ರಥಕ್ಕೆ ಬೇಕಾಗುವ ತಟ್ಟೆ, ಜಾತ್ರಾ ಪ್ರತಿಷ್ಠೆಯ ಪೂಜೆಗೆ ಬೇಕಾಗುವ ಬುಟ್ಟಿ ಮೊದಲಾದ ಸಾಮಾನುಗಳನ್ನು ಒದಗಿಸುತ್ತಾರೆ.

**(ಛ) ಗುಡಗಾರರ ಕುಟುಂಬ :**

ಜಾತ್ರೆಯ ಸಮಯದಲ್ಲಿ ಜರುಗುವ ಶ್ರೀದೇವಿಯ ವಿವಾಹ ಮಹೋತ್ಸವಕ್ಕೆ ಅವಶ್ಯವಿರುವ ಬೆಂಡಿನ ಬಾಸಿಂಗ, ಮಾಲೆ, ಮುಂತಾದವನ್ನು ನಿವೇಕಣೆಯ ಗುಡಗಾರ ಕುಟುಂಬದವರು ತಯಾರಿಸಿಕೊಡುತ್ತಾರೆ.

**(ಜ) ಮಚಗಾರರ ಮೂವರು ಮುಖ್ಯಸ್ಥರು :**

ಇವರು ಜಾತ್ರಾ ಸಂದರ್ಭದಲ್ಲಿ ಬೇಕಾಗುವ ಚರ್ಮದ ಸಲಕರಣೆಗಳನ್ನು ಪೂರೈಸುವುದರ ಜೊತೆಗೆ ಹೊರಬೀಡುಗಳ ವ್ಯವಸ್ಥೆ ಮತ್ತು ಬಲಿಯ ಕಾರ್ಯಗಳಲ್ಲಿ ಭಾಗಿಗಳಾಗುತ್ತಾರೆ.

**(ಝ) ಸಮಗಾರರ ಅಯ್ವರು ಮುಖ್ಯಸ್ಥರು :**

ಜಾತ್ರೆಯ ಕಾಲದಲ್ಲಿ ಶ್ರೀದೇವಿಯ ರಥವು ಬರುವ ದಾರಿಯ ಎರಡೂ ಮಗ್ಗಲುಗಳಲ್ಲಿ ಅಡಿಕೆಯ ಮರಗಳನ್ನು ನಿಲ್ಲಿಸುವುದು ಹೊರಬೀಡಿನಲ್ಲಿ ಹಾಗೂ ಬಲಿಯ ಸಂದರ್ಭಗಳಲ್ಲಿ ಸಹಕಾರವನ್ನು ನೀಡುವುದು ಮುಂತಾದ ಸೇವೆಗಳನ್ನು ಮಾಡುತ್ತಾರೆ.

**(ಞ) ಬೇಡರ ಜೋಗತಿಯರ ನಾಲ್ಕು ಕುಟುಂಬಗಳು :**

ಶ್ರೀ ದೇವಿಯ ಜಾತ್ರೆ ಹಾಗೂ ಇನ್ನಿತರ ದೇವಸ್ಥಾನದ ಉತ್ಸವಗಳಲ್ಲಿ ಶ್ರೀದೇವಿಗೆ ಚಾಮರವನ್ನು ಬೀಸುವುದು ಜಾತ್ರೆಯಲ್ಲಿ ಪಡಲಿಗೆಗಳನ್ನು ಹೊರುವುದು, ತಿಂಗಳಗೆರಡು ಸಲ ಗರ್ಭಗುಡಿಯ ನೆಲವನ್ನು ತೊಳೆಯುವುದು, ಬೇವಿನುಡಿಗೆಯನ್ನು ಉಡಿಸುವುದು, ರಥದ ಮರ ತರುವಾಗ, ಕಲಶ ರಥವನ್ನೇರುವಾಗ, ಗಡಿಶಾಂತಿಯ ಉತ್ಸವ ನಡೆಯುವಾಗ ಇವರು ಉಪಸ್ಥಿತರಿರುತ್ತಾರೆ. ಜಾತ್ರೆಯ ಕಾಲಕ್ಕೆ ನಾಡಿಗ, ಕುಂಬಾರ, ಕೇದಾರಿ, ಪೂಜಾರಿ, ಗಾಳಿಮಾರಿ, ಮೇಟಿಯವರನ್ನು ಕರೆತರುವುದು ಈ ಜೋಗತಿಯರು ನಿರ್ವಹಿಸಬೇಕಾದ ಕೆಲಸಗಳು.

**(ಟ) ಮೇತ್ರಿ ಜೋಗತಿ ಕುಟುಂಬ :**

ಈ ಕುಟುಂಬದವರು ಗಡಿ ಶಾಂತಿ ಮತ್ತು ಹೊರಬೀಡುಗಳ ಸಮಯಗಳಲ್ಲಿ ಪಡಲಿಗೆಗಳನ್ನು ಹೊರುವುದು, ಬೇವಿನುಡುಗೆಗಳನ್ನು ಬಿಚ್ಚುವುದು ಮುಂತಾದ ಸೇವಾಕಾರ್ಯಗಳನ್ನು ಕೈಕೊಳ್ಳುತ್ತಾರೆ.

**(ಠ) ಚಲವಾದಿ ಜೋಗತಿಯರ ಅಯ್ದು ಕುಟುಂಬಗಳು :**

ಗಡಿ ಶಾಂತಿ ಮತ್ತು ಹೊರಬೀಡುಗಳ ಉತ್ಸವಗಳಲ್ಲಿ ಪಡಲಿಗೆಗಳನ್ನು ಹೊರುವುದು, ಹಣತೆಯ ದೀಪವನ್ನೊಯ್ಯುವುದು ಬೇವಿನುಡಿಗೆಯನ್ನು ಬಿಚ್ಚುವುದು, ಪೂರ್ವದಿಕ್ಕಿನಲ್ಲಿ ನಡೆಯುವ ಹೊರಬೀಡಿನಲ್ಲಿ ಪಡಲಿಗೆಗಳನ್ನು





ಅರ್ಚಿಸುವುದು, ಮೊದಲಾದ ಆಚರಣಾ ವಿಧಿಗಳನ್ನು ಈ ಕುಟುಂಬಗಳ ಜೋಗತಿಯರು ಪೂರೈಸುತ್ತಾರೆ.

**(ಡ) ಗಾಳಿ ಮಾರಿ ಜೋಗತಿ ಕುಟುಂಬ :**

ಈ ಕುಟುಂಬದ ಜೋಗತಿಯರು ಎಲ್ಲ ಹೊರಬೀಡುಗಳಲ್ಲಿ ಪಡಲಿಗೆಗಳನ್ನು ಒಯ್ಯುವುದು, ಗಾಳಿಮಾರಿ ಗದ್ದಿಗೆಯ ಹತ್ತಿರ, ಶುಕ್ರವಾರದ ಹೊರಬೀಡಿನ ಸಂದರ್ಭದಲ್ಲಿ ಪಡಲಿಗೆಗಳನ್ನು ಪೂಜಿಸುವುದು, ಜಾತ್ರಾ ಪ್ರತಿಷ್ಠೆಯ ದಿನ ಘಟಸ್ಥಾಪಿಸುವುದು, ಹೆಪ್ಪಿನ ಗಡಿಗೆ ಒಯ್ಯುವುದು ಮುಂತಾದ ತಮ್ಮ ಪಾಲಿನ ಕರ್ತವ್ಯಗಳನ್ನು ನೆರವೇರಿಸುತ್ತಾರೆ.

**(ಢ) ಆಸಾದಿ ಕುಟುಂಬ :**

ಮಾರಿಕಾಂಬೆಯ ಜಾತ್ರೆಯ ಸಮಯದಲ್ಲಿ ಶ್ರೀದೇವಿಯ ಎದುರಿನಲ್ಲಿ ಕುಳಿತು ಅವಳನ್ನು ಕುರಿತು ಹಾಡುವುದು, ಕುಣಿಯುವುದು, ಜಾತ್ರೆಯ ಚಪ್ಪರದಲ್ಲಿ ರಂಗ ನಿರ್ಮಿಸುವುದು, ಹೊನ್ನಾಟವನ್ನಾಡುವುದು, ಹುಲಸು, ಗಾವ, ಹೆಪ್ಪು ವಿಸರ್ಜನ ವಿಧಿಗಳನ್ನು ನೆರವೇರಿಸುವುದು ಮಾರಿ ಪಟ್ಟಿಯನ್ನು ಕೊಟ್ಟ ರೈತರಿಗೆ ಹುಲುಸು ಕೊಡುವುದು, ಜಟಗದ ಪೂಜೆಯನ್ನು ಮಾಡುವುದು, ಬಲಿಸಮರ್ಪಿಸುವುದು, ಹಾರುಗೋಳಿಯನ್ನು ಹಾರಿಸುವುದು, ಯುಗಾದಿಯ ದಿನ ರಂಗವನ್ನು ಹಾಕುವುದು, ಕೋಣನ ಮಾಳ ಪಕ್ಷವನ್ನು ಆಚರಿಸುವುದು ಹೀಗೆ ಹಲವಾರು ಅತ್ಯಂತ ಪ್ರಮುಖವಾದ ಕೆಲಸಗಳನ್ನು ಮಾಡುತ್ತಾರೆ.

**(ಣ) ಕಾಳಿ ಕುಟುಂಬ :**

ಶ್ರೀದೇವಿಯ ಜಾತ್ರೆ ಹಾಗೂ ಇನ್ನಿತರ ಉತ್ಸವಗಳ ಸಮಯಗಳಲ್ಲಿ ಕಳಿಯನ್ನು ಊದುವ ಕಾರ್ಯವನ್ನು ನಿರ್ವಹಿಸುತ್ತಾರೆ.

**(ತ) ಉಗ್ರಾಣಿ ಕುಟುಂಬ :**

ಶ್ರೀದೇವಿಯ ಕಕ್ಷೆಗೊಳಪಟ್ಟ ಕೇರಿ ಕೇರಿಗಳಲ್ಲಿ ಮಾರಿ ಪಟ್ಟಿಯ ಪುಸ್ತಕಗಳನ್ನು ವಿತರಿಸುವುದು, ಬಾಬ್‌ದಾರರನ್ನು ಕರೆಯಲು ಹೋಗುವುದು, ತುಲಾಭಾರ ಸೇವೆಯ ಕಾಲಕ್ಕೆ ನೆರವು ನೀಡುವುದು, ಜಾತ್ರೆ ಹಾಗೂ ಉತ್ಸವಗಳ ಕಾಲಕ್ಕೆ ದೂತನಾಗಿ ಕಾರ್ಯನಿರ್ವಹಿಸುವ ಕೆಲಸವನ್ನು ಉಗ್ರಾಣಿ ಕುಟುಂಬದವರು ಮಾಡುತ್ತಾರೆ.

**(ಥ) ಹನುಮಂತ ದೇವರ ಪೂಜಾರಿಯ ಕುಟುಂಬ :**

ಹನುಮಂತ ದೇವರ ಪೂಜೆಯನ್ನು ಮಾಡಿ, ಭಕ್ತಾದಿಗಳ ಹರಕೆಗಳನ್ನು ದೇವರಿಗರ್ಪಿಸುವುದು ಈ ಕುಟುಂಬದವರ ಕೆಲಸ.

**(ದ) ಹತ್ತೊಂಬತ್ತು ಗ್ರಾಮಗಳ ಮುಖ್ಯಸ್ಥರು :**

೧. ಬಾಳೆಗದ್ದೆ ೨. ಮುಂಡತೋಟ ೩. ಕುಂಬ್ರಿ ೪. ಮುಂಡೇ ಸರ ೫. ಆಲೇಸರ ೬. ಮೋಟಿನ ಸರ ೭. ಕಲ್ಕುಣಿ ೮. ಅರಸೀಕೆರೆ ೯. ಕೆರೆಕ್ಯೆ ೧೦. ಕುಳವೆ ೧೧. ಸಣ್ಣಳ್ಳಿ ೧೨. ಹಳದಿ ೧೩. ಹದ್ದ ೧೪. ಕಾನಳ್ಳಿ ೧೫. ಜಾನ್ಮನೆ ೧೬. ಕಲಗಾರ ೧೭. ಯಡಳ್ಳಿ ೧೮. ಹೀಪನ ಹಳ್ಳಿ ೧೯. ಶಿರಸಿಮಕ್ಕಿ ೨೦. ಚಿಪ್ಪಗಿ ಈ ಗ್ರಾಮಗಳ ಮುಖಂಡರು ತಮ್ಮ ಗ್ರಾಮದವರಿಂದ ಮಾರಿ ಪಟ್ಟಿಯೆತ್ತುವ ಕಾರ್ಯವನ್ನು ಮಾಡುತ್ತಾರೆ. ಕಲಗಾರ ಗ್ರಾಮದವರು ರಥಕ್ಕೆ ಪತಾಕೆಯನ್ನು ಸುರಿಯಲು ಬೇಕಾಗುವ ಸಲಕರಣೆಗಳನ್ನು ಪೂರೈಸುವ ವಿಶೇಷ ಕಾರ್ಯವನ್ನು ಮಾಡುತ್ತಾರೆ.

ಈ ಮೇಲಿನ ಬಾಬ್‌ದಾರರಿಗೆಲ್ಲ ಅವರವರ ಸೇವೆಗನುಗುಣವಾಗಿ ಶ್ರೀದೇವಿಯ ಪ್ರಸಾದ ಹಾಗೂ ಇನ್ನಿತರ ಚಾಜ(ಮರ್ಯಾದೆ)ಗಳು ಉಡುಗೊರೆಗಳು ಸಲ್ಲುತ್ತವೆ. ಇವರಲ್ಲಿ ಪ್ರಮುಖರಾದ ಏಳು ಜನ ಬಾಬ್‌ದಾರರಿಗೆ ಶಾಲು, ವಸ್ತ್ರ, ಉಡುಗೊರೆಗಳು, ಹರಕೆಯ ಕುರಿಯ ಬೆಲೆಯ ಕಾಲುಭಾಗ ಹಣವನ್ನು ನೀಡುತ್ತಾರೆ. ಇನ್ನುಳಿದ ಬಾಬ್‌ದಾರರಿಗೆ ವಸ್ತ್ರ ಉಡುಗೊರೆಗಳು ಮಾತ್ರ ಸಲ್ಲುತ್ತವೆ. ಜಾತ್ರೆಯ ಸಮಯದಲ್ಲಿ ಎಲ್ಲರಿಗೂ ಚಹ ಪಾನೀಯಗಳು ಸಲ್ಲುತ್ತದೆ.

ಬಾಬ್‌ದಾರರ ಕುಟುಂಬಗಳ ಹಿರಿಯರು ಹಾಗೂ ಊರಿನ ಅನೇಕ ಪ್ರತಿಷ್ಠಿತ ವ್ಯಕ್ತಿಗಳು, ಸಾರ್ವಜನಿಕರಿಂದ ಸಹಾಯ ಸಹಕಾರಗಳನ್ನು ಪಡೆದು ಜಾತ್ರೆಯ ಉತ್ಸವವನ್ನು ಅದ್ದೂರಿಯಿಂದ ಮಾಡುತ್ತಾರೆ.

ಶ್ರೀ ಮಾರಿಕಾಂಬೆಯ ಬಾಬ್‌ದಾರರ ಪಟ್ಟಿಯನ್ನವಲೋಕಿಸಿದರೆ ಇದರಲ್ಲಿ ಒಂದು ಬ್ರಾಹ್ಮಣ ಮನೆತನವನ್ನು ಬಿಟ್ಟರೆ, ಉಳಿದೆಲ್ಲರೂ ಕೆಳಸ್ತರದಿಂದ ಬಂದ ರೈತಾಪಿಜನರು ಹಾಗೂ ದಲಿತ ವರ್ಗಗಳಿಗೆ ಸೇರಿದವರು ಎನ್ನುವುದು ಗಮನಾರ್ಹ. ಶ್ರೀದೇವಿಯ ಮದುವೆಗೆ ಸಂಬಂಧಿಸಿದ ಜಾತ್ರೆಯ ಆಚರಣಾ ವಿಧಿಯೊಂದನ್ನು ಬಿಟ್ಟರೆ, ಉಳಿದೆಲ್ಲ ಆಚರಣೆಗಳ ಉಸ್ತುವಾರಿ ರೈತ ವರ್ಗದವರದು ಹಾಗೂ ದಲಿತ ವರ್ಗದವರದು. ಇಂದು ಶ್ರೀದೇವಿಗೆ ಎಲ್ಲ ವರ್ಗದ ಜನರು ನಡಕೊಂಡರೂ, ಪ್ರಮುಖವಾಗಿ ಈ ದೇವತೆ ನಿಮ್ನ ವರ್ಗದವರಿಗೆ





ಸೇರಿದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಸಾಮಾನ್ಯವಾಗಿ ಈ ಜನರೆಲ್ಲ ಒಟ್ಟಾಗಿ ಶ್ರೀದೇವಿಯ ಜಾತ್ರೆಯ ಆಚರಣಾ ವಿಧಿಗಳ ಎಲ್ಲ ಕಾರ್ಯಗಳನ್ನೂ ತಮ್ಮಲ್ಲಿ ತರತಮ ಭಾವಗಳಿಲ್ಲದೆ ಹಂಚಿಕೊಂಡು ದೇವಾಲಯದ ಸಕಲ ವ್ಯವಹಾರಗಳನ್ನು ನಡೆಸುತ್ತಿದ್ದರು. ಆದರೆ ದೇವಾಲಯಗಳ ಉತ್ಪನ್ನದ ಬಾಬುಗಳು ಹೆಚ್ಚಿದಂತೆ ಕ್ರಮೇಣ ದೇವಾಲಯಗಳ ಆಡಳಿತಾಧಿಕಾರಗಳು ಕೆಳವರ್ಗದವರ ಕೈತಪ್ಪುವುದು ದೇವತೆಗಳ ಪೂಜಾದಿಗಳಲ್ಲಿ ವೈದಿಕ ಪೂಜಾ ವಿಧಾನಗಳು, ಮಂತ್ರಗಳ ಬಳಕೆಯಾಗುವುದು, ಜಾನಪದೀಯ ಆಚರಣೆಗಳು ಒಂದೊಂದಾಗಿ ಕಣ್ಮರೆಯಾಗುವುದು ಈ ದೇಶದಲ್ಲಿ ಹೊಸದೇನಲ್ಲ. ಅಂತೆಯೇ ಸ್ವಲ್ಪ ಮಟ್ಟಿಗೆ ಇಲ್ಲಿಯೂ ಆಗಿದೆ; ಆಗುತ್ತಲಿದೆ.

**೨. ಜಾತ್ರೆಯನ್ನು ನಿಶ್ಚಯಿಸುವುದು**

ಶ್ರೀ ಮಾರಿಕಾಂಬೆಯ ಜಾತ್ರೆಯ ಮುಹೂರ್ತವನ್ನು ಶೂನ್ಯಮಾಸವೆಂದು ಪರಿಗಣಿಸಲಾದ, ಪುಷ್ಯಮಾಸದ ಒಂದು ದಿನ ದೇವಾಲಯದ ಧರ್ಮದರ್ಶಿಗಳು, ಬಾಬ್‌ದಾರರು, ಸಾರ್ವಜನಿಕರು ದೇವಿಯ ಎದುರಿನಲ್ಲಿ ನೆರೆದು ನಿಶ್ಚಯಿಸಿ, ಜಾತ್ರೆಯು ಸಾಂಗವಾಗಿ ನೆರವೇರಲೆಂದು ಶ್ರೀದೇವಿಯೆದುರು ಪ್ರಾರ್ಥಿಸುತ್ತಾರೆ. ಅಂದೇ ಶ್ರೀದೇವಿಯ ಮಂಟಪವನ್ನು ಕಳಚಿ, ಮಂಟಪಕ್ಕೆ ಬಣ್ಣ ಬಳಿಯಲು ಕೊಡುತ್ತಾರೆ. ಹೀಗೆ ಜಾತ್ರೆಯ ಪೂರ್ವತಯಾರಿಯು ಅಂದಿನಿಂದಲೇ ಮೊದಲಾದರೂ, ಜಾತ್ರೆಯ ಮುಖ್ಯ ಉತ್ಸವ ಫಾಲ್ಗುಣ ಮಾಸದ ಶುಕ್ಲ ಪಕ್ಷದ ಮಂಗಳವಾರದಿಂದ ಆರಂಭವಾಗುತ್ತದೆ. ಈ ಮಧ್ಯದ ಅವಧಿಯಲ್ಲಿ ಜಾತ್ರೆಯ ಪೂರ್ವಸಿದ್ಧತೆಗಳು ನಡೆಯುತ್ತಿರುತ್ತವೆ.

ವರ್ಣ ವ್ಯವಸ್ಥೆಯ ಕಟ್ಟುಪಾಡುಗಳು ಅತ್ಯಂತ ಬಿಗಿಯಾಗಿದ್ದ ಕಾಲದಲ್ಲಿ ಅದರ ವಿರುದ್ಧವಾದ ನಡವಳಿಕೆ ಧರ್ಮಬಾಹಿರ. ವರ್ಣ ಸಂಕರವಾಗುವ ನಡವಳಿಕೆಯ ಶೂನ್ಯತೆಯನ್ನು, ವಿಫಲತೆಯನ್ನು ಸಾಂಕೇತಿಕವಾಗಿ ಸಮಾಜಕ್ಕೆ ಸಾರುವ ಹೇತುವಿನಿಂದ, ವರ್ಣಸಂಕರದ ಜ್ವಲಂತ ಸಂಗತಿಯನ್ನು ಪ್ರತಿನಿಧಿಸುವ ಶ್ರೀದೇವಿಯ ಜಾತ್ರೆಯ ಮುಹೂರ್ತವನ್ನು ಪುಷ್ಯಮಾಸದಲ್ಲಿ ನಿಶ್ಚಯಿಸುವ ರಿವಾಜು ಬಂದಿರಬೇಕೆಂದು ವೈದಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಾವು ಅರ್ಥೈಸಬಹುದಾದರೂ, ಅದಕ್ಕೆ ಇನ್ನೂ ಒಂದು ಪ್ರಬಲವಾದ ಕಾರಣವನ್ನು ನೀಡಬಹುದಾಗಿದೆ. ಪುಷ್ಯಮಾಸದಿಂದ ಫಾಲ್ಗುಣ ಮಾಸದ ಅವಧಿಯಲ್ಲಿ ಸಾಮಾನ್ಯವಾಗಿ ರೈತರ ಕೈಗೆ ಸುಗ್ಗಿಯ ಬೆಳೆ ಬಂದು ಸ್ವಲ್ಪ ಬಿಡುವಿರುತ್ತದೆ,

ಕೈಯಲ್ಲಿ ದುಡ್ಡು ಓಡಾಡುತ್ತಿರುತ್ತದೆ. ಹೀಗಾಗಿ ರೈತರಿಗೆ ವ್ಯಾಪಾರ ವ್ಯವಹಾರವನ್ನು ಕುದುರಿಸಿಕೊಳ್ಳಲು ಅನುಕೂಲವಾಗುತ್ತದೆ; ಬಿಡುವಿನ ಸಂದರ್ಭದ ಮೋಜಿಗೆ - ಮಜಕ್ಕೆ ಜಾತ್ರೆಯೊಂದು ನೆಪವೂ ಆಗುತ್ತದೆ. ಹೀಗಾಗಿ ಪುಷ್ಯಮಾಸದಿಂದಲೇ ಜಾತ್ರೆಯನ್ನು ನಿಶ್ಚಯಿಸಿ ಪಾಲ್ಗುಣ ಮಾಸದೊಳಗೆ ಮುಗಿಸುವ ರಿವಾಜು ಬಂದಂತಿದೆ.

ಜಾತ್ರೆಯ ನಿಶ್ಚಯವಾದ ಮೇಲೆ ಬಾಬ್‌ದಾರರಿಗೆ, ರೈತರಿಗೆ, ದಲಿತರಿಗೆ ಹಾಗೂ ಸಮಾಜದ ಪ್ರತಿಷ್ಠಿತರಿಗೆ ಜಾತ್ರೆಯ ಆಮಂತ್ರಣ ಹೋಗುತ್ತದೆ. ಬಾಬ್‌ದಾರರು, ರೈತರು ಹಾಗೂ ದಲಿತರು ಈ ಜಾತ್ರೆಯಲ್ಲಿ ನಿರ್ವಹಿಸಲೇ ಬೇಕಾದ ಮಹತ್ವಪೂರ್ಣವಾದ ಕಾರ್ಯಗಳಿದ್ದು ಅವನ್ನು ಇತರರಿಂದ ಮಾಡಿಸಲಾಗದು, ಮಾಡಿಸಕೂಡದು ಎಂಬ ನಿಷೇಧವಿದೆ. ಅದು ಆಯಾ ಬಾಬ್‌ದಾರರ ಕುಟುಂಬದ ಹಕ್ಕು. ಅದಕ್ಕಾಗಿಯೇ ಜಾತ್ರೆಯು ನಿಶ್ಚಯವಾದ ಕೂಡಲೇ ಅವರಿಗೆ ತಪ್ಪದೇ ಆಮಂತ್ರಣವನ್ನು ಕಳಿಸಬೇಕಾಗುತ್ತದೆ.

**೩. ಜಾತ್ರೆಯ ಚಡಂಗಗಳು :**

ಶ್ರೀ ಮಾರಿಕಾಂಬೆಯ ಜಾತ್ರೆಯನ್ನು ಎರಡು, ಮೂರು ಇಲ್ಲವೆ ಹನ್ನೆರಡು ವರ್ಷಗಳಿಗೊಮ್ಮೆ ಜನತೆಯಿಂದ ಮಾರಿಪಟ್ಟಿಯನ್ನೆತ್ತಿ ಆಚರಿಸುವು ಸಂಪ್ರದಾಯವಿತ್ತು. ಆದರೆ ಯಾವ ಕಾಲಕ್ಕೂ ಹನ್ನೆರಡು ವರ್ಷಗಳಿಗಿಂತ ಹೆಚ್ಚಿಗೆ ಅವಧಿ ಆಗಕೂಡದೆಂಬ ವಿಧಿಯಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ದೇವಾಯತನದ ಉತ್ಪನ್ನ ಗಣನೀಯವಾಗಿ ಹೆಚ್ಚಿದ ಪ್ರಯುಕ್ತ, ಎರಡು ವರ್ಷಗಳಿಗೊಮ್ಮೆ ಜಾತ್ರೆಯನ್ನು ತಪ್ಪದೇ ಆಚರಿಸಲಾಗುತ್ತದೆ. ಜಾತ್ರೆಯು ಪಾಲ್ಗುಣ ಮಾಸದ ಹುಣ್ಣಿಮೆಯ ಪೂರ್ವದಲ್ಲಿ ಬರುವ ಮಂಗಳವಾರದಿಂದ ಆರಂಭವಾಗಿ ಇನ್ನೊಂದು ಮಂಗಳವಾರದವರೆಗೆ ನಡೆಯುತ್ತದೆ. ಜಾತ್ರೆ ಶಿರಸಿ ಪಟ್ಟಣದ ಮಧ್ಯದಲ್ಲಿರುವ ಇಂದಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಪಕ್ಕದಲ್ಲಿರುವ ಬೀಡಕೀ ಬೈಲಿನಲ್ಲಿ ನಡೆಯುತ್ತದೆ. ಜಾತ್ರೆಯ ಪ್ರಮುಖವಾದ ಚಡಂಗಗಳು ಕೆಳಗಿನಂತಿವೆ:





**(ಅ) ಹೊರಬೀಡುಗಳು :**

ಜಾತ್ರೆಯ ಹೊರಬೀಡಿನ ಸಂದರ್ಭದಲ್ಲಿ ಶ್ರೀದೇವಿಗೆ ಸೇವೆಯನ್ನು ಸಲ್ಲಿಸುವ ಎಲ್ಲ ಬಾಬ್‌ದಾರರು ತಮ್ಮ ತಮ್ಮ ಸಾಧನ ಸಲಕರಣಗಳಾದ ದೊಳ್ಳು, ಹಲಗೆ, ಕಹಳೆ, ಅಪ್ತಾಗಿರಿ, ಮಖರ ತೋರಣ, ದೀವಟಿಗೆ ಇತ್ಯಾದಿಗಳನ್ನು ದೇವರ ಜೊತೆಗಿಟ್ಟು, ಆಯಾ ಬಾಬ್‌ದಾರರು ಅವುಗಳಿಗೆ ಆರತಿಯನ್ನು ಮಾಡಿದ ನಂತರ ದೇವರ ಪೂಜಾರಿಯು, ದೇವರ ಜೊತೆಗೆ ಅವೆಲ್ಲಕ್ಕೂ ಪೂಜೆಯನ್ನು ಸಲ್ಲಿಸಿ, ದೇವಿಯ ಮೂಲಶಕ್ತಿ ಆಯಾ ಸಲಕರಣೆಗಳಲ್ಲಿ ನೆಲೆಗೊಳ್ಳಲೆಂದು ಪ್ರಾರ್ಥಿಸುತ್ತಾನೆ. ಶ್ರೀದೇವಿಯ ಪರವಾಗಿ ಪಲ್ಲಕ್ಕಿ ಹಾಗೂ ಪಡಲಿಗೆಯ ಪೂಜೆ ಆಗುವ ಪೂರ್ವದಲ್ಲಿ ಬಲಿ ವಿಧಿಯೂ ನಡೆಯುತ್ತದೆ. ಈಗ ಬೂದುಗುಂಬಳ ಕಾಯಿಯ ಸಾತ್ವಿಕ ಬಲಿ ನಡೆದರೆ ಹಿಂದಕ್ಕೆ ಕುರಿ ಬಲಿಯನ್ನು ನೀಡುತ್ತಿದ್ದರು.

ಹೊರಬೀಡು ಎಂದರೆ ಹೊರ - ಇರುವಿಕೆ - ವಸತಿಯೆಂದು ಅರ್ಥ. ಈ ಸಂದರ್ಭದಲ್ಲಿ ದೇವಿಯು ದೇವಸ್ಥಾನವನ್ನು ಬಿಟ್ಟು ತಾತ್ಕಾಲಿಕವಾಗಿ ಹೊರವಸತಿಗುಳಿಯುತ್ತಾಳೆ. ಈ ಬಗೆಯ ಐದು ಹೊರಬೀಡುಗಳಿರುತ್ತವೆ. ಇವುಗಳಲ್ಲಿ ಮೂರು ಹೊರಬೀಡುಗಳು ಪ್ರತಿ ಮಂಗಳವಾರ ರಾತ್ರಿಗೆ ಒಂದೊಂದರಂತೆ ಪೂರ್ವದಿಕ್ಕಿನಲ್ಲಿ ನಡೆದರೆ, ಈ ಮೂರು ಮಂಗಳವಾರಗಳ ಮಧ್ಯದಲ್ಲಿ ಬರುವ ಎರಡು ಶುಕ್ರವಾರಗಳ ರಾತ್ರಿ, ಉತ್ತರ ದಿಕ್ಕಿಗೆ ಇನ್ನೆರಡು ಹೊರಬೀಡುಗಳು ನಡೆಯುತ್ತದೆ. ಪೂರ್ವ ಹಾಗೂ ಉತ್ತರ ದಿಕ್ಕುಗಳಲ್ಲಿ ಶ್ರೀದೇವಿಗೆ ಸಂಬಂಧಿಸಿದ ಪೀಠಗಳಿವೆ. ಎಲ್ಲ ಹೊರಬೀಡುಗಳ ರಾತ್ರಿಯ ಮೆರವಣಿಗೆಯ ಸಮಯದಲ್ಲಿ ಶ್ರೀದೇವಿಗೆ ಉಡಿಯನ್ನು ತುಂಬಿದ ಅನಂತರ ಶ್ರೀದೇವಿಯು ಮರ್ಕಿ- ದುರ್ಗಿಯರ ದೇವಸ್ಥಾನಕ್ಕೆ ಹೋಗಿ, ಅವುಗಳಿಗೆ ಉಡುಗೊರೆ ಸಮರ್ಪಣೆಯಾದ ನಂತರದಲ್ಲಿ ಮೆರವಣಿಗೆಯಿಂದ ಜಾತ್ರೆಯ ಗದ್ದಿಗೆಗೆ ಬರುತ್ತಾಳೆ. ಅಲ್ಲಿ ಉತ್ಸವಮೂರ್ತಿಯನ್ನು ಹಾಗೂ ದೇವಸ್ಥಾನದ ಎರಡು ಬೆಳ್ಳಿಯ ಪಡಲಿಗೆಗಳನ್ನು ಹೊರಬೀಡಿನ ನೀತಿ ನಿಯಮಗಳಿಗನುಸಾರವಾಗಿ ಪೂಜಿಸಲಾಗುತ್ತದೆ.

ಮಂಗಳವಾರ ನಡೆಯುವ ಮೊದಲನೆಯ ಹೊರಬೀಡಿನಂದು ರಾತ್ರಿಸಮಯದಲ್ಲಿ ಬಾಬ್‌ದಾರರು ಹಾಗೂ ಭಕ್ತಾದಿಗಳು ಜಾತ್ರೆಯ ಉತ್ಸವದ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆಯಿಂದ ತೆಗೆದುಕೊಂಡು, ನಗರದ ಪೂರ್ವದಿಕ್ಕಿನ ಗಡಿಯ ಅಮ್ಮನ ವಿಸರ್ಜನಾ ಕಟ್ಟೆಯವರೆಗೆ ಹೋಗುತ್ತಾರೆ. ಅಲ್ಲಿ ಪೂಜೆ ಹಾಗೂ ಒಣ ಅಕ್ಕಿ ನೈವೇದ್ಯವಾದ ನಂತರ, ದೇವಿಯ

ಪಾದಗಟ್ಟೆ ಬನ್ನಿಕಟ್ಟೆಯ ಹತ್ತಿರ ಉತ್ಸವಮೂರ್ತಿಯನ್ನು ಒಯ್ದು, ಅಲ್ಲಿ ಶ್ರೀದೇವಿಯ ವ್ಯಕ್ತ ರೂಪಗಳೆಂದು ಪರಿಗಣಿತವಾದ ಪಡಲಿಗೆಗಳಿಗೆ, ಕಡ್ಲಿ ಒಣ ಅಕ್ಕಿಯನ್ನು ತುಂಬಿ ಪೂಜೆಯನ್ನು ಮುಗಿಸಿಕೊಂಡು ಬರುವಾಗ, ಮಧ್ಯದಲ್ಲಿಯ ಮೂರು ಗಡಿಗಳಿಗೆ ಪೂಜಿಸಿ, ಸುಳಗಾಯಿ ಒಡೆದು ಅಲ್ಲಿಂದ ಮರ್ಕಿ-ದುರ್ಗಿ ದೇವಸ್ಥಾನಕ್ಕೆ ಹೋಗಿ ಮೆರವಣಿಗೆ ದೇವಸ್ಥಾನಕ್ಕೆ ಬರುತ್ತದೆ.

ಎರಡನೆಯ ಹೊರಬೀಡಿನ ಶುಕ್ರವಾರ ರಾತ್ರಿ, ಕೇವಲ ಪಡಲಿಗೆಗಳನ್ನು ಮಾತ್ರ ಉತ್ತರ ದಿಕ್ಕಿನ ಗುಡ್ನದ ಮನೆಯ ಹತ್ತಿರವಿದ್ದ ಗಾಳಿ ಮಾಸ್ತಿ (ಮಾರಿ) ಕಟ್ಟೆಯವರೆಗೆ ಮೆರವಣಿಗೆಯಿಂದ ತೆಗೆದುಕೊಂಡು ಹೋಗಿ ಪೂಜೆ ಒಣ ಅಕ್ಕಿ ನೈವೇದ್ಯವಾದ ಮೇಲೆ ಮೂರು ಗಡಿಗಳಿಗೆ ಹೋಗಿ, ಸುಳಗಾಯಿ ಒಡೆದು ಪೂಜಿಸಿದ ನಂತರ ಪಡಲಿಗೆ ದೇವಸ್ಥಾನಕ್ಕೆ ಬರುತ್ತದೆ. ಮಂಗಳಾರತಿಯಾದ ಮೇಲೆ ಪಡಲಿಗೆಗಳನ್ನು ಜೋಗತೇರು, ಒಯ್ದು ತಮ್ಮ ಮನೆಯಲ್ಲಿಟ್ಟುಕೊಳ್ಳುತ್ತಾರೆ.

ಮೂರನೆಯ ಹೊರಬೀಡಿನಂದು ಮೆರವಣಿಗೆಯು ಅಮ್ಮನ ವಿಸರ್ಜನ ಕಟ್ಟೆಯ ಹತ್ತಿರ ಹೋಗುವ ಆಚರಣೆಯ ವಿಧಿಯೊಂದನ್ನು ಬಿಟ್ಟು ಉಳಿದ ಆಚರಣೆಯ ವಿಧಾನಗಳೆಲ್ಲ ಮೊದಲನೆಯ ಹೊರಬೀಡಿನಂತೆಯೇ ಇರುತ್ತದೆ.

ನಾಲ್ಕನೆಯ ಹೊರಬೀಡಿನಲ್ಲಿ ಮೆರವಣಿಗೆಯಿಂದ ಹೋದ ಭಕ್ತರು, ಗಾಳಿ ಮಾಸ್ತಿ (ಮಾರಿ) ಕಟ್ಟೆಯೆಡೆ ಬಲಿಸಮರ್ಪಣೆಯನ್ನು ಮಾಡಿ, ಶ್ರೀದೇವಿಗೆ ಎಡೆಯನ್ನು ಸಮರ್ಪಿಸಿ, ಬಾಬ್‌ದಾರರು, ಭಕ್ತಾದಿಗಳು ರಾತ್ರಿ ಅಲ್ಲಿ ಬೀಡು ಬಿಟ್ಟು ಶ್ರೀದೇವಿಯ ಪ್ರಸಾದವಾಗಿ ಭೋಜ ಸ್ವೀಕರಿಸಿ, ಬೆಳಗು ಜಾವ ಸುಮಾರು ಅಯ್ದು ಗಂಟೆಗೆ ಅಲ್ಲಿಂದ ಹಿಂತಿರುಗುತ್ತಾರೆ. ಈ ವಿಶೇಷ ಕಾರ್ಯಕ್ರಮವನ್ನು ಬಿಟ್ಟರೆ ಉಳಿದ ಆರಂಭದ ಹಾಗೂ ಮುಕ್ತಾಯದ ಆಚರಣೆಗಳು ಎರಡನೆಯ ಹೊರಬೀಡಿನ ಆಚರಣೆಗಳಂತೆಯೇ ಇರುತ್ತವೆ.

ಅಯ್ದನೆಯ ಹೊರಬೀಡಿನಂದು ರಾತ್ರಿ ಶ್ರೀದೇವಿಯು ಆ ವರ್ಷದ ಕೊನೆಯ ಮಂಗಳಾರತಿಯನ್ನು ಸ್ವೀಕರಿಸಿ, ಮೆರವಣಿಗೆಯಿಂದ ಅಮ್ಮನ ವಿಸರ್ಜನ ಕಟ್ಟೆಯೆಡೆ ಸಾಗುತ್ತಾಳೆ. ಅಲ್ಲಿ ಒಂದು ಬಲಿಯನ್ನು ಸ್ವೀಕರಿಸಿ, ಶ್ರೀದೇವಿಯು ಪಾದಗಟ್ಟೆಯ ಹತ್ತಿರ ಬಂದು, ಪೂಜೆ ಹಾಗೂ ಒಣ ಅಕ್ಕಿಯ ನೈವೇದ್ಯ ಸ್ವೀಕರಿಸುತ್ತಾಳೆ. ಅನಂತರ ಕಟ್ಟೆಮನೆಯವರು ಶ್ರೀದೇವಿಗೆ ಉಡಿಯನ್ನು ತುಂಬಿಸಿ, ಮಂಗಳಾರತಿ ಮಾಡಿ, ಎರಡು ಬಲಿಯನ್ನು ಸಮರ್ಪಿಸಿ,





ಎಡೆಯರ್ಪಿಸುತ್ತಾರೆ. ಆಮೇಲೆ ನೆರೆದ ಬಾಬ್‌ದಾರರು ಹಾಗೂ ಭಕ್ತಾದಿಗಳು ಶ್ರೀದೇವಿಯ ಪ್ರಸಾದವಾಗಿ ಭೋಜನವನ್ನು ಸ್ವೀಕರಿಸುತ್ತಾರೆ. ಹೊರಬೀಡಿನ ಭೋಜನ ಸಮಾರಂಭದಲ್ಲಿ ಮುಂದುವರಿದ ಕೋಮಿನವರು ಪಾಲ್ಗೊಳ್ಳುವುದಿಲ್ಲ. ಅನಂತರ ಬೆಳಿಗ್ಗೆ ಸುಮಾರು ಆರು ಗಂಟೆಗೆ ಶ್ರೀದೇವಿಯನ್ನು ಅಲ್ಲಿಂದ ಮೆರವಣಿಗೆಯಲ್ಲಿ ಬೀಡಕೀ ಬೈಲಿಗೆ ಒಯ್ಯುತ್ತಾರೆ.

ಭೂತನ ಕಟ್ಟೆಗೆ ಆರತಿಮಾಡಿ ಸುಳಗಾಯಿ ಒಡೆದ ಮೇಲೆ ಮೆರವಣಿಗೆ ಮೇತ್ರಿ ಬಾಬ್‌ದಾರರೆಡೆ ಹೋಗಿ, ಆಮಂತ್ರಿಸುತ್ತಾರೆ. ಮೇತ್ರಿ ಮನೆತನದವರು ಪಟ್ಟದ ಕೋಣವನ್ನು ಬೀಡಕ್ಕೀ ಬೈಲ ಯಾತ್ರಾ ಮಂಟಪಕ್ಕೆ ಕರೆದುಕೊಂಡು ಹೋಗುತ್ತಾರೆ. ಅಯ್ದನೆಯ ಹೊರಬೀಡಿಗೆ ಅಂಕೆಯ ಹೊರಬೀಡೆಂದೂ ಕರೆಯುವ ವಾಡಿಕೆಯಿದೆ.

ಹೊರಬೀಡುಗಳ ರಹಸ್ಯಾರ್ಥವನ್ನು ಭೇದಿಸಿ ತಿಳಿಯುವುದು ಅಷ್ಟು ಸುಲಭ ಸಾಧ್ಯವಲ್ಲ. ಸಾಂಕ್ರಾಮಿಕ ಪಿಡುಗು ತಲೆದೋರಿದಾಗ, ಊರಿನ ಮೂಲೆ ಮೂಲೆಗಳನ್ನೂ ಉಡುಗಿ ಸ್ವಚ್ಛಗೊಳಿಸಿ ಹೊಲಸನ್ನೆಲ್ಲ ಒಟ್ಟಿ, ಹೊರಗೊಗೆದು, ಶ್ರೀದೇವಿಯ ಉಡಿ ತುಂಬಿಸಿ, ಅವಳನ್ನು ಊರಗಡಿಯ ಕೊನೆಗೆ ಕರೆದುಕೊಂಡು ಹೋಗಿ ಅರ್ಚಿಸಿ, ರೋಗ ಮಾರಿಯನ್ನು ಮತ್ತೆ ಒಳಗೆ ಬರದಂತೆ ತಡೆಗಟ್ಟೆಂದು ಅವಳ ಅನುಗ್ರಹವನ್ನು ಯಾಚಿಸುವ ಹೇತುವಿನಿಂದ ಈ ಹೊರಬೀಡುಗಳು ಆರಂಭವಾಗಿರಬಹುದು, ಅಥವಾ ಮಾರಿಕಾಂಬೆಯ ಕತೆಯಲ್ಲಿ ಉಕ್ತವಾಗಿರುವಂತೆ ಶ್ರೀದೇವಿಯು ಪತಿಯ ಗುಟ್ಟಿನ ರಹಸ್ಯವನ್ನು ತಿಳಿಯಲು ಹೊರಬೀಡಿಗೆ ನಡೆದ ಸಂಗತಿಯನ್ನು ಸಾಂಕೇತಿಕವಾಗಿ ನಿರೂಪಿಸಲು ಈ ಚಡಂಗ ರೂಢಿಗತವಾಗಿ ಬಂದಿರಬಹುದು. ಇಲ್ಲವೆ ಗಡಿ ಭೂತಗಳನ್ನು ಸಂತೃಪ್ತಿಗೊಳಿಸಿದಲ್ಲಿ ಅವು ಪಿಡುಗು ನಿಯಂತ್ರಣಕ್ಕೆ ಸನ್ನದ್ಧವಾದಾವು; ಮಳೆ ಬೆಳೆಯ ಸಮೃದ್ಧಿಗೆ ನೆರವೀಯಬಹುದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಹೊರಬೀಡಿನ ಚಡಂಗಗಳು ರೂಢಿಗತವಾಗಿ ಬಂದಿರಬಹುದು.

**(ಆ) ರಥ ತಯಾರಿಕೆ :**

ಶ್ರೀ ಮಾರಿಕಾಂಬೆಯ ಪ್ರತಿ ಜಾತ್ರೆಗೆ ಹೊಸರಥವನ್ನು ತಯಾರಿಸಬೇಕೆಂಬ ರಿವಾಜಿದೆ. ಈಗ ಪ್ರತಿಜಾತ್ರೆಗೆ ಹೊಸರಥವನ್ನು ತಯಾರಿಸದಿದ್ದರೂ, ಈ ಆಚರಣೆಯನ್ನು ಸಾಂಕೇತಿಕವಾಗಿ ಆಚರಿಸಲಾಗುತ್ತದೆ. ಶ್ರೀ ದೇವಿಯ ರಥವನ್ನು

`ನಾರಿ'ಯೆಂದು ಕರೆಯಲಾಗುವ 'ತಾರಿ' ಮರದಿಂದ ಇಲ್ಲವೆ ರಂಜಲ (ಬಕುಲ) ಅಥವಾ ಶಿವನಿ ಮರದಿಂದ ತಯಾರಿಸುವ ಪದ್ಧತಿಯಿದೆ. ಜಾತ್ರೆಯ ನಾಲ್ಕು ಹೊರಬೀಡುಗಳ ನಂತರ ಶನಿವಾರ ದಿನ ಬೆಳಿಗ್ಗೆ ಭಕ್ತರು ವಾದ್ಯ ಘೋಷದೊಂದಿಗೆ ಉತ್ತರ ದಿಕ್ಕಿನ ಕಾಡಿಗೆ ಹೋಗಿ, ರಥಕ್ಕೆ ಬೇಕಾಗುವ ಮರಗಳನ್ನು ಆಯ್ಕೆ ಮಾಡುತ್ತಾರೆ. ಶ್ರೀದೇವಿಯ ಪೂಜಾರಿಯು ಮರಗಳನ್ನು ಪೂಜಿಸಿದ ಅನಂತರದಲ್ಲಿ ಸಂಬಂಧಪಟ್ಟ ಬಾಬ್‌ದಾರರು ಮರಕ್ಕೆ ಕಚ್ಚು ಹಾಕುತ್ತಾರೆ. ಈ ವಿಧಿಗೆ "ಮರಕ್ಕೆ ಕಚ್ಚು ಹಾಕುವುದು" ಎನ್ನುತ್ತಾರೆ. ಈ ವಿಧಿಯಾಚರಣೆಯ ನಂತರ ಬಾಬ್‌ದಾರರು ಹಾಗೂ ಇನ್ನಿತರರು ಒಟ್ಟಾಗಿ ಮರವನ್ನು ಕಡಿಯುತ್ತಾರೆ.

ಮಂಗಳವಾರ ಅಯ್ಯನೆಯ ಹೊರಬೀಡಿನ ದಿನ ಬೆಳಿಗ್ಗೆ, ಈ ಮರದ ದಿಮ್ಮಿಗಳನ್ನು ಬಂಡಿಯಲ್ಲಿ ತಂದು, ದೇವಸ್ಥಾನದ ಮಹಾದ್ವಾರದಲ್ಲಿ ನಿಲ್ಲಿಸುತ್ತಾರೆ. ಆಗ ಅರ್ಚಕರ ಮನೆತನದ ಮುತ್ತೈದೆಯರು, ಮರಕ್ಕೆ 'ಉಡಿ' ಅರ್ಪಿಸಿ, ಆರತಿಯನ್ನು ಬೆಳಗಿದ ಮೇಲೆ ಅವನ್ನು ರಥದ ಅಚ್ಚು, ಸೊನ್ನೆ ಹಾಗೂ ರಥದ ಇನ್ನಿತರ ಭಾಗಗಳನ್ನು ತಯಾರಿಸಲು, ಬಡಿಗರು, ಆಚಾರಿಗಳು ಮತ್ತು ಉಪ್ಪಾರರು ಒಯ್ಯುತ್ತಾರೆ. ಅವರು ಜಾತ್ರೆಯ ನಿಯಮಕ್ಕನುಸಾರವಾಗಿ ರಥವನ್ನು ಒಂದೇ ವಾರದ ಒಳಗಡೆಯಲ್ಲಿ ತಯಾರಿಸಿಕೊಡುತ್ತಾರೆ.

ಒಂದು ಕಾಲಕ್ಕೆ ದೇವರ ಮೂರ್ತಿಯನ್ನೂ ಸಹ ಇದೇ ಬಗೆಯಲ್ಲಿ, ಇದೇ ಕಟ್ಟಿಗೆಯಿಂದ ಇದೇ ಸಮಯದಲ್ಲಿ ತಯಾರಿಸುತ್ತಿದ್ದಿರಬೇಕು. ಅರ್ಚಕರ ಮನೆಯ ಮುತ್ತೈದೆಯರು ಮರಕ್ಕೆ 'ಉಡಿ' ತುಂಬುವುದು ಈ ಅಂಶವನ್ನು ಸಾಬೀತು ಪಡಿಸುತ್ತದೆ. ಬಂಡಿಯಲ್ಲಿ ತಂದ ಮರ ಅವರ ಪಾಲಿಗೆ ಕೇವಲ ಮರವಲ್ಲ, "ಮರದಮ್ಮ". ಕೇವಲ ಏಳುದಿನಗಳಲ್ಲಿ ಸರ್ವಾಂಗ ಸುಂದರವಾದ ಮೂರ್ತಿಯನ್ನು ಕೆತ್ತುವುದು ಕಷ್ಟವಾಗಿ ಮುಂದೆ ಕ್ರಮೇಣ ಮೂರ್ತಿಯನ್ನು ಪ್ರತಿವರ್ಷ ತಯಾರಿಸುವ ಪದ್ಧತಿ ಕೈತಪ್ಪಿ ಹೋಗಿರಬೇಕು. ಈಗಲೂ ಜಗನ್ನಾಥಪುರದ ಜಾತ್ರೆಯ ಕಾಲಕ್ಕೆ ಬಲರಾಮ, ಕೃಷ್ಣ ಮತ್ತು ಸುಭದ್ರೆಯರ ಮೂರ್ತಿಗಳನ್ನು ಪ್ರತಿವರ್ಷ ರಥೋತ್ಸವದ ಕಾಲಕ್ಕೆ ತಯಾರಿಸುವ ಸಂಪ್ರದಾಯವಿರುವುದಾಗಿ ಕೇಳಿದ್ದೇನೆ. ಇಂಥ ಮೂರ್ತಿಗಳು ಜಾತ್ರೆಯ ಅನಂತರದಲ್ಲಿ ವಿಸರ್ಜನೆಯಾಗುತ್ತಿದ್ದಿರಬೇಕು.[2]

**(೯) ಅಂಕೆ ಹಾಕುವುದು :**

ಅಯ್ಯನೆಯ ಹೊರಬೀಡು ಅಂಕೆಯ ಹೊರಬೀಡೆಂದು ಹೆಸರಾಗಿದೆ. ಶ್ರೀದೇವಿಯ ಸಂತತಿಯವರೆಂದು ಕರೆಯಲಾಗುವ ಆಸಾದಿಯರು ಅಂಕೆಯನ್ನು ಹಾಕುವ ಪೂರ್ವದಲ್ಲಿ ಬೀಡಕೀ ಬೈಲಿನ ಜಾತ್ರಾ ಚಪ್ಪರದಲ್ಲಿ ರಂಗವೊಂದನ್ನು

2. ಬಸೆಟ್ಟಿ ಕೆರೆಯಲ್ಲಿ ಲಭ್ಯವಾದ ಮೂರ್ತಿ ಇದೆ ಬಗೆಯದಿದ್ದರೂ ಇರಬಹುದು.





ನಿರ್ಮಿಸಿ, ಅದರ ಸುತ್ತಲೂ ರಂಗೋಲಿಯನ್ನು ಹಾಕಿ, ಅಕ್ಕಿಯನ್ನು ಹರವಿ, ಅದರ ಮೇಲೆ ಸಣ್ಣ ಸಣ್ಣ ಮಡಕೆಗಳನ್ನಿಟ್ಟು ಅವನ್ನು ನೂಲಿನಿಂದ ಕಟ್ಟಿ, ಮಧ್ಯದಲ್ಲಿ `ರಾಣಿಗೋಲ'[3] ನ್ನಿಟ್ಟು ಪಕ್ಕದಲ್ಲಿ ಹಣತಿಯನ್ನು ಹೊತ್ತಿಸಿ ಆರತಿಯನ್ನು ಮಾಡುತ್ತಾರೆ. ಆರತಿಗೆ ಪೂರ್ವದಲ್ಲಿ ಪಟ್ಟದ ಕೋಣವನ್ನು ಗದ್ದಿಗೆಯ ಹತ್ತಿರ ತರುತ್ತಾರೆ. ಕೋಣದ ಕೊರಳಿಗೆ 'ಕಂಕಣ' (ಪಂಜೆಯಲ್ಲಿ ಅಕ್ಕಿ, ಕಾಯಿ, ವೀಳ್ಯಾದಿಗಳನ್ನಿಟ್ಟು) ಕಟ್ಟುತ್ತಾರೆ. ಅನಂತರ ಕುಂಭಕ್ಕೆ ಅಲ್ಲಿ ನೆರೆದ ನಾಡಿನ ಬ್ರಾಹ್ಮಣ ಮನೆತನದವರಿಗೆ, ಬಾಬ್‌ದಾರರಿಗೆ ಹಾಗೂ ಊರಿನ ಪ್ರತಿಷ್ಠಿತರಿಗೆ ಆಸಾದಿಗಳು ಕಂಕಣವನ್ನು ಕಟ್ಟುತ್ತಾರೆ, ತಾವೂ ಕಂಕಣಬದ್ಧರಾಗುತ್ತಾರೆ. ಈ ಆಚರಣಾ ವಿಧಿಯಿಂದ ಲಗ್ನಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾರೆ. ಈ ಆಚರಣಾ ವಿಧಿಯಲ್ಲಿ ಆಸಾದಿಯರದೇ ಮುಖ್ಯ ಪಾತ್ರ. ಈ ಆಚರಣೆಯ ವಿಧಿಯನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ವಧೂವರರ ಮದುವೆ ನಿಶ್ಚಯ (ವಾಗ್ದಾನ)ದ ಚಡಂಗದ ನೆನಪಾಗುತ್ತದೆ.

ಅಂಕೆ ಎಂಬ ಪದಕ್ಕೆ ಅಪ್ಪಣೆ, ನಂಬುಗೆ, ಹಿಡಿತ, ವಿಶ್ವಾಸ ಮುಂತಾದ ಅರ್ಥಗಳಿವೆ. 'ಅಂಕೆ ಹಾಕುವುದು' ಎಂದರೆ ಮುಂದಾಗಲಿರುವ ಮದುವೆಗೆ ನಂಬುಗೆಯ, ವಿಶ್ವಾಸದ ಬಂಧನವನ್ನು ಹಿಡಿತವನ್ನು ಹಾಕುವುದು ಎಂದರ್ಥ. ಇಲ್ಲಿ ಶ್ರೀದೇವಿಯ ಮದುವೆಯ ಬಂಧನದ ನಿಶ್ಚಿತಾರ್ಥದ ಆಚರಣೆಯನ್ನೇ 'ಅಂಕೆ ಹಾಕುವುದು' ಎಂದು ಕರೆದಂತಿದೆ.

ಈ ವಿಧಿ ಆಚರಣೆಯ ಅನಂತರ ಮೆರವಣಿಗೆಯು ದೇವಿಯ ಪಲ್ಲಕ್ಕಿಯೊಂದಿಗೆ ಮರ್ಕಿ-ದರ್ಗಿಯರ ದೇವಸ್ಥಾನಕ್ಕೆ ಬಂದು ಅನಂತರ ಮಾರಿಕಾಂಬೆಯ ದೇವಾಲಯಕ್ಕೆ ಸಾಗುತ್ತದೆ. ಮೆರವಣಿಗೆಯ ಮುಂಭಾಗದಲ್ಲಿ ಕೋಣನನ್ನು ಕರೆದುಕೊಂಡು ಹೋಗುತ್ತಾರೆ.

ದೇವಾಲಯಕ್ಕೆ ಪಲ್ಲಕ್ಕಿ ಹೋದ ಕೂಡಲೇ, ದೇವಾಲಯದ ಮಹಾದ್ವಾರವನ್ನು ಮುಚ್ಚಲಾಗುತ್ತದೆ. ಹೀಗೆ ಮುಚ್ಚಿದ ಬಾಗಿಲನ್ನು ಯುಗಾದಿಯ ಮರಪ್ರತಿಷ್ಠಾಪನೆಯವರೆಗೂ ತೆಗೆಯುವುದಿಲ್ಲ. ಅನಂತರ ದೇವಿಯ ಮೂಲ

3. ಶ್ರೀದೇವಿಯ ಸಂಕೇತವಾಗಿ ಆಸಾದಿಗಳ ಮುಖಂಡ ರಾಣಿಗ್ಯಾನು ಸರ್ಪಾಕಾರದ ಈ ಕೋಲನ್ನು ಹಿಡಿಯುವುದರಿಂದ ಇದನ್ನು 'ರಾಣಿಗೋಲು' ಎಂದು ಕರೆಯುತ್ತಾರೆ. ಆಸಾದಿಗಳು, ಶ್ರೀದೇವಿಯನ್ನು ಸ್ತುತಿಸಿ ಹಾಡುವಾಗ, ಕುಣಿಯುವಾಗ, ಭಕ್ತರಿಗೆ ಆಶೀರ್ವಾದವನ್ನು ಮಾಡುವಾಗ ಈ ಕೋಲನ್ನು ಬೀಸುತ್ತಾರೆ. ಮುಂಬದಿಯಲ್ಲಿ ಸರ್ಪದ ಹೆಡೆಯ ಆಕಾರವನ್ನು ಹೊಂದಿದ ಈ ರಾಣಿಗೋಲು ಶಕ್ತಿಪೂಜಾ ವಿಧಾನದಲ್ಲಿ ಸರ್ಪಸಂಕೇತಕ್ಕಿರುವ ಪ್ರಾಧ್ಯಾನ್ಯವನ್ನು ಎತ್ತಿ ತೋರಿಸುತ್ತದೆ. ಆಸಾದಿಗಳು ನಾಗನ ಉಪಾಸಕರಾದ ನಾಗರಾಗಿರಬಹುದಾಗಿರುವುದನ್ನೂ ಈ ರಾಣಿಕೋಲಿನ ಸಂಕೇತದಿಂದ ಅರಿಯಬಹುದು.

ವಿಗ್ರಹವನ್ನು ವಿಸರ್ಜನೆ ಮಾಡಿ, ಮೂರ್ತಿಗೆ ಬಣ್ಣ ಹಾಕಲು ಕೊಡಲಾಗುತ್ತದೆ. ಅವಶ್ಯವೆನಿಸಿದಲ್ಲಿ ಶ್ರೀದೇವಿಯ ಪ್ರಭಾವಳಿ ಮಂಟಪಾದಿಗಳಿಗೂ ಬಣ್ಣ ಹಾಕಲು ಕೊಡುವುದಿದೆ. ಇದೇ ಸಮಯದಲ್ಲಿ ಮರ್ಕಿ-ದುರ್ಗಿಯರಿಗೂ ಬಣ್ಣ ಹಾಕಲು ಕೊಡುತ್ತಾರೆ.

ಕಟ್ಟಿಗೆಯಿಂದ ಮಾಡಿದ ದೇವಿಯ ಮೂಲ ವಿಗ್ರಹದ ವಿವಿಧ ಅಂಗಾಂಗಳನ್ನು ಕಳಚಲು ಬರುತ್ತದೆ. ಮೂರ್ತಿಯ ಅಂಗಾಂಗಳನ್ನು ಬೇರ್ಪಡಿಸುವಾಗ, ಮುಂದೆ ಮೂರ್ತಿಯ ಜೋಡಣೆಯ ಕಾಲಕ್ಕೆ ಏರುಪೇರಾಗದಂತೆ ಮೂರ್ತಿಯ ಅಂಗಾಂಗಗಳಿಗೆ `ಅಂಕೆ ಹಾಕಿ' ಗುರುತು ಮಾಡಿಕೊಳ್ಳುತ್ತಾರೆ. ಅದಕ್ಕಾಗಿಯೇ ಈ ಕಾರ್ಯಕ್ರಮಕ್ಕೆ `ಅಂಕೆ ಹಾಕುವುದು' ಎಂಬ ಹೆಸರು ಬಂದಿರಬೇಕೆಂದು ಶ್ರೀವಿನಾಯಕ ಮಾಡಗೇರಿಯವರು ನನ್ನ ಹತ್ತಿರ ಹೇಳಿದ್ದಿದೆ.

ಅಯ್ದನೆಯ ಹೊರಬೀಡಿನಲ್ಲಿ ಶ್ರೀಮಾರಿಕಾಂಬೆ ಹಾಗೂ ಮರ್ಕಿದುರ್ಗಿಯರ ಗುಡಿಯ ಮುಚ್ಚಿದ ಬಾಗಿಲನ್ನು ಶ್ರೀದೇವಿಯ ಯುಗಾದಿಯ ಮರು ಪ್ರತಿಷ್ಠಾಪನೆಯ ವರೆಗೂ ತೆರೆಯುವುದಿಲ್ಲ. ಈ ಅವಧಿಯಲ್ಲಿ ಶ್ರೀದೇವಿಗೆ ಸಲ್ಲಿಸಲಾಗುವ ಪೂಜೆ ಹರಕೆಗಳನ್ನು ಭಕ್ತಾದಿಗಳು, ಮಾರಿಕಾಂಬೆಯ ಗುಡಿಯ ಪಕ್ಕದಲ್ಲಿರುವ ಭೂತಪ್ಪನಿಗೆ ಸಲ್ಲಿಸುತ್ತಾರೆ.[4] ಭೂತಪ್ಪನ ಪೂಜಾರಿಗಳೂ ಮಾರಿಕಾಂಬೆ ಪೂಜಾರಿಗಳಾದ ವಿಶ್ವಕರ್ಮ ಸಮಾಜಕ್ಕೆ ಸೇರಿದವರೇ ಆಗಿದ್ದಾರೆ.

**(ಈ) ಮೇಟಿದೀಪ :**

ಅಂಕೆ ಹಾಕುವ ಸಮಯದಲ್ಲಿ ಶ್ರೀದೇವಿಯನ್ನು ವಿಸರ್ಜಿಸಿ, ಬಣ್ಣ ಹಾಕಲು ಕೊಡುವ ಪೂರ್ವದಲ್ಲಿ, ಶ್ರೀದೇವಿಯ ತವರು ಮನೆಯವರೆಂದು ನಂಬಲಾದ ನಾಡಿಗ ಮನೆತನದವರು, ಗದ್ದಿಗೆಯ ಮೇಲಿರುವ ಶ್ರೀದೇವಿಗೆ, ಕೊನೆಯ ಮಹಾ ಮಂಗಳಾರತಿಯನ್ನು ಮಾಡಿ, ಶ್ರೀದೇವಿಯ ಆ ಕಳಾಜ್ಯೋತಿಯನ್ನು ಮೇಟಿ ದೀಪದವನಿಗೆ ನೀಡುತ್ತಾರೆ. ಹಣತೆಯಲ್ಲಿರುವ ಆ ಮಹಾಜ್ಯೋತಿಯನ್ನು ಮೇಟಿ ದೀಪ ಹಿಡಿಯುವವನು, ಒಂದು ಅಗಲವಾದ ಮಣ್ಣಿನ ಪಾತ್ರೆಯಲ್ಲಿಟ್ಟುಕೊಂಡು, ಜಾತ್ರೆಯು ಮುಗಿಯುವ ಪರ್ಯಂತ ಕಾಯುತ್ತಿರುತ್ತಾನೆ. ಶ್ರೀದೇವಿಯ ವಿಸರ್ಜನೆಯಾದರೂ, ಅವಳ ಮುಖ್ಯ ಕಳೆಯು ಮೇಟಿ

4. ನಾಗರ ಗುತ್ತಿಯೆಂದು ಹಿಂದಕ್ಕೆ ಕರೆಯಲಾಗುವ ಈ ಭೂತಪ್ಪ ನಾಗದೇವತೆಯಿದ್ದಂತಿದೆ. ಇದೂ ದೇವಿ ಸ್ವರೂಪವೇ. ಅದಕ್ಕಾಗೇ ಅದಕ್ಕೆ ಪೂಜೆ.





ದೀಪದಲ್ಲಿರುತ್ತದೆಯೆಂಬ ನಂಬಿಕೆ ಭಕ್ತರದು [5] ಅದಕ್ಕಾಗಿಯೇ ಅದು 'ಮೇಟಿ' ಎಂದರೆ ನಾಯಕ - ಮುಖ್ಯ - ದೀಪವೆನಿಸುತ್ತದೆ. ಜಾತ್ರೆಯ ವಿಸರ್ಜನೆಯ ನಂತರ ಈ ದೀಪವನ್ನು ದೇವಸ್ಥಾನಕ್ಕೆ ಒಯ್ಯುತ್ತಾರೆ. ಈ ಕಾರ್ಯಕ್ರಮ ನಡೆಯುವುದು ಬುಧವಾರ ದಿನ. ಮುಂದಿನ ಮಂಗಳವಾರ ರಾತ್ರಿ ಸಭಾಮಂಟಪದಲ್ಲಿ ಶ್ರೀದೇವಿಯ ವಿವಾಹ ಮಹೋತ್ಸವ ನಡೆಯುತ್ತದೆ.

ಹಿಂದೆ ಮಾರಿಜಾತ್ರೆಯ ಕಾಲಕ್ಕೆ ಶ್ರೀದೇವಿ ರಥಾರೋಹಣ ಮಾಡಿ ಬಂದ ದಿನ ಕೋಣನ ವಧೆಯಾಗುತ್ತಿತ್ತು. ವಧೆಯಾದ ಕೋಣನ ತಲೆಯ ಮೇಲೆ ಮೇಟಿ ದೀಪವನ್ನು ಸಾಂಕೇತಿಕವಾಗಿ ಇಡಲಾಗುತ್ತಿತ್ತು. ಕೋಣ (ಮಹಿಷಾಸುರ)ನನ್ನು ಕೊಂದಿಕ್ಕಿದ ಶ್ರೀದೇವಿಯ ಕಳಾಜ್ಯೋತಿ ಸಾಮಾನ್ಯ ಜ್ಯೋತಿಯಲ್ಲ, ಅದು ಕೋಣನ ಪಾಲಿಗೆ ನಂಜಿನ ದೀಪ. ದುಷ್ಟ ಶಿಕ್ಷಕ ದೀಪ. ಅದಕ್ಕಾಗಿಯೇ ಹಾಲಕ್ಕಿ ಒಕ್ಕಲಿಗರು ಈ ದೀಪವನ್ನು 'ನಂಜಣಿ ನಂಜಿನ ದೀಪವೆಂದು ಅರ್ಥಪೂರ್ಣವಾದ ನುಡಿಗಳಿಂದ ದಾಖಲಿಸುತ್ತಾರೆ.

ಅಮ್ಮನ ನೋಡಬೇಕೋ ಅಮ್ಮನ ಜಾತುರೆ ನೋಡಬೇಕೋ
ಜಾತುರೆ ನೋಡಬೇಕೋ ಜಾತುರೆ ತೇರನು ನೋಡಬೇಕೋ
ತೇರನು ನೋಡಬೇಕೋ ಪಟದಲಿ ಕೋಣನ್ನ ನೋಡಬೇಕೋ
ಕೊ-ಣನ್ನ ನೋಡಬೇಕೋ ತಲೆಮ್ಯನೆ ನಂಜಣ ದೀಪ ನೋಡಬೇಕೋ
ನಂಜಣ ದೀಪಾ ನೋಡಬೇಕೋ ಕೋಣನ ಕಡುವರ ನೋಡಬೇಕೋ.

ಶ್ರೀದೇವಿಯ ಕ್ರೋಧಜ್ವಾಲೆಯ ನಂಜು, ಕೋಣನನ್ನು ಬಲಿ ತೆಗೆದುಕೊಂಡುದರ ಸಂಕೇತವಾಗಿ ಕೋಣನ ತಲೆಯ ಮೇಲೆ ಈ ಮಹಾನ್ ನಾಯಕ ಜ್ಯೋತಿಯನ್ನು ಉರಿಸಿದಂತಿದೆ. ಶ್ರೀದೇವಿಯು ಕೋಣನನ್ನು ಇಕ್ಕಿ ಮೆಟ್ಟಿದ ಸಂಕೇತವಾಗಿ ಕೋಣನ ತಲೆಯ ಮೇಲೆ ಈ ದೀಪವನ್ನು ದೇವಿಯ ಸಂಕೇತವಾಗಿ ಇಟ್ಟಿರಲೂಬಹುದು.

**ಉ. ವಿವಾಹೋತ್ಸವ :**

ಮಾರಿಕಾಂಬೆಯ ಜಾತ್ರೆಯ ಸಂಭ್ರಮ ಆರಂಭವಾಗುವುದು ಶ್ರೀದೇವಿಯ

5. ಸರ್ವಚೇತನವಾದಿ (Animism)ಗಳಲ್ಲಿ ಪ್ರತಿಯೊಂದು ಪ್ರಾಣಿ ವರ್ಗಕ್ಕೂ ತನ್ನದೇ ಆದ ಆತ್ಮವಿದೆ. ಸತ್ತಮೇಲೂ ಅದು ನಾಶವಾಗುವುದಿಲ್ಲ. ಅದು ನಾಶ ಹೊಂದದೆ ರಕ್ಷಿಸುವ ಹಾಗೂ ಶಿಕ್ಷಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ ಎಂಬ ನಂಬಿಕೆಯಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿಯೇ, ಮೃತ ವ್ಯಕ್ತಿಯ ಸ್ಥಳದಲ್ಲಿ ಅವನ ಅವಿನಾಶಿಯಾದ ಆತ್ಮಜ್ಯೋತಿಯ ಸಂಕೇತವಾಗಿ ದೀಪವನ್ನಿಡುವುದುಂಟು. ಹಾಗೆಯೇ ಶ್ರೀದೇವಿಯ ವಿಸರ್ಜನೆಯಾದರೂ ಅವಳ ಕಳಾಜ್ಯೋತಿ ಅವಿನಾಶಿಯಾಗಿ, ನಮ್ಮ ರಕ್ಷಕ ಹಾಗೂ ಶಿಕ್ಷಕ ಶಕ್ತಿಯಾಗುತ್ತದೆ ಎನ್ನುವ ಸರ್ವಚೇತನವಾದದ ಹಿನ್ನೆಲೆ ಈ ಮೇಟಿದೀಪಕ್ಕೂ ಇದ್ದಂತಿದೆ.

ವಿವಾಹೋತ್ಸವದಿಂದ ಮಂಗಳವಾರ ಮುಂಜಾನೆ ಕಳಸವನ್ನು ಪೂಜಿಸಿ, ಅದನ್ನು ತಳಿರು ತೋರಣಗಳಿಂದ ಸಿಂಗರಗೊಂಡ ರಥದ ಮೇಲೆ ಪ್ರತಿಷ್ಠಾಪಿಸುತ್ತಾರೆ. ಬೇಡರ ಜೋಗತಿಯರು ಚಾಮರಸೇವೆಯನ್ನು ಸಲ್ಲಿಸುತ್ತಾರೆ.

ಅಂದು ಸಂಜೆ ಬಣ್ಣಹಾಕಲಿಕ್ಕೆ ಕೊಡಲಾದ ವಿಸರ್ಜಿತ ಮಾರಿಕಾಂಬೆ ಹಾಗೂ ಮರ್ಕಿ-ದುರ್ಗಿಯರ ವಿಗ್ರಹದ ಹೊಸಬಣ್ಣದಿಂದ ಮಿರುಗುವ ಅಂಗಾಂಗಗಳನ್ನು ಜೋಡಿಸಿ, ಪ್ರತಿಮೆಯಾಗಿಸಿ, ಅದಕ್ಕೆ ಸೀರೆಯನ್ನುಡಿಸಿ ವಿವಿಧ ಆಭರಣಗಳಿಂದ ನವ ವಧುವನ್ನು ಸಿಂಗರಿಸುವಂತೆ ಸಿಂಗರಿಸಿ, ದೇವಸ್ಥಾನದ ಪಶ್ಚಿಮ ದಿಕ್ಕಿನ ಚಂದ್ರಶಾಲೆಯ ವೇದಿಕೆಯ ಮೇಲೆ ಮರೆಯಲ್ಲಿಟ್ಟಿರುತ್ತಾರೆ. ಹೀಗೆ ಸರ್ವಾಲಂಕಾರ ಭೂಷಿತೆಯರಾದ ದೇವತಾ ಪ್ರತಿಮೆಗಳಿಗೆ ಬಣ್ಣಕೊಟ್ಟ ಗುಡಿಗಾರರು ದೃಷ್ಟಿಯನ್ನು ನೀಡುತ್ತಾರೆ. ಆಗ ದೇವತೆಗಳಿಗೆ ಸಾತ್ವಿಕ ಬಲಿ ನೀಡಲಾಗುತ್ತದೆ. ಅನಂತರ ದೇವಿಯ ಮೇಲಿನ ತೆರೆಯನ್ನು ಅನಾವರಣಗೊಳಿಸಿ, ಗುಡಿಗಾರರು ದೇವಿಗೆ ಪೂಜೆಯನ್ನು ಸಲ್ಲಿಸಿ ದೇವಾಲಯದ ವಾರಸುದಾರರಿಗೆ ಮೂರ್ತಿಯನ್ನು ಒಪ್ಪಿಸುತ್ತಾರೆ.

ರಾತ್ರಿ ಹನ್ನೊಂದು ಹನ್ನೆರಡು ಗಂಟೆಯ ಸುಮಾರಿಗೆ ಶ್ರೀದೇವಿಯ ತವರು ಮನೆಯವರೆಂದು ಭಾವಿಸಲಾಗಿರುವ ನಾಡಿಗ ಬ್ರಾಹ್ಮಣರನ್ನು ವಾದ್ಯ ಘೋಷದೊಡನೆ ಮೆರವಣಿಗೆಯಿಂದ ಕರ ತರುತ್ತಾರೆ. ನಾಡಿಗರು ಮಾಡುವ ಈ ಪ್ರತಿಷ್ಠೆಯ ಪ್ರಥಮ ಪೂಜೆಗೆ ಇಂಥ ಮಧ್ಯರಾತ್ರಿಯ ಸಮಯದಲ್ಲಿಯೂ ದೇವಾಲಯದ ಸಭಾಗೃಹದಲ್ಲಿ ಸಾವಿರಾರು ಜನರು ಕಿಕ್ಕಿರಿದು ತುಂಬಿರುತ್ತಾರೆ. ನಾಡಿಗ ಮನೆತನದವರು ಶ್ರೀದೇವಿಗೆ ಪೂಜೆಯನ್ನು ಸಮರ್ಪಿಸಿ, ಶ್ರೀದೇವಿಯ ವಿವಾಹ ಕಾರ್ಯಚರಣೆಗೆ ಮೊದಲು ಮಾಡುತ್ತಾರೆ. ವರನಿಗೆ ಕಟ್ಟುವ ಬಾಸಿಂಗವನ್ನು ಶ್ರೀದೇವಿಯ ಪ್ರಭಾವಳಿಯ ಕಿರೀಟಕ್ಕೆ ಕಟ್ಟಲಾಗುತ್ತದೆ. ಹಿಂದಕ್ಕೆ ಈ ಬಾಸಿಂಗವನ್ನು ಶ್ರೀದೇವಿಯ ಪತಿಯೆಂದು ಭಾವಿಸಲಾದ ಕೋಣನ ತಲೆಗೇ ಕಟ್ಟುವ ಸಂಪ್ರದಾಯವಿತ್ತಂತೆ. ಹೆಣ್ಣಿಗೆ ಕಟ್ಟುವ ತೊಂಡಿಲುಗಳನ್ನು ಮರ್ಕಿ-ದುರ್ಗಿಯರಿಗೆ ಕಟ್ಟಲಾಗುತ್ತದೆ. ಅನಂತರ ಶ್ರೀದೇವಿ ಮರ್ಕಿ-ದುರ್ಗಿಯರಿಗೆ ಬಳೆಗಳನ್ನು ತೊಡಿಸಿ, ಕುಂಕುಮ ಹಚ್ಚಿ, ಮಂಗಲ ಸೂತ್ರವನ್ನು ಕಟ್ಟಿ, ಕಾಲಿಗೆ ತೊಡಿಸುವ ಸುತ್ತುಂಗುಲಗಳನ್ನು ಶ್ರೀದೇವಿಯ ಕೈಯ ಕುಂಕುಮ ಪಾತ್ರೆಯಲ್ಲಿಟ್ಟು ಉಡಿಯನ್ನು ತುಂಬುತ್ತಾರೆ. ವಿವಾಹ ವಿಧಿಯ ಆಚರಣೆಯಲ್ಲಿ ಸಪ್ತಪದಿ, ಅರುಂಧತಿಯ ದರ್ಶನಾದಿ ಚಡಂಗಗಳು ಇಲ್ಲ. ಶ್ರೀದೇವಿಯ ವಿವಾಹ ಕಾರ್ಯವನ್ನು ನಿರ್ವಹಿಸಿ, ನಾಡಿಗ ಮನೆತನದವರು ತಮ್ಮ ಮನೆಗೆ ತೆರಳಿ, ವಿವಾಹೋತ್ಸವದ ಔತಣವನ್ನು ಸ್ವೀಕರಿಸುವ ಸಂಪ್ರದಾಯವಿದೆ.





ನಾಡಿಗರು ಶ್ರೀದೇವಿಗೆ ಸಲ್ಲಿಸುವ ಪೂಜೆ ಹಾಗೂ ವಿವಾಹದಿ ಆಚರಣಾ ವಿಧಿಗಳಲ್ಲಿ ವೈದಿಕ ಮಂತ್ರಗಳ ಪ್ರವೇಶವನ್ನು ಗಮನಿಸಬಹುದಾದರೂ, ಕೆಲವೆಡೆ ಅವೈದಿಕ ಆಚರಣೆ ಜನಪದ ಗೀತಗಳ ಬಳಕೆ ಈ ಸಂದರ್ಭದಲ್ಲಿಯೂ ಆಗುವುದನ್ನು ಗಮನಿಸಬಹುದಾಗಿದೆ.

ನಾಡಿಗರ ಪ್ರಥಮ ಪೂಜೆಯ ಅನಂತರದಲ್ಲಿ ಶ್ರೀದೇವಿಯನ್ನು ಅನುಕ್ರಮವಾಗಿ ಪೂಜಿಸುವ ಕುಂಬಾರ (ಚಕ್ರಶಾಲಿ) ಕೇದಾರ (ಚೌತಮನೆ) ಹಾಗೂ ಶ್ರೀದೇವಿಯ ಅರ್ಚಕರು ಮಾಡುವ ಪೂಜಾ ವಿಧಿವಿಧಾನಗಳಲ್ಲಿ ಜಾನಪದೀಯ ಅಂಶಗಳು ಗಾಢವಾಗಿರುವುದು ಎದ್ದುಕಾಣುತ್ತದೆ. ಶ್ರೀದೇವಿಗೆ ಪೂಜೆಯನ್ನು ಸಮರ್ಪಿಸುವ ಎಲ್ಲ ಬಾಬ್‌ದಾರ ಕುಟುಂಬದವರೂ, ದಂಪತಿ ಸಮೇತವಾಗಿ ಬಂದು ಪೂಜಾವಿಧಿಯನ್ನು ನಿರ್ವಹಿಸುವುದು ಗಮನಾರ್ಹ ಸಂಗತಿಯಾಗಿದೆ. ಶ್ರೀದೇವಿಗೆ ಪೂಜೆಯನ್ನು ಸಲ್ಲಿಸಲಿಕ್ಕೆ ಬರುವ ಎಲ್ಲ ಬಾಬ್‌ದಾರರನ್ನು ವಾದ್ಯಘೋಷದೊಂದಿಗೆ ಮೆರವಣಿಗೆಯಿಂದ ಕರೆದುಕೊಂಡು ಬಂದು, ಪೂಜೆಮುಗಿದ ಮೇಲೆ ಅವರನ್ನು ಅದೇ ಬಗೆಯಲ್ಲಿ ಮನೆಗೆ ಮುಟ್ಟಿಸುವ ಸಂಪ್ರದಾಯವಿದೆ. ಈ ಸಂಗತಿ ಬಾಬ್‌ದಾರರು ಶ್ರೀದೇವಿಯ ದೇವಲ್ಯದಲ್ಲಿ ಹೊಂದಿದ ಉನ್ನತ ಮಟ್ಟದ ಸ್ಥಾನಮಾನಗಳಿಗೆ ಪ್ರತ್ಯಕ್ಷ ಸಾಕ್ಷಿಗಳು. ಇವೆಲ್ಲ ಆಚರಣೆಯ ವಿಧಿಗಳು ಮುಗಿಯಲು ಬೆಳಗು ಜಾವ ಸುಮಾರು ಅಯ್ದಾರು ಗಂಟೆಯಾಗುತ್ತದೆ.

ಎಲ್ಲ ಬಾಬ್‌ದಾರರ ಪೂಜೆ ಮುಗಿದ ಮೇಲೆ, ಮರ್ಕಿ-ದುರ್ಗಿಯರ ಮೂರ್ತಿಗಳನ್ನು ಅದ್ದೂರಿಯ ಮೆರವಣಿಗೆಯಿಂದ ಅವುಗಳ ದೇವಾಯತನಕ್ಕೊಯ್ದು ಪ್ರತಿಷ್ಠಾಪಿಸುತ್ತಾರೆ.

**ಊ. ರಥೋತ್ಸವ :**

ಬುಧವಾರ ಮುಂಜಾನೆ ಶ್ರೀದೇವಿಯ ಮೂಲ ವಿಗ್ರಹವನ್ನು ರಥದಲ್ಲಿ ಮೆರವಣಿಗೆ ಮಾಡಲು ಒಯ್ಯುವಾಗ, ಶ್ರೀದೇವಿಯ ದೃಷ್ಟಿಯು ಹೊರಳುವ ತಿರುವುಗಳಲ್ಲಿ ಎಂದರೆ, ಭೂತರಾಜನ ಮುಂದೆ ಒಂದು ಹಾಗೂ ಶ್ರೀದೇವಿಯು ರಥದಲ್ಲಿ ಕೂಡ್ರುವೆಡೆ ಮತ್ತೊಂದು ಹೀಗೆ ಎರಡು ಬಲಿಗಳು ಮಡಿವಾಳ ಕುಟುಂಬದವರಿಂದ ನಡೆಯುತ್ತವೆ. ಶ್ರೀದೇವಿಯು ರಥಾರೋಹಣ ಮಾಡಿದ ಕೂಡಲೇ ಆಸಾದಿ ರಾಣಿಗೋಲು ಹಿಡಿದು ಸುಳಿಯೆಡೆಯನ್ನು ಶ್ರೀದೇವಿಗೆ ತೋರಿಸಿ, ಶ್ರೀದೇವಿಯ ಹೊಗಳಿಕೆಯನ್ನು ಮಾಡುತ್ತಾಳೆ. ಅನಂತರ ಉತ್ಸವವನ್ನು

ನೆರವೇರಿಸಿದವರ, ಊರ ಪ್ರಮುಖರ, ಬಾಬ್‌ದಾರರ ಪರವಾಗಿ ಸುಮಾರು ಎರಡು ನೂರಕ್ಕಿಂತ ಹೆಚ್ಚು ತೆಂಗಿನ ಕಾಯಿಗಳನ್ನು ರಥಕ್ಕೆ ಒಡೆಯುತ್ತಾರೆ. ಒಡೆದ ಕಾಯಿಗಳನ್ನು ರಥವನ್ನು ಕಟ್ಟಿದ ಕೆಲಸಗಾರರಿಗೆ ಪ್ರಸಾದ ರೂಪದಲ್ಲಿ ವಿತರಿಸಿ, ರಥವನ್ನು ಶ್ರೀ ಮಾರಿಕಾಂಬೆಯ ಗುಡಿಯಿಂದ ಬೀಡಕೀ ಬಯ್ಲಿನವರೆಗೆ ಎಳೆಯುತ್ತಾರೆ. ರಥವನ್ನು ಎಳೆದುಕೊಂಡು ಹೋಗುವಾಗ, ರಥದ ಮುಂದೆ ಜಾನಪದರು ಡೊಳ್ಳಿನ ಕುಣಿತ, ಕೋಲಾಟ, ಜೋಗತೇರ ಕುಣಿತ, ದೇವಿ ಮೈಮೇಲೆ ಬಂದು ಆವೇಶದಿಂದ ಕುಣಿಯುವ ಭಕ್ತರ ಕುಣಿತ, ಜನಪದ ಹಾಡು ಹಗಣ ಹೀಗೆ ಹಲವಾರು ಮನೋರಂಜಕ ಕಲೆಗಳಿಂದ ರಂಗುವಡೆದ ರಥೋತ್ಸವದ ಮೆರವಣಿಗೆ ಚೇತೋಹಾರಿಯಾಗಿರುತ್ತದೆ. ಲಗ್ನವಾದ ನವ ವಧುವನ್ನು ಗಂಡನ ಮನೆಗೆ ಕಳಿಸುವ ಮೆರವಣಿಗೆಯಂತಿರುವ ಈ ರಥೋತ್ಸವವನ್ನು ವೀಕ್ಷಿಸಲು ನಾಡಿನ ಮೂಲೆ ಮೂಲೆಗಳಿಂದ ಬಂದ ಸಾವಿರಾರು ಜನರು, ರಥಬೀದಿಯ ಇಕ್ಕೆಲಗಳಲ್ಲಿ ಉತ್ಸಾಹದಿಂದ ಭಕ್ತಿ ಭಾವುಕತೆಯಿಂದ ತನ್ಮಯರಾಗಿ ನಿಂತಿರುತ್ತಾರೆ.

ರಥವು ಜಾತ್ರಾ ಮಂಟಪವನ್ನು ಸಮೀಪಿಸುತ್ತಿರುವಾಗ, ಮೇಟಿ ದೀಪದವನನ್ನು ಹಾಗೂ ಗಾಳಿಮಾರಿ ಜೋಗತಿಯನ್ನು ಬೀಡಕೀ ಬೈಲಿಗೆ ಕರೆ ತರುತ್ತಾರೆ. ಗಾಳಿಮಾರಿ ಜೋಗತಿ ಹೊಸಸೀರೆಯನ್ನುಟ್ಟು ಘಟವನ್ನು ಹೊತ್ತು ಬರುತ್ತಾಳೆ. ಶ್ರೀದೇವಿಯ ರಥವು ಬೀಡಕೀಬೈಲ ಜಾತ್ರಾಗದ್ದಿಗೆಯನ್ನು ತಲುಪಿದಾಗ, ಶ್ರೀದೇವಿಯು ರಥದಿಂದ ಕೆಳಗಿಳಿಯುವ ಪೂರ್ವದಲ್ಲಿ ಶ್ರೀದೇವಿಗೆ ಮೇಟಿ ದೀಪವನ್ನು ತೋರಿಸಿ, ಆರತಿಯನ್ನು ಮಾಡಿ, ದೇವಿಯನ್ನು ರಥದಿಂದಿಳಿಸಿ, ಬೀಡಕೀ ಬಯ್ಲಿನ ಗದ್ದಿಗೆಯ ಮೇಲೆ ಪ್ರತಿಷ್ಠಾಪಿಸುತ್ತಾರೆ. ಮೇಟಿ ದೀಪವನ್ನು ಹಾಗೂ ಗಾಳಿಮಾರಿ ಜೋಗತಿ ತಂದ ಘಟವನ್ನು ಶ್ರೀದೇವಿಯ ಮುಂದೆ ಸುರಕ್ಷಿತವಾದ ಸ್ಥಳವೊಂದರಲ್ಲಿ ಇಡಲಾಗುತ್ತದೆ. ಅನಂತರದಲ್ಲಿ ಆಸಾದಿಯವರು ಶ್ರೀದೇವಿಯನ್ನು ಸ್ವಾಗತಿಸಿ, ತಮ್ಮ ಪರವಾದ ಲಗ್ನ ಶಾಸ್ತ್ರವನ್ನು ಮುಗಿಸುತ್ತಾರೆ.

**(ಎ.) ಬಲಿ :**

ಅಂದು ರಾತ್ರಿ ಪಟ್ಟದ ಕೋಣನ ಬಲಿಯಾಗುತ್ತದೆ. ಈಗ ಜಾತ್ರೆಯಲ್ಲಿ ಕೋಣನ ಬಲಿಯನ್ನು ನಿಷೇಧಿಸಿರುವುದರಿಂದ, ಕೋಣನ ಬಲಿಯ ಚಡಂಗ ಕೇವಲ ಸಾಂಕೇತಿಕವಾಗಿ ನಡೆಯುತ್ತದೆ. ಕೋಣನ ಬದಲಿಗೆ ಬೂದುಗುಂಬಳ ಕಾಯಿಯನ್ನು ಕಡಿದು, ಅದರಲ್ಲಿ ಕುಂಕುಮವನ್ನು ಬೆರೆಸಲಾಗುವುದು - ಅದೇ ಕೋಣನ ಬಲಿಯ ಸಂಕೇತ. ಹಿಂದಕ್ಕೆ ಕೋಣನ ಬಲಿಯ ಸನ್ನಿವೇಶ ಅತ್ಯಂತ





ಭಯಾನಕ ಹಾಗೂ ಭೀಭತ್ಸ ಜನಕವಾಗಿತ್ತು. ಶ್ರೀದೇವಿಯು ತನ್ನ ಮಾದಿಗ ಪತಿಯನ್ನು, ಆತನು ತನ್ನ ಪರಕಾಯ ಪ್ರವೇಶ ಶಕ್ತಿಯಿಂದ ಕೋಳಿ, ಕುರಿ, ಕೋಣಗಳನ್ನು ಪ್ರವೇಶಿಸಿದರೂ, ಅವನನ್ನು ಆ ಎಲ್ಲ ರೂಪಗಳಲ್ಲಿ ಸಂಹರಿಸಿದ್ದನ್ನು ಸೂಚಿಸುವ ಸಂಕೇತವೆನ್ನುವಂತೆ ಲೆಕ್ಕಕ್ಕೆ ಸಿಗದಷ್ಟು ಕೋಳಿ, ಕುರಿ ಹಾಗೂ ಕೋಣಗಳ ಬಲಿಯಾಗುತ್ತಿತ್ತಂತೆ. ಶ್ರೀ ಮಾರಿಕಾಂಬೆಯ ಜಾತ್ರಾರಂಭವಾಗುವ ಸುಮಾರು ಒಂದು ತಿಂಗಳ ಮೊದಲಿನಿಂದಲೇ ಶ್ರೀದೇವಿಯ ಹೆಸರಿನಲ್ಲಿ ಬಿಟ್ಟ ಪಟ್ಟದ ಕೋಣವನ್ನು ಕಟುಕರಿಗೆ ಒಪ್ಪಿಸಲಾಗುತ್ತಿತ್ತಂತೆ. ಅವರು ಮಾರಿ ಕೋಣನನ್ನು ಊರ ಮೇಲೆಲ್ಲಾ ಸುತ್ತಾಡಿಸಿ, ಶ್ರೀದೇವಿಯು ಗದ್ದಗೆಗೇರುವ ದಿನ ನೂರಾರು ಜನರೊಂದಿಗೆ ಓಡಿಸಿಕೊಂಡು ಬಂದು ಶ್ರೀದೇವಿಯ ಎದುರ ನಿಲ್ಲಿಸುತ್ತಿದ್ದರಂತೆ. ಅಂದು ಕೋಣನನ್ನು ಕೆಟ್ಟ ಕೆಟ್ಟ ನುಡಿಗಳಿಂದ ಬೈದು, ಹೀಗಳೆಯಲಾಗುತ್ತಿತ್ತಂತೆ. ಆ ಸಮಯದಲ್ಲಿ ರಾಣೆಗ್ಯಾನು ಬಂದು ಪಟ್ಟದಕೋಣನಿಗೆ ಶ್ರೀದೇವಿಯ ಭಂಡಾರವನ್ನು ಹಾಕಿ, ತನ್ನ "ರಾಣಿ ಗೋಲಿ" ನಿಂದ ಮೂರು ಬಾರಿ ಏಟು ಹಾಕುತ್ತಿದ್ದನಂತೆ. ನಾಗಾಕೃತಿಯ ರಾಣೆಗೋಲು ದೇವಿಯ ಸಂಕೇತವೇ ಆಗಿರುವುದರಿಂದ, ಅದರಿಂದ ಕೋಣನನ್ನು ಥಳಿಸುವುದು, ದೇವಿ ತನ್ನ ಪತಿ ಕೋಣವನ್ನು ಬಲಿತೆಗೆದುಕೊಂಡುದರ ಸಂಕೇತವೇ ಆಗಿದೆ. ರಾಣೆಗ್ಯಾನು ತನ್ನ ಆಚರಣಾ ವಿಧಿಯನ್ನು ಪೂರೈಸಿದ ನಂತರದಲ್ಲಿ ಪಾನೋನ್ಮತ್ತ ಕಟುಕನೊಬ್ಬನು ಬಂದು ಕೋಣನ ತಲೆಯನ್ನು ತನ್ನ ಹರಿತವಾದ ಕತ್ತಿಯಿಂದ ತುಂಡರಿಸುತ್ತಿದ್ದನಂತೆ. ಮುಂಡದಿಂದ ಬೇರ್ಪಟ್ಟ ರುಂಡವನ್ನು ಮಾತಂಗಿ ಚಪ್ಪರದಲ್ಲಿ ಇಡುತ್ತಿದ್ದರಂತೆ. ಆಮೇಲೆ ಜಾತ್ರೆಯ ಬೇರೆ ಬೇರೆ ದಿನಗಳಲ್ಲಿ ಕೋಳಿ ಕುರಿಗಳ ಬಲಿಯಾಗುತ್ತಿತಂತೆ.

ಈ ಸಂದರ್ಭದಲ್ಲಿ ಕೋಣನ ಬಲಿಯ ರಹಸ್ಯಾರ್ಥವನ್ನು ಕುರಿತು ಆಂಧ್ರದಲ್ಲಿ ಪ್ರಚಲಿತವಿರುವ ಆಚರಣೆಯ ಹಿನ್ನೆಲೆಯಲ್ಲಿ ಶ್ರೀ ಎಸ್.ಎಸ್. ಹಿರೇಮಠರು ಹೇಳಿದ ಮಾತು, ಶಿರಸಿಯ ಮಾರಿಕೋಣನ ಬಲಿಗೂ ಅನ್ವಯಿಸುತ್ತದೆ : ಆಂಧ್ರದ ಹಳ್ಳಿಗಳ ಮುಖ್ಯದೇವತೆ ಹೊಲಗಳ ತಾಯಿ ಪೊಲೆರಮ್ಮ. ಈಕೆಯ ಗಂಡ ಕೋಣ. ಜಾತ್ರೆಯಲ್ಲಿ ಹೋತದ ಬಲಿ, ಚರಗ, ಬೆಂಕಿ ತುಳಿಯುವುದು ಸಿಡಿ ಆಡುವುದು ಎಲ್ಲ ಇದೆ. ಹೊಲೆಯ ಹೊಲದ ಜೊತೆ ಸಂಬಂಧವಿದ್ದಂತಿದೆ. ಹೊಲಗಳ ಮೊದಲ ಒಡೆಯರಾದ ಹೊಲೆಯರ ದೇವತೆ, ಪೊಲೆರಮ್ಮ. ಇವರು ಕೋಣಗಳಿಂದ ಉಳುತ್ತಿದ್ದರು. ಫಲಕೊಡುವುದಕ್ಕೆ ಅನೇಕ ವಿಧದಿಂದ ಕಾರಣವಾಗುವ ಕೋಣವನ್ನು ಆಕೆಯ ಗಂಡ ಎಂದಿರುವುದೂ ಸಹಜ. ಭೂಮಿಯ ಫಲವಂತಿಕೆ ಗಂಡಿನ

ಬಲಿಯನ್ನು ಅವಲಂಬಿಸಿದ್ದರಿಂದ ಕೋಣದ ಬಲಿ ಮಾನವ ಬಲಿಯ ಸ್ಥಾನದಲ್ಲಿ ಪ್ರಚಾರವಾಯಿತು.[6] ಇದೇ ಹಿನ್ನೆಲೆಯಲ್ಲಿ ಶಿರಸಿಯ ಮಾರಿಕಾಂಬೆಯೇ ಜಾತ್ರೆಯ ಕೋಣದ ಬಲಿಯು ಭೂಮಿಯ ಫಲವಂತಿಕೆಗಾಗಿಯೇ ಇದ್ದಿರ ಬಹುದಾಗಿದೆ. ಜಾತ್ರೆಯ ಇನ್ನೂ ಕೆಲವು ಚಡಂಗಗಳು ಇದನ್ನು ಸಮರ್ಥಿಸುತ್ತಿವೆ. ಆದಿವಾಸಿಗಳಲ್ಲಿ ಸ್ತ್ರೀಶಕ್ತಿಯ ಹೆಚ್ಚಳಕ್ಕಾಗಿ, ಫಲವಂತಿಕೆಗಾಗಿ, ಪುರುಷ ಶಕ್ತಿಯ ಬಲಿ ಅಗತ್ಯವೆಂಬ ನಂಬಿಕೆಯಿದ್ದುದನ್ನೂ ಈ ಸಂದರ್ಭದಲ್ಲಿ ನೆನೆಯಬಹುದು.

ಹಿಂದಕ್ಕೆ ಮಾರಿಜಾತ್ರೆಯಲ್ಲಿ ನಡೆಯುವ ಮಾರಿ ಕೋಣನ ಬಲಿಯನ್ನು ವಿವಿಧ ಸ್ತರಗಳ ಜಾನಪದರು ತಮ್ಮದೇ ಆದ ನೆಲೆಯಲ್ಲಿ ವರ್ಣಿಸಿದ್ದಾರೆ. ಕೋಣನ ಬಲಿಯ ಭೀಕರತೆಯನ್ನು ತನ್ಮೂಲಕ ಭೂದೇವಿಗೆ ಬಂದ ವೈಧವ್ಯವನ್ನು ಮನೋವೇದಕವಾಗಿ ಚಿತ್ರಿಸಿದ್ದಾರೆ :

ರತವಾ ಹತ್ತೇಲೇ ಅಮ್ಮ ಮಾರಿಬ್ಯೆಣಕೆ ಬರುವಾಳೊ
ಮಾರಿ ಬ್ಯೆಣಕೆ ಬಂದೇಲೆ ಅಮ್ಮ ಗದ್ದಗಿ ಕುಳುವಾಳೊ
ಗದ್ದಗಿ ಕುಳಿತೇಲೋ ಅಮ್ಮಗೆ ಮೂರೇ ಬಂಡಿಯೋ
ಹಿಂದಿನ ಬಂಡೀಗೆ ಅಮ್ಮಗೆ ಕೋಳಿ ಕೊಯ್ವಾರೊ
ನೆಡಗನ ೧ ಬಂಡೀಗೇ ಅಮ್ಮಗೆ ಕುರಿಯಾ ಹೊಡೆವಾರೊ
ಮುಂದನ ಬಂಡೀಗೇ ಅಮ್ಮಗೆ ಕೋಣನ ಕಡಿವಾರೊ
ಕೋಣನ ಕಡಿವಾಗೇ ಅಮ್ಮನ ಮೊಕವೇ ಬಾಡಿದವೊ
ಮೊಕವೇ ಬಾಡಿದವೊ ಅಮ್ಮನ ಮೂಗುತಿ ಶೆಡಿದಾವೊ ೨

ಶ್ರೀ ದೇವಿಯೆದುರು ಕೋಣನನ್ನು ಕಡಿಯುವಾಗ ಅವಳ ಮೂಗುತಿ ಸಿಡಿದು ಅವಳಿಗೆ ವೈಧವ್ಯ ಪ್ರಾಪ್ತಿಯಾಗುವುದನ್ನು ಹಾಡಿನಲ್ಲಿ ಕವಿ ಕಂಡರಿಸಿದ್ದಾನೆ. ಶ್ರೀದೇವಿಯ ಜಾತ್ರೆಯ ಕೊನೆಯದಿನ ಗಾಳಿ ಮಾರಿಯು ಶ್ರೀದೇವಿಗೆ ವೈಧವ್ಯ ಪ್ರಾಪ್ತಿಯ ಚಿನ್ನಕೊಡುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಬಟ್ಟಂ ಬಯ್ಲಗೆ ಪಟಾದ ೩ ಕೋಣನ
ಅಟಿ ಅಟಿ ೪ ಕಡಿಯೋ ಚಮತ್ಕಾರ
ಕರುಣ ಇಲ್ಲದ ಮಂದಿ ಕಯ್ಕಲ ಬಿಗದಾರೆ
ನೆಲಕ ಬಿದ್ದು ಹಾಕಿತು ಉಸುರ.೫

6. ಎಸ್.ಎಸ್. ಹಿರೇಮಠ : ಜಾತ್ರೆಗಳು, ಪು ೬೩.





ಗಂಡಗತ್ತಿಲೇ ತುಂಡಗಡಿದರ
ಹರಹರ ಅಂತ ಬಿಟ್ಟಿತು ಪ್ರಾಣ
ಹೆಣ್ಣು ಗಂಡು ಜನ ಪರಸಿ ಮೊದಲ್ಕರ ೬
ಉದುರಿಸಿ ಬಿಟ್ಟಿತು ಕಣ್ಣೀರ
ಕೋಣನ ಹೆಣಬಿತ್ತು ತುಂಡಾಗಿ
ಪ್ರಾಣ ಹೋಯಿತು ಯಮನಕ ೭ ಮುಟ್ಟಿ
ಬಲದವರು ತೆಗಿರಿ ನಿಮ್ ನೋಡಿ
ತಪದಂಗ ೮ ಅಮ್ನ ಹರಕಿ
ಕೋಣ ಕುರಿ ಕೋಳಿ ಕಡದು ನೋಡಿ
ಹೊಟ್ಟೆ ಹರಿಸ್ಯಾರೊ ನೆತ್ತಾರ
ಬಿಚ್ಚುಗತ್ತಿಲೇ ಬಲಿಯು ಹೊಂಟಿತು ೧೦
ಕೊಲಿಕಿಂತು ಸೆಡಗರದಲ್ಲಿ.

ಕೋಣನ ಹತ್ಯೆಯ ವರ್ಣನೆಯಲ್ಲಿ ಕೋಣನ ಬಲಿಯ ವಿಷಯದಲ್ಲಿ ಜಾನಪದರ ಸಹಾನುಭೂತಿಯ ಧ್ವನಿಯು ಅನುರಾಗಿಸಿದ್ದನ್ನು ಮೇಲಿನ ಹಾಡಿನಲ್ಲಿ ನಿಚ್ಚಳವಾಗಿ ಗುರುತಿಸಬಹುದು. ಈ ಬಲಿಯ ಕತೆಯ ಹಿಂದೆ ಯಾವುದೋ ದುರಂತ ನೋವಿನ ಛಾಯೆ ಅಡಗಿರುವುದು ಗಮನಾರ್ಹ.

ಬಲಿ ಕೊಲೆಯ ಇನ್ನೊಂದು ರೂಪ ಅಷ್ಟೆ. ಇಂಥ ಬಲಿಯ ವಿಷಯದಲ್ಲಿ ಹೃದಯವಂತರ ಕರುಣೆ ಮೂಡುವುದು ಸಹಜವೇ ಆಗಿದೆ.

ಶಿರಸಿಯ ಮಾರಿ ಜಾತ್ರೆಯಲ್ಲಿ ನಡೆಯುವ ಪ್ರಾಣಿಗಳ ಮಾರಣ ಹತ್ಯೆಯ ಭೀಕರ ನೋಟವು ಅನೇಕರ ಹೃದಯವನ್ನು ಕಲುಕಿ, ಮಹಾತ್ಮಾ ಗಾಂಧೀಜಿಯವರು ಶಿರಸಿಗೆ ಬಂದಾಗ, ಈ ವಿಷಯವನ್ನು ಅವರ ಮುಂದೆ ಪ್ರಸ್ತಾಪಿಸಿದರು. ಆಗ ಮಹಾತ್ಮಾಗಾಂಧೀಜಿಯವರು ಬೋಧಿಸಿದ ಅಹಿಂಸಾ ತತ್ವದ ಮೋಡಿಗೆ ಆಕರ್ಷಿತರಾದ ಶಿರಸಿಯ ಜನ ಶ್ರೀ ಮಾರಿಕಾಂಬೆಯ ಹೆಸರಿನಲ್ಲಿ ಆಗುವ ಪ್ರಾಣಿಬಲಿಯನ್ನು ತ್ಯಜಿಸಲು ತೀರ್ಮಾನಿಸಿ, ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದರು. ಆರಂಭಿಕ ಹಂತದಲ್ಲಿ ಕೆಲವರಿಂದ ಅಲ್ಪ ಸ್ವಲ್ಪ ಪ್ರತಿರೋಧಗಳು ಬಂದರೂ ಸಹ, ಶಿರಸಿಯ ದಯಾಪರಜನ ಒಟ್ಟಾಗಿ ಅವನ್ನೆದುರಿಸಿ, ಮಾರಿಕಾಂಬೆಯ ಹೆಸರಿನಲ್ಲಿ ನಡೆಯುವ

೧. ನಡುವಿನ ೨. ಸಿಡಿಯಿತು, ಹಾರಿತು ೩. ಪಟ್ಟದ ೪ ಅಟ್ಟಿ ಅಟ್ಟಿ ೫. ಪ್ರಾಣ ಬಿಟ್ಟಿತು ೬. ಮೊದಲಾಗಿ ೭. ಯಮನ ವರೆಗೆ ೮. ತಪ್ಪದ ಹಾಗೆ ೯. ಅಮ್ಮನ ಹರಕೆ ೧೦. ಹೊರಟಿತು.

ಸಾವಿರಾರು ಪ್ರಾಣಿಗಳ ಹತ್ಯೆಯನ್ನು ಸಂಪೂರ್ಣವಾಗಿ ನಿಲ್ಲಿಸುವಲ್ಲಿ ಸಫಲರಾಗಿ ಇಡೀ ನಾಡಿಗೇ ಸುಮಾರ್ಗವನ್ನು ತೋರಿಸಿಕೊಟ್ಟ ಅಗ್ಗಳಿಕೆಗೆ ಪಾತ್ರರಾದರು.

ಜಾತ್ರೆಯಲ್ಲಿಯ ಲಕ್ಷಾಂತರ ಪ್ರಾಣಿ ಬಲಿಗೆ ಹಿನ್ನೆಲೆಯೇನಿರಬಹುದು? ಹಿಂದಕ್ಕೆ ನಾಡಿನ ಬೇರೆ ಬೇರೆ ಭಾಗಗಳನ್ನು ಸ್ವತಂತ್ರರಾಗಿಯೋ ಇನ್ನೊಬ್ಬರ ಅಧೀನರಾಗಿಯೋ ಆಳುತ್ತಿದ್ದ ತುಂಡರಸರು, ಪರಸ್ಪರರು ಕಾಲು ಕೆದರಿ ಜಗಳಕಾದು, ಯುದ್ಧಮಾಡಿ ಯುದ್ಧರಂಗದಲ್ಲಿ ಸಾವಿರಾರು ಜನರ ಕೊಲೆಗೈದು, ಒಬ್ಬರ ಮೇಲೆ ಇನ್ನೊಬ್ಬರು ವಿಜಯವನ್ನು ಸಾಧಿಸಿ, ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವ ಕಾಲವೊಂದಿತ್ತು. ಯುದ್ಧ ಆಕ್ರಮಣಗಳು ನಡೆಯುವ ಸಂದರ್ಭಗಳಲ್ಲಿ ಪ್ರಜಾಪರಿವಾರದವರು, ಸೈನಕರು, ಯುದ್ಧರಂಗದಲ್ಲಿ ಹರಿಯುವ ರಕ್ತ ಪ್ರವಾಹವನ್ನು ಕಂಡು, ಹೆದರಿ ಹೌಹಾರದಂತೆ, ಕೊಲೆಗೆ ಹೇಸದಂತೆ, ಹಿಂಸಾರಭಸಮತಿಗಳಾಗುವಂತೆ ಪ್ರಚೋದನೆಯನ್ನು ನೀಡುವ ಹೇತುವಿನಿಂದ ಸಾವಿರಾರು ಪ್ರಾಣಿಗಳ ವಧೆಯನ್ನು ಮಾಡಿ, ರಕ್ತದ ಕೋಡಿಯನ್ನು ಕೊರೆದು ಹಿಂಸೆಗೆ ಮಾನವನ ಮನವನ್ನು, ಅಣಿಗೊಳಿಸುತ್ತಿದ್ದಂತಿದೆ. ಪ್ರಾಣಿಗಳ ರಕ್ತ ಬಲಿಯಿಂದಉತ್ತೇಜಿತನಾದ ಮನುಷ್ಯ, ಮುಂದಿನ ಹಂತದಲ್ಲಿ ಮಾನವ ಸಂಹಾರಕ್ಕೆ ಹೇಸದಂತೆ,ಭಯ ಪಡದಂತೆ ಸನ್ನದ್ಧಗೊಳಿಸುವ ಹುನ್ನಾರು ಇಲ್ಲಿ ಅಡಕವಾದಂತಿದೆ. ಶ್ರೀ ಮಾರಿಕಾಂಬೆಯನ್ನು 'ದಂಡಿನ ಮಾರಿ' 'ದಂಡಿನ ದುರ್ಗಿ' ಮುಂತಾದ ಹೆಸರುಗಳಿಂದ ಕರೆಯುವುದನ್ನೂ ಈ ಸಂದರ್ಭದಲ್ಲಿ ನೆನೆಯಬಹುದು.

ಶ್ರೀ ಮಾರಿಕಾಂಬೆ ಪಿಡುಗನ್ನು ಹರಡುವ ಹಾಗೂ ನಿಯಂತ್ರಿಸುವ ದೇವತೆಯೆಂಬ ನಂಬಿಕೆಯಿದೆ. ಈ ದೇವತೆಗೆ ಪ್ರಾಣಿ ಬಲಿಯನ್ನು ನೀಡುವುದರಿಂದಾಗಿ ಪ್ರಾಣಿರಕ್ತದಿಂದ ಸುಪ್ರೀತಳಾದ ದೇವತೆ, ರೋಗ ರುಜಿನ, ಯುದ್ಧ ವಿಪ್ಲವಗಳ ಮೂಲಕ ಮಾನವ ಸಂಹಾರಕ್ಕೆ ಕೈಹಾಕದೆ, ಅವನ ಸುಖ ಸಮೃದ್ಧಿಗಾಗಿ ಮಳೆ ಬೆಳೆಗಳನ್ನು ವಿಪುಲವಾಗಿ ನೀಡಿ, ಕ್ಷಾಮ-ಡಾಮರಗಳಿಂದ ಅವನನ್ನು ರಕ್ಷಿಸುತ್ತಾಳೆ, ಅವನ ದನಕರುಗಳ ಕ್ಷೇಮಾಭಿವೃದ್ಧಿಯನ್ನು ಮಾಡುತ್ತಾಳೆ ಎಂಬ ನಂಬಿಕೆಯಿದೆ. ತನಗೆ ಬಂದೊದಗಬಹುದಾದ ಸಾವಿನ ಕೇಡಿಗೆ ಬದಲಿ ವ್ಯವಸ್ಥೆಯಾಗಿ, ಪ್ರಾಣಿ ಬಲಿಯನ್ನು ನೀಡಿದರೆ, ಬಲಿ ಕೊಟ್ಟ ಪ್ರಾಣಿಯ ಚೇತನವು ಬಲಿಕೊಟ್ಟವರಲ್ಲಿ ನೆಲೆಸಿ, ಅವರ ಶಕ್ತಿವೃದ್ಧಿಯಾಗುವುದು ಎಂಬ ಆದಿವಾಸಿ ನಂಬಿಕೆಯ ಹಿನ್ನೆಲೆಯೂ ಈ ಆಚರಣೆಯಲ್ಲಿ ಅಡಕವಾದಂತಿದೆ.

ಆದಿಮ ಕೃಷಿಕರು ಧಾನ್ಯವನ್ನು ಒಕ್ಕುವ ಮೊದಲು ಧಾನ್ಯ ಸಮೃದ್ಧಿಗಾಗಿ ನರಬಲಿ ಅಥವಾ ಪ್ರಾಣಿಬಲಿ ಅನಿವಾರ್ಯವೆಂದು ತಿಳಿದಿದ್ದರು. ತಾಯಿಯ ಹೊಟ್ಟೆಯಿಂದ ಮಗು ಹುಟ್ಟುವಂತೆ ಭೂಮಿತಾಯಿಯ ಹೊಟ್ಟೆಯಿಂದ





ಧಾನ್ಯಗಳು ಹುಟ್ಟಿಬರುವವು ಎಂಬುದು ಅವರ ನಂಬಿಕೆಯಾಗಿತ್ತು. ಭೂಮಿತಾಯಿಯ ಫಲವು ತಮಗೆ ದಕ್ಕಬೇಕಾದರೆ ಬಲಿಯೂ ಅಗತ್ಯವೆಂದು ಅವರು ಭಾವಿಸಿದ್ದರು. ಹೀಗೆ ಭೂಮಿಯ ಫಲವಂತಿಕೆಗಾಗಿ ಬಲಿ ಸಮರ್ಪಣೆಯನ್ನು ಮಾಡುವುದು ಮುಂದೆ ಒಂದು ಸಂಪ್ರದಾಯವಾಗಿ ನಡೆದುಕೊಂಡು ಬಂದಂತಿದೆ.

**(ಎ) ಗಡಿಯ ಬಲಿ :**

ಪಟ್ಟದ ಕೋಣನ ಸಾಂಕೇತಿಕ ಬಲಿಯಾದ ನಂತರ ಕುಂಬಾರ (ಚಕ್ರಶಾಲಿ) ಮನೆತನದವರು ಚರು ಬೇಯಿಸುತ್ತಾರೆ. ಚರುವಿನ ಅನ್ನಕ್ಕೆ ಮೇತ್ರಿಗಳು ಕುಂಕುಮವನ್ನು ಬೆರಸಿ, ಬಲಿಗಳನ್ನು ತಯಾರಿಸುತ್ತಾರೆ. ಹಿಂದೆ ಕುಂಕುಮದ ಬದಲು ಜಾತ್ರೆಯಲ್ಲಿ ಬಲಿಕೊಟ್ಟ ಕೋಣನ ರಕ್ತವನ್ನೇ ಬೆರಸುತ್ತಿದ್ದರಂತೆ. ಆರಕ್ತವಾಗಿ ಭೀತಿಯನ್ನು ಹುಟ್ಟಿಸುವ ಬಲಿಯ ಅನ್ನದ ಹುಲುಸಿನ ಬುಟ್ಟಿಯನ್ನು ಮೇತ್ರಿ, ಮಚಗಾರ, ಚಮಗಾರ, ಚಲವಾದಿ, ಮುಂತಾದ ದಲಿತ ಜಾತಿಗೆ ಸೇರಿದ ಇಪ್ಪತ್ತೈದು ಮೂವತ್ತು ಜನಗಂಡಸರು, "ಹೋಯಿ ಹೋಯಿ" ಎಂದು ಕೂಗುತ್ತ, ಮೆರವಣಿಗೆಯಲ್ಲಿ ಹೊರಟು, ಊರಿನ ಗಡಿಗಡಿಗಳಲ್ಲಿ, ಊದು ಬತ್ತಿ, ಕರ್ಪೂರಗಳನ್ನು ಹಚ್ಚಿ ಈ ಸಾತ್ವಿಕ (ಹಿಂದೆ ತಾಮಸ) ಬಲಿಗಳನ್ನು ಬೀರುತ್ತ ಹೋಗುತ್ತಾರೆ. ಗಡಿ ಬಲಿಯ ಸಮರ್ಪಣೆಯ ಸಂದರ್ಭದಲ್ಲಿ ಇಂಥ ಕುಟುಂಬದ ಜನರು, ಇಂಥ ಗಡಿಗೇ ಬಲಿಗಳು ನೀಡಬೇಕೆಂಬ ವಿಧಿಯಿದೆ. ಚಂಪಾ ಷಷ್ಠಿಯ ಕಲ್ಲು, ಭೂತದ ಕಲ್ಲು,ಜಟ್ಟಿಗನ ಕಲ್ಲು, ವ್ಯಾಸನ ತೋಳು ಹೀಗೆ ಸುಮಾರು ತೊಂಬತ್ತೊಂದು ಗಡಿ ಕಲ್ಲುಗಳಿದ್ದುವೆಂದು ಹೇಳಲಾಗುತ್ತದೆ. ಈ ಗಡಿ ಕಲ್ಲುಗಳು ವೀರರ, ಮಹಾಸತಿಯರ, ಜಟ್ಟಿಗರ ಇಲ್ಲವೆ ಊರಿನ ಗಡಿಯನ್ನು ನಿರ್ದೇಶಿಸುವ ಕಲ್ಲುಗಳಾಗಿವೆ. ಶ್ರೀ ಮಾರಿಕಾಂಬೆಯ ಗಡಿಬಲಿಯ ಚಡಂಗವನ್ನು ಗ್ರಾಮ ದೇವತೆಯಾದ ಅಮ್ಮನಿಗೆ ಬಂಡಿಯ ಹಬ್ಬದಲ್ಲಿ ಬಲಿ ಮಕ್ಕಳು ಗಡಿ ಬಲಿಯನ್ನು ಸಮರ್ಪಿಸುವ ಚಡಂಗದೊಡನೆ ಹೋಲಿಸಬಹುದು.

ಗಡಿಬಲಿಯ ಸಮರ್ಪಣೆಗೆ ಹೋದವರು ಹಿಂತಿರುಗಿ ಬಂದ ಮೇಲೆಯೇ ಶ್ರೀದೇವಿಗೆ ಮಂಗಳಾರತಿಯನ್ನು ಮಾಡಿ, ಬಲಿಸಮರ್ಪಣೆಯನ್ನು ಮಾಡಿ, ಬಂದವರಿಗೆ ಹಣ್ಣು ಕಾಯಿ, ಪ್ರಸಾದವನ್ನು ಕೊಟ್ಟು ಕಳಿಸುತ್ತಾರೆ. ಗಡಿ ಬಲಿಯ ನಂತರ, ಉಳಿದ ಬಲಿಯ ಅನ್ನವನ್ನು ತಂದು ಬಲಿಕೋಣನ ತಲೆಯ ಹತ್ತಿರವಿಟ್ಟು, ಬುಟ್ಟಿಯನ್ನು ಕವಚಿಡುತ್ತಾರೆ. ಇವೆಲ್ಲ ಕಾರ್ಯಕ್ರಮಗಳು ಮುಗಿಯಲು ಬೆಳಗುಜಾವ ಸುಮಾರು ಮೂರು ನಾಲ್ಕು ಗಂಟೆಗಳಾಗುತ್ತವೆ.

ಗಡಿಬಲಿಯ ಸಮರ್ಪಣೆಯ ಅನ್ನವನ್ನು ತಯಾರಿಸುವವರು ಅಹಿಂಸಾವಾದಿಗಳಾದ ಲಿಂಗಾಯತ ಕುಂಬಾರರು. ಅನ್ನದಲ್ಲಿ ರಕ್ತವನ್ನು ಬೆರಸುವವರು ಹಿಂಸಾರಭಸಮತಿಗಳಾದ ಮೇತ್ರಿಗಳು. ಸಾತ್ವಿಕ ಹಾಗೂ ತಾಮಸಗಳ ಸಂಯೋಜನೆಯಿಂದಲೇ ಮಾನವನ ಬದುಕು ಹದಗೊಂಡು ದೃಢವಾಗುವುದನ್ನು ಸಂಕೇತಿಸಲಿಕ್ಕಾಗಿ ಈ ಬಗೆಯ ಬಲಿಯಾಚರಣೆಯ ವಿಧಿ ಬೆಳೆದು ಬಂದಿರಬೇಕು. ಶ್ರೀ ಮಾರಿಕಾಂಬೆಯ ಕತೆ ಹಾಗೂ ಮಾರಿಜಾತ್ರೆಯ ಪ್ರಮುಖ ಆಶಯವೂ ಸಹ ಸಾತ್ವಿಕ ಮತ್ತು ತಾಮಸಗಳ ಸರಿಬೆರಕೆಯ ಹಿನ್ನೆಲೆಯಲ್ಲಿಯೇ ರಚಿತವಾದುದನ್ನು ನೋಡಿದರೆ ಈ ಬಗೆಯ ಸಂಕರ ಬದುಕಿನ ಗಟ್ಟಿತನಕ್ಕೆ ಪರಿಪಾಕಕ್ಕೆ, ಪ್ರಕೃತಿಯ ಬೆಳವಣಿಗೆ ಹಾಗೂ ನೆರತೆಗೆ ಅವಶ್ಯವೆಂದು ತೋರುತ್ತದೆ.

**(ಐ) ಸೇವಾಕಾರ್ಯಕ್ರಮಗಳು :**

ಭಕ್ತರಿಗೆ ಸಂಕಷ್ಟಗಳು ಬಂದಾಗ ಶ್ರೀದೇವಿಗೆ ಹಲವು ಬಗೆಯ ಹರಕೆಗಳನ್ನು ಹೊರುತ್ತಾರೆ. ಶ್ರೀದೇವಿಗೆ ಹಣ್ಣುಕಾಯಿಗಳನ್ನು ಸಲ್ಲಿಸುವುದು, ಕುಂಕುಮಾರ್ಚನೆಯನ್ನು ಮಾಡಿಸುವುದು, ಉಡಿತುಂಬಿಸುವುದು, ಉರುಳು ಸೇವೆಯನ್ನು ಮಾಡುವುದು, ತುಲಾಭಾರವನ್ನು ಕೊಡುವುದು ಮರ್ಕಿ ದುರ್ಗಿಯರಿಗೆ ಬೇವಿನುಡಿಗೆಯ ಸೇವೆಯನ್ನು ನೀಡುವುದು, ಹಾರುಗೋಳಿಯ ಹರಕೆಯನ್ನೊಪ್ಪಿಸುವುದು[7] ಹೀಗೆ ಹಲವಾರು ಬಗೆಯ ಸೇವಾಕಾರ್ಯಗಳು ಗುರುವಾರ ಮುಂಜಾನೆಯಿಂದ ಮಂಗಳವಾರ ರಾತ್ರಿಯವರೆಗೆ ನಡೆಯುತ್ತವೆ. ಉರುಳು ಸೇವೆ, ಬೇವಿನುಡಿಗೆಯ ಸೇವೆ ಹಾರುಗೋಳಿಯನ್ನು ಸಮರ್ಪಿಸುವುದು ಈ ಸೇವೆಗಳು ಕೇವಲ ಜಾತ್ರೆಯ ಸಮಯದಲ್ಲಿಯೇ ನಡೆದರೆ ಉಳಿದ ಸೇವೆಗಳು ಬೇರೆ ಸಂದರ್ಭಗಳಲ್ಲಿಯೂ ನಡೆಯುತ್ತವೆ. ಮಂಗಳವಾರ ರಾತ್ರಿ ದೇವತೆಗೆ ಬಂದಂತಹ ಕಾಣಿಕೆಗಳನ್ನು ವಾದ್ಯ ಘೋಷದೊಂದಿಗೆ, ಪೋಲಿಸರ ರಕ್ಷಣೆಯಲ್ಲಿ ದೇವಸ್ಥಾನಕ್ಕೊಯ್ದು, ಅಲ್ಲಿ ಲಕ್ಷ್ಮೀ ಪೂಜೆಯನ್ನು ಮಾಡುತ್ತಾರೆ.

**(ಒ.) ವಿಸರ್ಜನೆ :**

ಬುಧವಾರ ದಿನ ಬೆಳಿಗ್ಗೆ ಜಾತ್ರಾ ವಿಸರ್ಜನೆಯ ಕಾರ್ಯಾರಂಭವಾಗುತ್ತದೆ. ಅಂದು ಕೆಲವು ವಿಶಿಷ್ಟ ಆಚರಣಾ ವಿಧಿಗಳು ನಡೆಯುತ್ತವೆ. ಅಂದು ಬೆಳಿಗ್ಗೆ

7. ಮಾರಿಕಾಂಬೆಯ ಭಕ್ತರಿಗೆ ಸಂಕಷ್ಟಗಳು ಬಂದೊದಗಿದಾಗ ಹಾರುಗೋಳಿಯ ಹರಕೆಯನ್ನೊಪ್ಪಿಸುವ ಸಂಪ್ರದಾಯವಿದೆ. ಜಾತ್ರೆಯ ಸಮಯಕ್ಕೆ ದೇವಿಗೆ ಹರಕೆಯನ್ನು ಹೆತ್ತವರು ಕೋಳಿಯನ್ನು ಶ್ರೀಮಾರಿಕಾಂಬೆಯ ಮುಂದೆ ಹಾರಬಿಟ್ಟು, ಅನಂತರ ಆ ಕೋಳಿಯನ್ನು ದೇವಿಯ ಹೆಸರಿನಲ್ಲಿ ಆಸಾದಿಯರಿಗೆ ನೀಡಿ ಅವರಿಂದ ಶ್ರೀ ಮಾರಿಕಾಂಬೆಯ ಪ್ರಸಾದವನ್ನು ಪಡೆಯುತ್ತಾರೆ.





ಜೋಗತಿಯರು, ಹರಿವಾಣದಲ್ಲಿ ಅರಿಸಿನ ಹಿಟ್ಟನ್ನಿಟ್ಟುಕೊಂಡು, ಕೃಷಿಕ ಕೆಲಸಗಾರರ ಹಾಗೂ ಇತರ ಭಕ್ತಾದಿಗಳ ಹಣೆಗೆ ಅರಿಸಿನ ಬಟ್ಟನ್ನಿಡುತ್ತಾರೆ. ಭಕ್ತರು ಶ್ರೀ ಮಾರಿಕಾಂಬೆಗೆ ಸಮರ್ಪಿಸುವ ಸೇವಾಕಾರ್ಯಗಳನ್ನೆಲ್ಲ ಮಧ್ಯಾಹ್ನದ ಒಳಗಡೆಯಲ್ಲಿ ಮುಗಿಸಿ, ಶ್ರೀದೇವಿಯ ಜಾತ್ರಾ ಮಂಟಪವನ್ನು ಕಳಚುವ ಪೂರ್ವದಲ್ಲಿ ಅರ್ಚಕರು, ಬಡಿಗರು, ಮುಂತಾದ ಏಳು ಬಾಬ್‌ದಾರ ಕುಟುಂಬಗಳಿಗೆ ಗೌರವ ಸಮರ್ಪಣೆಯಾಗಿ 'ಉಡಿ' ಕೊಟ್ಟ ನಂತರ, ಮಂಟಪವನ್ನು ಕಳಚುವ ಕಾರ್ಯ ನಡೆಯುತ್ತದೆ. ಆಗ ಶ್ರೀದೇವಿಗೆ ಮಹಾ ಮಂಗಳಾರತಿಯನ್ನು ಮಾಡಿ, ವಾದ್ಯ ಘೋಷದೊಂದಿಗೆ ಗಾಳಿಮಾರಿ ಜೋಗತಿಯೆಡೆಗೆ ಹೋಗಿ, ಅವಳಿಗೆ ಉಡುಗೊರೆಯಿತ್ತು, ಜಾತ್ರೆಯ ವಿಸರ್ಜನೆಗಾಗಿ ಆಮಂತ್ರಿಸುತ್ತಾರೆ. ಅವರು ನೀಡಿದ ಉಡುಗೊರೆ ಹೊಸ ಸೀರೆಯನ್ನುಟ್ಟು, ಮೊಸರು ತುಂಬಿದ ದೊಡ್ಡ ಗಡಿಗೆಯಲ್ಲಿ ಸಣ್ಣ ಸಣ್ಣ ಗಡಿಗೆಗಳನ್ನು, ಒಂದರಲ್ಲೊಂದರಂತೆ ಅಯ್ದು ಗಡಿಗೆಗಳನ್ನಿಟ್ಟು, ಅವನ್ನು ಹೊತ್ತುಕೊಂಡು ಬರುವ ಜೋಗತಿಗೆ ಮೈಮೇಲೆ ಪ್ರಜ್ಞೆಯೇ ಇರುವುದಿಲ್ಲ. ಆವೇಶದಲ್ಲಿರುವ ಅವಳ ತಲೆಯ ಮೇಲಿರುವ ಗಡಿಗೆಗಳನ್ನು ಎತ್ತಿಕೊಂಡು, ಶ್ರೀದೇವಿಯ ಗದ್ದಿಗೆಯ ಕಂಬಕ್ಕೆ ಕಟ್ಟುತ್ತಾರೆ. ಅನಂತರ ಶ್ರೀ ದೇವಿಯು ಗದ್ದಿಗೆಯಿಂದಿಳಿದು ಬಂದು, ಆಸಾದಿಯವರು ಅಕ್ಕಿ ಅರಿಸಿನ, ಕುಂಕುಮ ಬಿಳಿ ಹಾಗೂ ಕರಿ ಬಣ್ಣದ ಹಿಟ್ಟುಗಳಿಂದ ರಚಿಸಿದ ರಂಗೋಲಿಯ ರಂಗದಲ್ಲಿ ಕೂಡ್ರುತ್ತಾಳೆ. ಆಗ ಆಸಾದಿ "ರಾಣಿಗೋಲು" ಹಿಡಿದು ಶ್ರೀದೇವಿಗೆ ಮಳೆ ಬೆಳೆ ಸಮೃದ್ಧಿಗಾಗಿ ಹೇಳಿಕೆಯನ್ನು ಮಾಡಿಕೊಂಡು, ಅಲ್ಲಿ ನೆರೆದ ಬಾಬ್‌ದಾರರಿಗೆ ರೈತರಿಗೆ ಹುಲುಸನ್ನು ಹಂಚುತ್ತಾರೆ.

**(ಓ) ಹುಲುಸು :**

ಗಡಿ ಬಲಯಂದು ಒಂದೆಡೆ ಬುಟ್ಟಿಯಲ್ಲಿ ಕವಚಿಟ್ಟಿರುವ ಬಲಿಯ ಅನ್ನಕ್ಕೆ ಗೋದಿಯ ಹಿಟ್ಟು, ಬೇಯಿಸಿದ ಅಕ್ಕಿಯ ಗಂಜಿ, ಕುಂಕುಮ ಹಾಗೂ ಇನ್ನು ಏನೇನೋ ಪ್ರಾಣಿಜನ್ಯ ವಸ್ತುವನ್ನೆಲ್ಲ ಒಂದೆಡೆಗೆ ಸೇರಿಸಿ 'ಹುಲುಸ'ನ್ನು ತಯಾರಿಸಿ, ಅದರಿಂದ ಸಣ್ಣ ಸಣ್ಣ ಮುದ್ದೆಗಳನ್ನು ಮಾಡುತ್ತಾರೆ. ರೈತರು ಅರಿಸಿನ ಬಣ್ಣದ ಒದ್ದೆ ವಸ್ತ್ರದೊಡನೆ ಉದ್ದ ಕೋಲನ್ನು ಬಡಿಯುತ್ತ ಹುಲುಸು ಒಯ್ಯಲು ಬರುತ್ತಾರೆ. ಆಸಾದಿಯವರಿಗೆ ಕಾಣಿಕೆಯನ್ನು ನೀಡಿ, ಅವರಿಂದ ಹುಲಸನ್ನು ಪಡೆಯುತ್ತಾರೆ. ಊರಿನ ಹೊರಗಿನವರಿಗೆ ಹುಲುಸನ್ನು ನೀಡುವ ಸಂಪ್ರದಾಯವಿಲ್ಲ. ಮೇಲ್ವರ್ಗದವರೂ ಕೂಡ ಹುಲುಸನ್ನು ಪಡೆಯಲು ಹೋಗುವುದಿಲ್ಲ. ಕೇವಲ ಊರಿನ ಕೆಳವರ್ಗದ ರೈತರು ಮಾತ್ರ ಹುಲುಸನ್ನು ಶ್ರೀದೇವಿಯ ಪ್ರಸಾದವೆಂದು ಸ್ವೀಕರಿಸಿ, ಅದನ್ನು ತಮ್ಮ ಹೊಲಗಳೆಡೆ ಕೊಂಡೊಯ್ದು, ಹೊಲದಲ್ಲಿ

ಹುಗಿಯುತ್ತಾರೆ. ದೇವಿಯಿಂದ ಪಡೆದ ಈ ಹುಲುಸನ್ನು ಹೊಲದಲ್ಲಿ ಹೂತರೆ, ಬೆಳೆ ಹುಲುಸಾಗಿ ಬೆಳೆಯುವುದೆಂಬ ನಂಬಿಕೆ. ಶ್ರೀದೇವಿಗೆ ಬಲಿಯಾದ ಪ್ರಾಣಿ ಚೇತನವು ಹೊಲದಲ್ಲಿ ಬೆರೆತು, ಬೆಳೆಗೆ ಉಪದ್ರವವನ್ನು ನೀಡುವ ಗಾಳಿ ಮಾರಿಯಿಂದ ಹೊಲವನ್ನು ರಕ್ಷಿಸಿ ಸಮೃದ್ಧ ಬೆಳೆಗೆ ನೆರವಾಗುವುದೆಂಬ ಆದಿವಾಸಿ ನಂಬಿಕೆ ಈ ಆಚರಣೆಯಲ್ಲಿ ಅಡಕವಾದಂತಿದೆ.

**(ಔ) ಗಾವ :**

ಹುಲುಸನ್ನು ಹಂಚಾದ ಅನಂತರದಲ್ಲಿ ಗಾವದ ವಿಧಿಯನ್ನು ಆಚರಿಸಲಾಗುತ್ತದೆ : ಆಸಾದಿಯವರು ಬಿಡಕಿ ಬೈಲಿನ ಚಪ್ಪರದ ಮಹಾದ್ವಾರದ ಸಮೀಪ, ಅಂಕೆ ಹಾಕಿದ ಸ್ಥಳದಲ್ಲಿ ಸುಮಾರು ಮೂರುನಾಲ್ಕು ಫೂಟು ಉದ್ದ, ಅಗಲ ಹಾಗು ಆಳವಾದ ಒಂದು ಹೊಂಡವನ್ನು ತೋಡಿ, ರಂಗವಲ್ಲಿಯಿಂದ ಸಿಂಗರಿಸುತ್ತಾರೆ. ಹೊಂಡದ ಒಳಗೆ ಏನು ನಡೆಯುತ್ತದೆಯೆನ್ನುವುದು ಇತರರಿಗೆ ಗೊತ್ತಾಗದ ಹಾಗೆ, ಹೊಂಡದ ಸುತ್ತಲೂ ಮರೆಯನ್ನು ಮಾಡಿ, ಹೊಂಡದಲ್ಲೊಬ್ಬನು ಒಂದು ಕೋಳಿ ಸಮೇತನಾಗಿ ಕುಳಿತು ಹೊಂಡದ ನಾಲ್ಕೂ ಮೂಲೆಗೆ ನಾಲ್ಕು ಓಣ ಗಿಟಕು, ಲಿಂಬೆಕಾಯಿ, ಉತ್ತತ್ತಿ ಕಂಕಣಗಳನ್ನಿಟ್ಟು, ಇನ್ನೂ ಏನೇನೋ ರಹಸ್ಯ ಆಚರಣಾ ವಿಧಿಗಳನ್ನು ಪೂರೈಸಿ, ಬಲಿಯನ್ನು ನೀಡಿ, ಅದನ್ನೆಲ್ಲ ಮಣ್ಣಿನಿಂದ ಮುಚ್ಚಿ, ಹೊರಗೆ ಬರುತ್ತಾನೆ. ಅನಂತರ ದೇವಿಯನ್ನು ಆ ದಫನ ಸ್ಥಳದ ಮೇಲಿಂದ ಒಯ್ಯಲಾಗುತ್ತದೆ.

ಹಿಂದಿನ ಕಾಲಕ್ಕೆ ನಡೆಯುವ ಗಾವದ ಆಚರಣಾ ವಿಧಿ ವಿಧಾನಗಳು ತೀರ ಭಯಾನಕವೂ ಭೀಭತ್ಸಜನಕವೂ ಆಗಿದ್ದವು : ಗಾವದ ಹೊಂಡದಲ್ಲಿ ಕುರಿಯೊಂದನ್ನು ನಿಲ್ಲಿಸಿ, ಅದರ ಕುತ್ತಿಗೆಯನ್ನು ರಾಣೆಗ್ಯಾನು ತನ್ನ ಹಲ್ಲಿನಿಂದ ಕಡಿದು, ಕುರಿಯನ್ನು ಅರೆಜೀವವನ್ನಾಗಿಸಿ, ಅದನ್ನು ಕೆಡವಿ, ಕಾಲಿನಿಂದ ತುಳಿದು ಆವೇಶದಿಂದ ಕುಣಿದು ಕುಣಿದು, ಕುರಿಯನ್ನು ಕೊಂದುಬಿಡುತ್ತಿದ್ದನು. ನಾವು ಸಿಗಿಯುವ ಈ ಆಚರಣೆಯ ವಿಧಾನದಲ್ಲಿ ಆದಿ ಮಾನವನ ಹಸಿ ಮಾಂಸ ಭಕ್ಷಣೆಯ ಮೂಲ ಸ್ವರೂಪದ ಮಾನಸಿಕ ಕ್ರಿಯೆಯ ಪ್ರಾತಿನಿಧಿಕ ಸ್ವರೂಪವನ್ನು ಗುರುತಿಸಬಹುದಾಗಿದೆ.

ಎಂಟುದಿನಗಳ ಹಿಂದೆ ಶ್ರೀದೇವಿಗೆ ಬಲಿಯನ್ನು ಕೊಟ್ಟ ಪಟ್ಟದ ಕೋಣನ ತಲೆಗೆ ಮಣ್ಣು ಮತ್ತು ಸುಣ್ಣವನ್ನು ಹಾಕಿ, ಅದಕ್ಕೆ ಹುಳು ಹಿಡಿದು





ಹೊಲಸುವಾಸನೆಯು ಸುತ್ತಲೂ ಹರಡದಂತೆ ಎಚ್ಚರ ವಹಿಸಿ, ಕೋಣನ ತಲೆಯನ್ನು ಕಾದಿಟ್ಟುಕೊಂಡು, ಅದನ್ನೂ ಗಾವದ ಹೊಂಡದಲ್ಲಿ ಹಾಕಿ, ಹುಗಿಯುತ್ತಿದ್ದರಂತೆ. ಹೀಗೆ ಕುರಿ ಕೋಣಗಳು ದಫನವಾದ ಸ್ಥಳದ ಮೇಲಿಂದ ಶ್ರೀದೇವಿಯನ್ನು ಹೊತ್ತುಕೊಂಡು ಹೋಗುತ್ತಿದ್ದರಂತೆ. ಈ ಆಚರಣಾ ವಿಧಿಗೆ ಗಾವವೆಂದು ಕರೆಯುತ್ತಾರೆ. ಗಾವ ಪದವು ಹಿಂದಿಯ ಘಾವ್(ಗಾಯಗೊಳಿಸು) ಎಂಬ ಪದದಿಂದ ಬಂದಿರಬೇಕೆಂದು ಅನಿಸುತ್ತದೆ. ಗಾಯಗೊಳಿಸುವುದೇ ಗಾವ. ಇದೊಂದು ಬಗೆಯ ಕ್ರೂರವಾದ ಪಶುಬಲಿಯ ಪ್ರಕಾರ. ಮಾರಿಕಾಂಬೆ ತನ್ನ ಮಾದಿಗೆ ಪತಿಯನ್ನು ಕೋಳಿ, ಕುರಿ ಹಾಗೂ ಕೋಣಗಳ ರೂಪದಲ್ಲಿ ಸಂಹರಿಸಿ ದಫನ ಮಾಡಿದ್ದನ್ನೂ ಈ ಆಚರಣೆ ಸಾಂಕೇತಿಕವಾಗಿ ವಿವರಿಸುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಂಸವನ್ನು ಹುಲುಸು, ಗಮ್ಮ ಎಂದು ಕೆಲವೆಡೆ ಕರೆಯುತ್ತಾರೆ. ಪ್ರಾಣಿ ಬಲಿಯ ರಕ್ತಬೆರೆತ ಅನ್ನವನ್ನು 'ಹುಲುಸು' ಹಾಗೂ ರಾಣೆಗ್ಯಾನು ಕಾಲ್ತುಳಿತದಿಂದ ಮಾಂಸದ ಮುದ್ದೆಯಾದ ಕುರಿ ಮತ್ತು ಪಟ್ಟದ ಕೋಣನ ಬಲಿ ತಲೆಯನ್ನು ಒಳಗೊಂಡ ಹೊಂಡವನ್ನು ಗಾವದ ಹೊಂಡವೆಂದೂ, ಆಚರಣೆಯನ್ನು ಗಮ್ಮಗಾವವೆಂದು ಕರೆಯುವುದರಲ್ಲಿ ಅರ್ಥವಿದೆ.

ಈ ಚಡಂಗವೊಂದು ಬಗೆಯ ಭೂಮಿ ಪೂಜೆಯಂತಿದೆ. ಭೂಮಿಯ ಫಲೀಕರಣಕ್ಕಾಗಿ ದೇವಿಯ ಪ್ರಸಾದ ರೂಪದ ಹುಲುಸು ಗಾವಗಳನ್ನು ಭೂಮಿಯ ಗರ್ಭದಲ್ಲಿ ಸೇರಿಸಿದಲ್ಲಿ, ಭೂಗರ್ಭದಿಂದ ಸುಪುಷ್ಟವಾದ ಸಸ್ಯಾಳಿಗಳು ಸ್ಫುರಿಸಿ, ಬೆಳೆಯು ಹುಲಸಾಗಿ ಬೆಳೆದು ನಾಡು ಸುಭಿಕ್ಷವಾಗುತ್ತದೆಯೆಂಬ ನಂಬಿಕೆ ಮಣ್ಣಿನ ಮಕ್ಕಳಾದ ರೈತರದು. ಬಲಿ ಪ್ರಾಣಿಯ ಚೈತನ್ಯವು ಭೂಮಿಯಲ್ಲಿ ಬೆರೆತರೆ ಭೂದೇವಿಯು ಸಸ್ಯ ಶ್ಯಾಮಲೆಯಾಗಿ ಬಹುವಿಧ ಫಲದ ಸಮಣಿಸಿ ಮಾನವನ ಆಯುರಾರೋಗ್ಯ ವೃದ್ಧಿಗೆ ಕಾರಣಳಾಗುತ್ತಾಳೆಂಬ ಆದಿವಾಸಿಗಳ ನಂಬಿಕೆಯನ್ನೂ ಈ ಸಂದರ್ಭದಲ್ಲಿ ನೆನೆಯಬಹುದು :

ದೇವತೆಗಳಿಗೆ ಕೋಳಿ ಕುರಿ ಕೋಣಗಳನ್ನು ಬಲಿಕೊಡುವಾಗ ಭಕ್ತರು ಅಸಂತೃಪ್ತ ದೇವತೆಯನ್ನು ತೃಪ್ತಿಪಡಿಸಿ ತಾನು ಆ ದೇವತೆಯೊಡನೆ ತಾದಾತ್ಮ್ಯವನ್ನು ಹೊಂದಿದೆನೆಂದು ಬಗೆಯುತ್ತಾರೆ. ಬಲಿರಕ್ತ ಭೂಮಿಗೆ ಚೆಲ್ಲಿದಾಗ ದೇವತೆಗೂ ತಮಗೂ ಒಂದು ಬಗೆಯ ರಕ್ತ ಸಂಬಂಧವೇರ್ಪಡುತ್ತದೆಯೆಂದು ಭಾವಿಸುತ್ತಾರೆ. ಹೆನ್ರಿ ವೈಟ್ ಹೆಡ್ ಆಫ್ರಿಕಾದ ಒಂದು ಬುಡಕಟ್ಟಿನ ಜನ ತಮ್ಮ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ರಕ್ತ ಚಿಮ್ಮುವಂತೆ ಪರಸ್ಪರರು ಯಾವುದೇ ದ್ವೇಷವಿಲ್ಲದೆ ಕಾದಾಡಿ

ತಮ್ಮ ಅಂಗಾಂಗಳಿಂದ ತೊಟ್ಟಿಕ್ಕುವ ರಕ್ತವನ್ನು ಪರಸ್ಪರರು ನೆಕ್ಕಿ ತಮ್ಮ ಸೋದರ ಸಂಬಂಧವನ್ನು ದೃಢಗೊಳಿಸಿಕೊಳ್ಳುವುದರ ಕಡೆ ನಮ್ಮ ಗಮನ ಸೆಳೆಯುತ್ತಾರೆ. ತಮ್ಮ ಪರವಾಗಿ ದೇವರಿಗೆ ಪ್ರಾಣಿ ಬಲಿಯನ್ನರ್ಪಿಸುವುದರಿಂದ ತಮಗೂ ದೇವತೆಗೂ ಒಂದು ಬಗೆಯ ಗಾಢ ಸಂಬಂಧವೇರ್ಪಡುವುದು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಆಚರಣೆ ಬಂದಿರಬೇಕು.

ಪ್ರಾಣಿ ಬಲಿಯಿಂದ ನಿಶ್ಚೇಷ್ಟಿತವಾದ ಭೂತಗಳು ಸಂತುಷ್ಟಿಗೊಂಡು, ಮರು ಚೈತನ್ಯವನ್ನು ಪಡೆದು, ಮಾನವ ಕಲ್ಯಾಣಕ್ಕೆ ಪೂರಕವಾಗಿ ಕೆಲಸವನ್ನು ನಿರ್ವಹಿಸುತ್ತವೆ. ಬಲಿ ಪ್ರಾಣಿಗಳ ಚೈತನ್ಯ ಬಲಿಸಮರ್ಪಣೆ ಮಾಡಿದವನಲ್ಲಿ ನೆಲೆಸಿ ಅವನ ಬದುಕು ಸುಭದ್ರವಾಗುತ್ತದೆಂಬ ನಂಬಿಕೆ ಆದಿವಾಸಿಗಳಲ್ಲಿ ಬಲವತ್ತಾಗಿರುವುದನ್ನು ಮಾನವ ಶಾಸ್ತ್ರಜ್ಞರು ಗುರುತಿಸಿದ್ದಾರೆ. ಆದರೆ ಇಂಥ ಮೂಢನಂಬಿಕೆಗಳಲ್ಲಿ ಯಾವುದೇ ಬಗೆಯ ಹುರುಳಿಲ್ಲವೆನ್ನುವುದನ್ನು ಪ್ರಗತಿಪರರು ಜನಸಾಮಾನ್ಯರಿಗೆ ತಿಳಿಸಿ ಹೇಳುವಲ್ಲಿ ಸಫಲರಾಗಿ, ಪ್ರಾಣಿಬಲಿಯ ಕ್ರೂರವಾದ ಮತ್ತು ಹೇಯವಾದ ಮೂಢ ಆಚರಣೆಯನ್ನು ಇಂದು ಮಾರಿಜಾತ್ರೆಯಲ್ಲಿ ನಿಷೇಧಿಸಿದ್ದಾರೆ. ಹುಲುಸು ಮತ್ತು ಗಾವದ ಆಚರಣೆಯನ್ನು ಜನಸಾಮಾನ್ಯರ ಮನಸ್ಸಿಗೆ ನೋವಾಗದ ರೀತಿಯಲ್ಲಿ, ಸಾತ್ವಿಕ ರೂಪಕ್ಕೆ ಪರಿವರ್ತಿಸಿ, ಕೇವಲ ಸಾಂಕೇತಿಕವಾಗಿ ಈ ಆಚರಣಾ ವಿಧಿಗಳನ್ನು ಮಾಡಿ ಮುಗಿಸುತ್ತಾರೆ.

**(ಕ) ಮಾತಂಗಿ ಚಪ್ಪರಕ್ಕೆ ಬೆಂಕಿಯಿಡುವುದು:**

ಹುಲುಸು ಮತ್ತು ಗಾವದ ಆಚರಣಾ ವಿಧಿಯ ಅವಂತರದಲ್ಲಿ ಶ್ರೀದೇವಿಯನ್ನು ಜಾತ್ರೆಯ ಚಪ್ಪರದಿಂದ ಭಕ್ತರು ರಥದ ಮೇಲೆ ಒಯ್ಯದೆ, ಹಲಿಗೆಗಳಿಂದ ತಯಾರಿಸಿದ ಪೀಠವನ್ನು ಮರದ ಎಳೆಗಳಿಗೆ ಕಟ್ಟಿ, ಆ ಪೀಠದ ಮೇಲೆ ಶ್ರೀದೇವಿಯನ್ನು ಕೂಡ್ರಿಸಿಗೆಂಡು ಗೊತ್ತೊಯ್ಯುತ್ತಾರೆ. ಶ್ರೀದೇವಿಯ ಜೊತೆಗೇ ಮೇಟಿ ದೀಪ ಹಾಗೂ ದೀವಟಿಗೆಗಳನ್ನೊಯ್ಯುತ್ತಾರೆ. ಪಕ್ಕದಲ್ಲಿದ್ದ ಮಾತಂಗಿ ಚಪ್ಪರಕ್ಕೆ ಬೆಂಕಿಯಿಟ್ಟು ಸ್ವಲ್ಪ ಮುಂದಕ್ಕೆ ಹೋಗಿ, ಶ್ರೀದೇವಿಯು ಚಪ್ಪರದತ್ತ ಮತ್ತೆ ಹಿಂತಿರುಗಿ ನೋಡಿ, ಚಪ್ಪರ ಸುಟ್ಟುದನ್ನು ಖಾತ್ರಿ ಪಡಿಸಿಕೊಂಡು ಮತ್ತೆ ಮುಂದುವರಿಯುತ್ತಾಳೆ.

ಬದುಕಿನಲ್ಲಿ ಸಂಕಷ್ಟಕ್ಕೆ ಸಿಲುಕಿದವರು, ತಮ್ಮ ಸಂಕಟಗಳ ಪರಿಹಾರಕ್ಕಾಗಿ ಶ್ರೀದೇವಿಗೆ ಬೇವಿನುಡಿಗೆಯ ಹರಕೆಯನ್ನು ಹೊರುತ್ತಾರೆ. ಜಾತ್ರೆಯ ಸಮಯದಲ್ಲಿ ಹರಕೆ ಹೊತ್ತವರೆಲ್ಲ ಸ್ನಾನವನ್ನು ಮುಗಿಸಿ, ತಾವು ಉಡುವ ಬಟ್ಟೆಗೆ ಬದಲಾಗಿ





ಬೇವಿನುಡಿಗೆ ಹಾಗೂ ಪಂಚೆಯನ್ನುಟ್ಟು ಶಿರಸಿಯ ಮೂಲದೇವತೆಗಳಾದ, ಮರ್ಕಿ-ದುರ್ಗಿಯರೆಡೆಗೆ ಬಂದು ಪ್ರಾರ್ಥನೆಯನ್ನು ಸಲ್ಲಿಸಿ, ಅಲ್ಲಿಂದ ಶ್ರೀ ಮಾರಿಕಾಂಬೆಯು ಬೀಡು ಬಿಟ್ಟ ಜಾತ್ರೆಯ ಚಪ್ಪರಕ್ಕೆ ಬಂದು, ಚಪ್ಪರವನ್ನು ಪ್ರದಕ್ಷಿಣೆ ಹಾಕಿ, ಬೇವಿನುಡಿಗೆಯನ್ನು ಬಿಚ್ಚುತ್ತಾರೆ. ಭಕ್ತರಿಗೆ ಬೇವಿನುಡಿಗೆಯನ್ನು ಕಟ್ಟುವ ಕೆಲಸ ಬೇಡರ ಜೋಗತಿಯರದಾದರೆ, ಅದನ್ನು ಬಿಚ್ಚುವ ಕೆಲಸವು ಮೇತ್ರಿ ಹಾಗೂ ಚಲವಾದಿ ಜೋಗತಿಯರದು. ಬೇವಿನುಡಿಗೆಯನ್ನು ಬಿಚ್ಚಿದ ಮೇಲೆ, ಆ ಸೊಪ್ಪನ್ನು ಒಂದು ಚಪ್ಪರವಾಗಿಸುತ್ತಾರೆ. ಮಾತಂಗಿ ಚಪ್ಪರವೆಂದು ಕರೆಯಲಾಗುವುದು ಇದೇ ಚಪ್ಪರಕ್ಕೆ. ಶ್ರೀ ಮಾರಿಕಾಂಬೆ ಬೇವಿನ ಮರದಮ್ಮನೂ ಹೌದು. ಅವಳು ಬೇವಿನ ಮರದಲ್ಲಿ ವಾಸವಾಗಿರುತ್ತಾಳೆಂಬ ನಂಬಿಕೆ ಜನಸಾಮಾನ್ಯರಲ್ಲಿದೆ. ಹಾಗೆಂದ ಮೇಲೆ ಈ ಮಾತಂಗಿ ಚಪ್ಪರವು ಅಮ್ಮನ ವಾಸಸ್ಥಾನವೆಂದು ಮತ್ತೆ ಬೇರೆ ಹೇಳಬೇಕಾಗಿಲ್ಲ. ಮಾತಂಗಿ ಚಪ್ಪರ ಶ್ರೀದೇವಿ ಮತ್ತು ಆಕೆಯ ಹೊಲೆಯ ಪತಿ ವಾಸಿಸುತ್ತಿದ್ದ ಮನೆಯ ಸಂಕೇತವಿರಬೇಕೆಂದು ನನ್ನಣಿಕೆ. ಹೊಲೆಯನ ಸಂಪರ್ಕದಿಂದ ಬ್ರಾಹ್ಮಣಿ ಮಾತಂಗಿಯಾಗಿದ್ದಾಳೆ. ಅದಕ್ಕಾಗಿಯೇ ಅವಳ ಮನೆ ಮಾತಂಗಿಯ ಚಪ್ಪರವಾಗಿದೆ. ಚಪ್ಪರಕ್ಕೆ ಬೆಂಕಿಯನ್ನಿಡುವ ಆಚರಣಾ ವಿಧಿಯು ಶ್ರೀದೇವಿಯು ತನ್ನ ಮನೆಗೆ ಬೆಂಕಿಯಿತ್ತು ಅದರಲ್ಲಿ ಗಂಡನನ್ನು ಒಗೆದು ಅವಳೂ ಚಿತೆಗೇರಿದ ಸಂಗತಿಯನ್ನು ನೆನಪಿಸುತ್ತದೆ.

ಮಾತಂಗಿ ಚಪ್ಪರಕ್ಕೆ ಉರಿಯಿತ್ತ ಮೇಲೆ ಶ್ರೀದೇವಿಯನ್ನು ಅತ್ಯಂತ ವೇಗವಾಗಿ ದೇವಸ್ಥಾನದ ಮುಂಬದಿಯಿಂದ ಪೂರ್ವದಿಕ್ಕಿಗಿರುವ ವಿಸರ್ಜನ ಪೀಠದ ಹತ್ತಿರ ಒಯ್ಯುತ್ತಾರೆ. ಆಗ ಆಸಾದಿಗಳು ತಾಯಿಯನ್ನು ಕಳೆದುಕೊಂಡ ಪರದೇಶಿಗಳ ರೀತಿಯಲ್ಲಿ ಗೋಳಿಡುತ್ತಾರೆ. ತಾಯಿಯ ವೈಧವ್ಯಕ್ಕೆ ಪರಿತಪಿಸುತ್ತಾರೆ ; ದುಃಖದಿಂದ ದೇವಿಯನ್ನು ಹಿಂಬಾಲಿಸುತ್ತಾರೆ. ಶ್ರೀದೇವಿಯನ್ನು ಮೊದಲನೆಯ ವಿಸರ್ಜನ ಪೀಠದ ಹತ್ತಿರ ಕೂಡ್ರಿಸುತ್ತಾರೆ.

**(ಖ) ಹೆಪ್ಪು ಕೊಡುವುದು :**

ತಾಯಿಯಿಲ್ಲದ ತಬ್ಬಲಿಗಳಂತೆ ರೋಧಿಸುವ ಆಸಾದಿಗಳಿಗೆ ಹೆಪ್ಪು ಕೊಡುವ ಆಚರಣಾ ವಿಧಿಯೊಂದು ಈ ಸಂದರ್ಭದಲ್ಲಿ ನಡೆಯುತ್ತದೆ. ಆಸಾದಿ ಗಂಡುಸೊಬ್ಬ ಬೊಗಸೆ ಜೋಡಿಸಿ ಕುಳಿತಿರುತ್ತಾನೆ. ಅವನ ಬೊಗಸೆಯಲ್ಲಿ ಹೆಂಗಸೊಬ್ಬಳು ಮೊಸರನ್ನು ತಂದು, ಅದು ಬೊಗಸೆಯಿಂದ ಹೊರಚೆಲ್ಲಿ ಮೊಳಕೈಯಿಂದ ಭೂಮಿಗೆ ಧಾರೆ ಧಾರೆಯಾಗಿ ಸುರಿಯುವಂತೆ ಹೊಯ್ಯುತ್ತಾಳೆ.

ಅವನು ಮೊಸರನ್ನು ಕುಡಿಯುವಾಗ, ಅವನ ತಲೆಯ ಮೇಲೆಲ್ಲ ಮೊಸರು ಬಿದ್ದು ನೆಲಕ್ಕಿಳಿಯುವಂತೆ ಮತ್ತೆ ಮತ್ತೆ ಮೊಸರನ್ನು ಚೆಲ್ಲುತ್ತಾಳೆ. ಹೀಗೆ ಚೆಲ್ಲುವ ಮೊಸರನ್ನು ಆಸಾದಿ ತೃಪ್ತಿಯಾಗುವಂತೆ ಕುಡಿದು, ಹೆಚ್ಚಾದ ಮೊಸರೆಲ್ಲ ಅವನ ಮೈಮೇಲಿಂದ ಭೂಮಿಗಿಳಿದರೆ, ಭೂಮಿತಾಯಿಯೂ ಸಂತೃಪ್ತಳಾಗಿ ಫಲವತಿಯಾಗುವಳು, ಲೋಕ ಕಲ್ಯಾಣವಾಗುವುದು ಎಂಬ ನಂಬಿಕೆ ಜಾನಪದಲ್ಲಡಗಿದೆ. ಈ ಚಡಂಗಕ್ಕೆ ಭೂಮಿಗೆ ಹೆಪ್ಪು ಕೊಡುವುದು ಎಂದು ಕರೆಯುತ್ತಾರೆ. ಈ ಆಚರಣಾ ವಿಧಿ ಭೂಮಿಗೂ ಆಸಾದಿಗಳಿಗೂ ಇರುವ ಸಂಬಂಧವನ್ನು ಪ್ರಕಟಿಸುತ್ತದೆ. ಭೂಮಿಯ ಫಲೀಕರಣಕ್ಕೆ ಆಸಾದಿಯ ಮೈಯಿಂದ ಹೆಪ್ಪಿಳಿಯಬೇಕು. ಆಗ ಮಾತ್ರ ಭೂಮಿಗೂ-ಆಸಾದಿಗೂ ಒಂದು ಬಗೆಯ ಅವಿನಾಭಾವ ಸಂಬಂಧವೇರ್ಪಟ್ಟು, ಭೂದೇವಿ ಸಂತೃಪ್ತಿಗೊಂಡು ಫಲಿಸುತ್ತಾಳೆ. ಬಹುಶಃ ಆಸಾದಿಗಳು ಈ ಭೂಮಿಯ ಒಡೆಯರಾಗಿದ್ದ ಅಂಶವನ್ನು ಹೆಪ್ಪುಕೊಡುವ ಆಚರಣಾವಿಧಿ ದೃಢಗೊಳಿಸುತ್ತದೆ. ಹೊಲೆಯರು ಭೂಮಿಯಲ್ಲಿ ಬಿತ್ತುವ ಬೀಜವುಳ್ಳವರಾಗಿದ್ದರು ಅವರಿಂದಲೇ ಉಳಿದವರು ಬೀಜ ಪಡೆವ ಜನಪದ ಕತೆಗಳೂ ಇದಕ್ಕೆ ಪೂರಕವಾಗುತ್ತವೆ. ಹೆಪ್ಪುಹುಳಿ, ಕಾಮದ ಸಂಕೇತವೂ ಆಗಿರುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಭೂದೇವಿಗೆ ಹೆಪ್ಪುಕೊಡುವ ವಿಧಿಯಾಚರಣೆಯ ನಂತರದಲ್ಲಿ ಶ್ರೀದೇವಿಯ ಕಳಾಸ್ವರೂಪವಾದ ಮೇಟಿ ದೀಪವನ್ನು ದೇವಸ್ಥಾನಕ್ಕೆ ತಂದು, ಒಂದು ಸುರಕ್ಷಿತ ಸ್ಥಳದಲ್ಲಿಡುತ್ತಾರೆ. ಆಮೇಲೆ ದೇವಿಯನ್ನು ಅಲ್ಲಿಂದೊಯ್ದು ಅಲ್ಲಿಂದ ಸುಮಾರು ಒಂದುವರೆ ಮೈಲು ದೂರದಲ್ಲಿರುವ ವಿಸರ್ಜನಾ ಸ್ಥಳದಲ್ಲಿ ತಂದು ಕೂಡ್ರಿಸುತ್ತಾರೆ. ಅಲ್ಲಿ ಆಸಾದಿಗಳು ಶ್ರೀದೇವಿಯ ವಿಸರ್ಜನಾ ವಿಧಿಗಳನ್ನು ನೆರವೇರಿಸುತ್ತಾರೆ.

ಆಸಾದಿಗಳು ಶ್ರೀದೇವಿಗೆ ತೊಡಿಸಿದ ಮುತ್ತೈದೆತನದ ಬಳೆಗಳನ್ನು ಒಡೆಯುತ್ತಾರೆ. ಮುಸುಕು ಹಾಕಿಕೊಂಡು ಅಳುತ್ತಾರೆ. ಶ್ರೀದೇವಿಯ ಕಡಗ, ತಾಳಿ, ಮೂಗುತಿ, ಸುತ್ತುಂಗುಲ, ಉಡಿ ಅಕ್ಕಿ ಎಲ್ಲವನ್ನೂ ಆಸಾದಿಯರಿಗೆ ನೀಡುತ್ತಾರೆ. ಶ್ರೀ ದೇವಿಗೆ ಹಾಕಿದ ಧೊಡ್ಡದಾದ ಬೆಂಡಿನ ಮಾಲೆಯನ್ನು ಪಕ್ಕದಲ್ಲಿರುವ ಎತ್ತರವಾದ ಮರಕ್ಕೆ ಕಟ್ಟುತ್ತಾರೆ. ಅನಂತರ ಆಸಾದಿಯರು, ಶ್ರೀದೇವಿಯನ್ನು ತಮ್ಮ ಆಡು ಭಾಷೆಯಲ್ಲಿ ವ್ಯಾಜನಿಂದೆಗೈಯುತ್ತಾರೆ : ನೀನು ನಿನ್ನ ಗಂಡನನ್ನು ಹೊಡೆದಿ, ನಿನ್ನ ಹಟ್ಟಿಗೆ ಬೆಂಕಿಕೊಟ್ಟಿ, ಇದೆಂತಹ ಕೆಲಸವನ್ನು ನೀನು ಮಾಡಿದೆ?" ಎಂದು ನಿಂದಿಸಿ `ರಾಣಿಗೋಲ'ನ್ನು ದೇವಿಯ ಮುಂದೆ ಬೀಸುತ್ತಾರೆ. "ನೀನು ಇನ್ನು ಮುಂದೆ ಹೀಗೆ ಬರುತ್ತಾ ಇರು. ಬಾರೆ ಬಾರೆ ಲಕ್ಷ್ಮೀ ದೇವಮ್ಮಾ" ಎಂದು ಹಾಡಿ ಹೊಗಳಿಕೆಯನ್ನು ಮಾಡಿ





ದೇವಿಗೆ ಹರಕೆಯನ್ನು ಮಾಡಿಕೊಳ್ಳುತ್ತಾರೆ.

ಜಜಜ ಜಗನ್ಮೂರ್ತಿಯಮ್ಮ ಆಗಣ ಜೋಗಿಣಿಯಮ್ಮ
ಸಿದವ್ನ ಶಿವರೂಪ್ಣಿ[೨] ಬದ್ರ ಮಂಕಾಳಿ ಕೇಳ್ ನನ್ ಸೊಲ್ಲ
ನೀ ಬರುರವ್‌ಸ್ಗೆಯಮ್ಮ ನಿ ಕೆಂಡಹಾರಿದ್ದುವಂತಮ್ಮ
ಆಮೇಲೆ ಹೋರ್‌ಗೋಣ್ಣ [೩] ಕಡಿಸಿದ್ದಿಯಂತಮ್ಮ
ಕೇಳ್ ನನ್ನಸೊಲ್ಲ ಆದಿಶಕ್ತಿ:

ಈ ಊರ್ ಗೌಡ್ನ ಹಟ್ಟ್ಯಮ್ಮ,[೪] ಗೌಡ್ರ ಶಾನ್ಭೋಗ್ರ ಹಟ್ಟ್ಯಮ್ಮ
ಚೆರ್‌ಮಾನ್ರ್ ಹಟ್ಟ್ಯಮ್ಮ, ರೈತ ರಾಣಿಯರ ಹಟ್ಟ್ಯಮ್ಮ
ಬೇಲಿಯಾಗಿರುವ ಹಲ್ಲಿ ಹಾವ್‌ರಾಣಿ ಹಟ್ಟ್ಯಮ್ಮ
ಈ ಊರ ಗ್ರಾಮಕ್ಕಮ್ಮ ಎಲ್ಲಿಲ್ಲದ ಮಳಿಕೊಡು, ಎಲ್ಲಿಲ್ಲದ ಬೆಳಿಕೊಡು
ಈ ಊರ ಗ್ರಾಮಕ್ಕಮ್ಮ ದನಕರ ಕೊಡಮ್ಮ

ಹುಳಿ ಮಜ್ಜಗಿ ಕೊಡಮ್ಮ, ಮುಗ್ಗ ತುಪ್ಪಕೊಡಮ್ಮ
ಈ ಊರ ಗ್ರಾಮಕ್ಕೆ ಎಡಬಂದ ದುರ್ಗಿಯರನ್ನ
ಎಡಕ್ಕೆ ಬಯ್ಲ [೫] ಮಾಡಮ್ಮ
ಬಲಕ್ ಬಂದ್ ದುರ್ಗಿಯರನ್ನ ಬಲಕ್ ಬಯ್ಲಮಾಡಮ್ಮ

ಈ ಊರ್ ಗ್ರಾಮದವರನ್ನ ತಣಗಿಟ್ ಕಂಡ್ [೬] ಬಂದ್ರ
ನಿನ್ನ ನುಣ್ಣಗಿಟ್‌ಕಂಡ್ [೭] ಬರ್ತಾರಮ್ಮ
ಈ ಮಾತಿಗೆ ತಪ್ಪಿದರೆ
ನಿನ್ನ ತುತ್‌ತುದಿ ಮೂಣು ಹಾರ್ ಬೀಳ್ವಂಗ್ ಹಟ್ಟ್ಯಮ್ಮ

ಈ ಊರ್ ಗ್ರಾಮದವ್ರು ಅರ್ತದ್ ಮರ್ತದ್ದು
ಅಂಬ್ಲಿ ತುಂಬಿ ಸಪ್ಪು ಎಡಿ ಮಾಡಿದ್ದಾರಮ್ಮ
ತಪ್ ಒಪ್ ನೀ ಕ್ಷಮಿಸಿ
ಅಂದು ನಿನ್ ಮುತ್ತಿನ ಸೀರಿ ಸೆರಗ
ಮರಿ ಮಾಡಿಕೆಂಡು ಕಾಪಾಡ್‌ಕೆಂಡು ಬಾರಮ್ಮ

೧. ಶಿವರೂಪಿಣಿ ೨. ಬರುವ ರಭಸಕ್ಕೆ ೩. ತರುಣ ಕೋಣನನ್ನು ೪. ಹಡದೆ ೫. ದೂರಮಾಡು ೬. ಶಾಂತವಾಗಿಟ್ಟುಕೊಂಡು ೭. ಸಮಾಧಾನವಾಗಿಟ್ಟುಕೊಂಡು

ಎಂದು ಮುಂತಾಗಿ ಶ್ರೀದೇವಿಯಿಂದ ಊರಿನಲ್ಲಿ ಮಳೆಬೆಳೆ ಸಮೃದ್ಧಿಯಾಗುವಂತೆ, ದನಕರುಗಳಿಗೆ ಸುಖವಾಗುವಂತೆ ಹರಕೆಯನ್ನು ಮಾಡಿಕೊಳ್ಳುತ್ತಾರೆ. ಅನಂತರ ಶ್ರೀದೇವಿಗೆ ಸುಮಾರು ಇನ್ನೂರು ತೆಂಗಿನ ಕಾಯಿಗಳನ್ನು ಸುಳಿದು, ಆ ಕಾಯಿಗಳನ್ನು ಬಾಬ್‌ದಾರರು ಹಾಗೂ ಅಲ್ಲಿ ನೆರೆದ ಇನ್ನಿತರ ಪ್ರಮುಖರಿಗೆ ದೇವಿಯ ಮುಂದೆ ಒಡೆಯಲು ಕೊಡುತ್ತಾರೆ. ಅವನ್ನು ಒಡೆದ ಮೇಲೆ ಒಡೆದ ಕಾಯಿಗಳ ಸ್ವಲ್ಪ ಭಾಗವನ್ನು ಬಾಬ್‌ದಾರರು ಮತ್ತು ಊರ ಪ್ರತಿಷ್ಠಿತರು ಒಯ್ದರೆ, ಉಳಿದ ಕಾಯಿಕಡಿಗಳನ್ನು ಅಲ್ಲಿನೆರೆದ ರೈತರು ಪ್ರಸಾದ ರೂಪದಲ್ಲಿ ಸ್ವೀಕರಿಸುತ್ತಾರೆ. ಅನಂತರ ಶ್ರೀ ದೇವಿಯ ಮುಖಕ್ಕೆ ಪೂರ್ಣ ಮುಸುಕನ್ನು ಹಾಕಿ, ಅವಳ ವಿಸರ್ಜನೆಯನ್ನು ಮಾಡಲಾಗುತ್ತದೆ.

**(ಗ) ಯುಗಾದಿಯ ಮರು ಪ್ರತಿಷ್ಠಾಪನೆ :**

ಹನ್ನೆರಡು ದಿನಗಳ ಸೂತಕ ಕಳೆದ ಮೇಲೆ ಚಿತೆಗೇರಿದ ಶ್ರೀದೇವಿಯು ನಾಡಿಗರ ಮನೆಯಲ್ಲಿ ಪುನ: ಕನ್ನೆಯಾಗಿ ಅವತರಿಸದಳೋ ಏನೋ ಎಂಬಂತೆ ಶ್ರೀದೇವಿಯನ್ನು ಚೈತ್ರ ಶುದ್ಧ ಪ್ರತಿಪದೆಗೆ, ಅಂದರೆ ಯುಗಾದಿಯೆಂದು ಮರು ಪ್ರತಿಷ್ಠಾಪನೆ ಮಾಡುತ್ತಾರೆ. ಮರುಪ್ರತಿಷ್ಠಾಪನೆಯ ಕಾಲಕ್ಕೆ, ನಾಡಿನ ಮನೆತನದವರು ಅರ್ಚಕರೊಂದಿಗೆ ಶ್ರೀ ಮಾರಿಕಾಂಬೆಯ ದೇವಾಲಯಕ್ಕೆ ಬಂದು ಶ್ರೀದೇವಿಯ ಪ್ರತಿಷ್ಠಾಪನೆಯ ಹೋಮವನ್ನು ಮಾಡಿ, ದೇವಿಗೆ ಮೊದಲ ಪೂಜೆಯನ್ನು ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ದೇವಾಲಯದ ಮಹಾದ್ವಾರವನ್ನು ದಾಟಿ ಒಳಗೆ ಬರುವ ಹನ್ನೆರಡು ವರ್ಷದ ಒಳಗಿನ ಕನ್ನೆ ಮಕ್ಕಳಿಗೆ ದಕ್ಷಿಣೆಯನ್ನು ಕೊಟ್ಟು, ಒಳಗೆ ಕರೆದುಕೊಳ್ಳುವ ಸಂಪ್ರದಾಯವಿದೆ. ಈ ಕನ್ನೆ ಹೆಣ್ಣುಮಕ್ಕಳು ಶ್ರೀದೇವಿಯ ಪ್ರತಿನಿಧಿಗಳ ಸ್ವರೂಪದಲ್ಲಿ ದೇವಾಲಯವನ್ನು ಪ್ರವೇಶಿಸುತ್ತಾರೆನ್ನುವ ನಂಬಿಕೆಯೇ ಈ ಆಚರಣೆಗೆ ಹಿನ್ನೆಲೆಯೆಂದು ತಿಳಿದುಬರುತ್ತದೆ. ಇದೇ ಸಮಯದಲ್ಲಿ ಜೋಗತಿಯರು, ದೇವಾಲಯದ ದ್ವಾರದಲ್ಲಿ ಸಾತ್ವಿಕ ಬಲಿ ಸಮರ್ಪಣೆಯನ್ನು ಮಾಡುತ್ತಾರೆ.

ಆಸಾದಿಯರು ಇದೇ ವೇಳೆಗೆ ಅಕ್ಕಿಯಲ್ಲಿ 'ರಾಣಿಕೋಲ'ನ್ನು ನಿಲ್ಲಿಸಿ, ಸಭಾಭವನದಲ್ಲಿ ಶ್ರೀದೇವಿಯನ್ನು ಕುರಿತಾಗಿ ಹಾಡುತ್ತ ಕುಣಿಯುತ್ತಾರೆ. ಈ ಸಂಭ್ರಮ ಸಡಗರದ ವಾತಾವರಣದ ಮಧ್ಯದಲ್ಲಿಯೇ ಜಾತ್ರೆಯ ಉಸ್ತುವಾರಿಯನ್ನು ಹೊತ್ತ ಬಾಬ್‌ದಾರರಿಗೆ, ಜಾತ್ರೆಯಲ್ಲಿ ತಮ್ಮ ತಮ್ಮ ಪಾಲಿನ ಕೆಲಸಗಳನ್ನು





ನಿರ್ವಹಿಸಿದ ರೈತ ಕೆಲಸಗಾರರಿಗೆ ಜಾತ್ರೆಯಲ್ಲಿ ತಮ್ಮ ವಿಶಿಷ್ಟವಾದ ಮತ್ತು ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿದ ಆಸಾದಿಯರಿಗೆ ಅವರವರ ಸ್ಥಾನ ಮನಗಳಿಗೆ ತಕ್ಕಂತೆ ಉಚಿತ ರೀತಿಯಲ್ಲಿ ಉಡುಗೊರೆಗಳನ್ನು ನೀಡಲಾಗುತ್ತದೆ.

ಹೀಗೆ ಮಾರಿಕಾಂಬೆಯ ಜಾತ್ರೆಯ ವಿಧಿಗಳೆಲ್ಲ ಜಾನಪದೀಯವಾಗಿ ಸಮಾಜದ ಕೆಳಸ್ತರದವರಿಂದ ಜಾತ್ರೆಯ ವಿಧಿ ನಿಷೇಧಗಳ ಉಲ್ಲಂಘನೆಯಾಗದಂತೆ ನಡೆಯುತ್ತವೆ.

**೪. ಜಾತ್ರೆಯ ಆಚರಣೆಗಳ ಒಳನೋಟ :**

ಶ್ರೀ ಮಾರಿಕಾಂಬೆಯ ಜಾತ್ರೆಯ ಆಚರಣಾ ವಿಧಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಆಚರಣೆಗಳು ನಮ್ಮ ಸಮ್ಮಿಶ್ರ ಸಂಕೀರ್ಣ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ. ಜಾತ್ರೆಯ ಆಚರಣೆಗಳಲ್ಲಿ, ಯಾವುದೋ ಕಾಲಕ್ಕೆ ಘಟಿಸಿರಬಹುದಾದ ವರ್ಣಸಂಕರದ ಘಟನೆ, ಅದರ ಅಪರಾಧ, ಶಿಕ್ಷೆಯ ಸ್ವರೂಪ ಮುಂತಾದವನ್ನು ತಳಕು ಹಾಕಿ, ಆ ಹೋರಾಟದಲ್ಲಿ ಸತಿಯಿಂದ ಹತನಾದ ಪತಿ, ಮಡಿದು ಮಹಾಸತಿಯಾದ ಹೆಂಡತಿ ಈ ಮುಂತಾದ ಘಟನಾವಳಿಗಳನ್ನುಳ್ಳ ಆಚರಣೆಗಳು ಸ್ಥೂಲ ನೋಟಕ್ಕೆ ಕಾಣಬಹುದಾದರೂ, ಅದಕ್ಕಿಂತ ಮುಖ್ಯವಾಗಿ ಇಲ್ಲಿ ಕೃಷಿ ಸಮೃದ್ಧಿಯ ಹಾಗೂ ರೋಗವಿಮುಕ್ತಿ ಪಡೆಯುವ ಹಾರೈಕೆಯನ್ನು ಕಾಣಬಹುದು. ಕೃಷಿ ಸಮೃದ್ಧಿಯು 'ಅಮ್ಮನ' ಲೈಂಗಿಕ ಶಕ್ತಿಯ ಸಮೃದ್ಧಿಯನ್ನೇ ಅವಲಂಬಿಸಿದೆ - ಎಂಬ ಆದಿವಾಸಿಗಳ ನಂಬಿಕೆಯ ಹಿನ್ನೆಲೆಯಲ್ಲಿ, ಮಾರಿ-ಅಮ್ಮನ ಮದುವೆ ಮಾಡಿಸುವ, ಅವಳು ಮಕ್ಕಳನ್ನು ಹೆರುವ ಕಥೆಯನ್ನು ಕಟ್ಟಿದಂತಿದೆ. ಭೂಮಿ ತಾಯಿಯು ಫಲವತಿಯಾಗಬೇಕಾದರೆ, ಅವಳ ಮದುವೆಯಾಗುವುದು ಅಗತ್ಯ. ಅದಕ್ಕಾಗಿ ಅವಳಿಗೊಬ್ಬ ಪತಿಬೇಕು. ಆದಿಯಲ್ಲಿ ಹೊಲದ ವ್ಯವಸಾಯವನ್ನು ಮಾಡಿ, ಹೊಲದೊಡೆಯರಾದವರು ಹೊಲೆಯರೇ ಆಗಿರಬೇಕೆಂಬ ಬಲವಾದ ಊಹೆಗಳಿವೆ. ಈ ಊಹೆಗಳಿಗೆ ಸಾಕಷ್ಟು ಆಧಾರಗಳೂ ಇವೆ. ಆದಕ್ಕಾಗಿಯೇ ಭೂಮಿತಾಯಿಯ ಜೊತೆಗೆ ಅಭೇದ ಸಂಬಂಧವುಳ್ಳ ಮಾರಿಕಾಂಬೆಯ ಜೊತೆಗೆ ಹೊಲೆಯನ ಸಂಬಂಧ ಕಲ್ಪಿಸಿರಬೇಕು. ಮುಂದೆ ಹೊಲೆಯನ ಬಲಿಯಾಗಿ, ಅವನಿಂದ ಭೂಸ್ವಾಮಿತ್ವವೇ ಹೋಗಿದ್ದುದರ ಸಂಕೇತವಾಗಿ ಕೋಣನ ಬಲಿ ಪ್ರಚಲಿತವಾಗಿರಬಹುದು. ಅಥವಾ ಕೋಣನ ಬಲಿ ಭೂಮಿಯ ಫಲವಂತಿಕೆಗಾಗಿಯೇ ಎನ್ನುವ ಅಂಶವನ್ನು ಫ್ರೇಜರನು ದಾಖಲಿಸಿದ ಆದಿವಾಸಿ ನಂಬಿಕೆಯು

ಹಿನ್ನೆಲೆಯಲ್ಲಿಯೂ ಅರ್ಥೈಸಬಹುದಾಗಿದೆ : ಇಟಲಿ ದೇಶದ ಅಂಕಿಯ ಪಟ್ಟಣದ ಬಳಿಯಿರುವ ಡಯಾನಾ ದೇವತೆ ಫಲ ಶಕ್ತಿಯ ದೇವತೆಯಾಗಿದ್ದಾಳೆ. ಅವಳೂ ಮಾರಿಕಾಂಬೆಯಂತೆ ವೃಕ್ಷ ಹಾಗೂ ಪ್ರಾಣಿವರ್ಗದ ದೇವತೆ. ವನಸ್ಪತಿ ಹಾಗೂ ಪ್ರಾಣಿ ವರ್ಗಗಳ ವೃದ್ಧಿಯಾಗಬೇಕಾದರೆ ಅವಳ ಜೊತೆಗಾರನಾದ ವರ್ಬಿಯಸ್ ಅಥವಾ ಅವನ ಪ್ರತಿನಿಧಿಯಾದ ಫಾದ್ರಿಯ ಸಂಬಂಧವನ್ನು ಮಾಡಿ, ಆ ಮೂಲಕ ಸಸ್ಯ ಮತ್ತು ಪ್ರಾಣಿ ವರ್ಗಗಳಲ್ಲಿ ಫಲಶಕ್ತಿ ಹೆಚ್ಚುವಂತೆ ಮಾಡಬೇಕಂತೆ. ಅದಕ್ಕಾಗಿಯೇ ಅರಿಕಿಯಾದಲ್ಲಿ ಪ್ರತಿವರ್ಷ ಡಯಾನಾ ದೇವತೆಗೆ ಫಾದ್ರಿಯೊಡನೆ ಮದುವೆಯಾಗುತ್ತದೆ. ಫಾದ್ರಿಗೆ "ಕಾಡಿನ ರಾಜ" ಎಂಬ ಬಿರುದೂ ಇತ್ತು. ಸಸ್ಯ ವರ್ಗ ಮತ್ತು ಪ್ರಾಣಿವರ್ಗ ಸಮೃದ್ಧವಾಗಬೇಕಾದರೆ, ಅದಕ್ಕೆ ಕಾರಣನಾದ ಕಾಡಿನ ರಾಜ ಫಾದ್ರಿಯೂ ದೃಢಕಾಯನಿರಬೇಕಾಗುತ್ತದೆ. ಸುಪುಷ್ಟವಾದ ಸಸ್ಯ ಮತ್ತು ಪ್ರಾಣಿವರ್ಗದ ಸಮೃದ್ಧಿಯನ್ನು ಪಡೆಯುವ ದೃಷ್ಟಿಯಿಂದ, ಫಾದ್ರಿಯನ್ನು ಆತನು ಮುದುಕನಾಗುವ ಪೂರ್ವದಲ್ಲಿಯೇ ಕೊಲ್ಲಲಾಗುತ್ತದೆ. ಈ ರೀತಿ ಕೊಲ್ಲುವುದು, ಸೃಷ್ಟಿ ಸಮೃದ್ಧಿಯ ದೃಷ್ಟಿಯಿಂದ ಅವಶ್ಯವೆಂದು ಆ ಜನ ನಂಬಿದ್ದರು. ಇದೇ ಬಗೆಯಲ್ಲಿ ಮಾರಿಕಾಂಬೆಗೆ ಕೊಬ್ಬಿದ ಹೋರಿ ಕೋಣವನ್ನು ಮದುವೆ ಮಾಡಿ, ಅದರ ಯೌವ್ವನ ಸಂಪದ ನಶಿಸುವ ಪೂರ್ವದಲ್ಲಿ, ಎರಡೋ ಮೂರೋ ಹನ್ನೆರಡೋ ವರ್ಷಗಳಿಗೊಮ್ಮೆ ಮಾರಿ ಹಬ್ಬವನ್ನಾಚರಿಸಿ, ಕೋಣವನ್ನು ಬಲಿತೆಗೆದುಕೊಳ್ಳುವ ವಾಡಿಕೆ ಬಂದಿರಬೇಕು. ದೇವಿಯೂ ತನ್ನ ಯೌವನ ನಶಿಸದ ಹಾಗೆ ತನ್ನ ಕೋಣ ಪತಿಯ ಜೊತೆಗೇ ಸಹಗಮನವನ್ನು ಮಾಡಿ, ಸತ್ತು ಮತ್ತೆ ಕನ್ನೆಯಾಗಿ ಉದಿಸಿ, ಇನ್ನೊಂದು ಪಟ್ಟದ ಕೋಣನ ಮಹಿಷಿಯಾಗಿ, ಹೊಸ ಬಲಿಷ್ಠ ಸೃಷ್ಟಿಗೆ ಕಾರಣಗಳಾಗುವಳು. ಯುಗಾದಿಯ ಹೊಸವರ್ಷ, ಹೊಸ ಹುಟ್ಟನ್ನು ಪಡೆದ ಮಾರಿಕಾಂಬೆಯ ಕತೆ ಇದನ್ನೇ ಹೇಳುವುದೆಂದು ಊಹಿಸಬಹುದು.

ಫಲಸಮೃದ್ಧಿಯ ಹಾರೈಕೆಯ ಹಿನ್ನೆಲೆಯಲ್ಲಿ ಗ್ರಾಮದೇವತೆ ಅಮ್ಮನಿಗೆ ಮೀಸಲಾದ ಬಂಡಿ ಹಬ್ಬಲ್ಲಿ, ನೇಗಿಲಿನಿಂದ ಉಳುವುದು, ಗದ್ದೆ ಬಿತ್ತುವುದು, ಬೆಳೆ ಸಮೃದ್ಧಿಗಾಗಿ ಗಡಿ ಬಲಿಯನ್ನು ಸಮರ್ಪಿಸುವುದು, ಮಾಸ್ತಿಕೊಂಡಕ್ಕೆ ಬೀಳುವುದು ಈ ಮುಂತಾದ ಆಚರಣಾ ವಿಧಿಗಳನ್ನು ನೋಡಿದರೆ ಅಮ್ಮನ ಆರಾಧನೆ ಹಾಗೂ ಮಾರಿಯಮ್ಮ ಆರಾಧನೆಗಳೆರಡೂ ಸಮ್ಮಿಶ್ರವಾಗಿ ಹೋದುದರ ಗುರುತುಗಳನ್ನು ಕಾಣಬಹುದು. 'ರಾಣಿ ಗೋಲಿ'ನ ಬಳಕೆ, ಚಂಪಾಷಷ್ಟಿಯ ಕಲ್ಲು, ನಾಗರಗುತ್ತಿ ಮುಂತಾದವುಗಳೆಲ್ಲ ಸರ್ಪಾರಾಧನೆಯ ಪಳೆಯುಳಿಕೆಗಳಂತಿವೆ. ಬೇವಿನುಡಿಗೆಯ





ಸೇವೆ, ರಥದ ಮರಕ್ಕೆ ಉಡಿತುಂಬುವುದು ವೃಕ್ಷಾರಾಧನೆಯ ಸಂಕೇತವಾದರೆ, ಭೂಮಿಗೆ ಹೆಪ್ಪುಕೊಡುವುದು ಹುಲುಸು ಗಾವದ ಆಚರಣೆಗಳೆಲ್ಲ ಭೂಮಿತಾಯಿಯ ಆರಾಧನೆಯ ನಿದರ್ಶನಗಳಾಗುತ್ತವೆ. ಶ್ರೀ ಮಾರಿಕಾಂಬೆಯ ಮೂರ್ತಿಯಲ್ಲಿ, ನವರಾತ್ರಿಯ ಉತ್ಸವದಲ್ಲಿ ಶಕ್ತಿಯ ಆರಾಧನೆಯಿದೆ. ಗಾಳಿ ಮಾರಿಯನ್ನು ಗಾಳಿಮಾಸ್ತಿಯೆಂದೂ ಕರೆದು ಮಾರ - ಮಾಸ್ತಿಗಳಲ್ಲಿ ಜಾನಪದರು ಅಭೇದ ಕಲ್ಪಿಸುತ್ತಾರೆ. ಮಾರಿ-ಅಮ್ಮ ಮೃತಾತ್ಮರ ವ್ಯಕ್ತರೂಪ. ಮೃತಾತ್ಮರು ಗಾಳಿ ಸ್ವರೂಪದಲ್ಲಿ ಸಂಚರಿಸುತ್ತಾರೆಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಚಿಂತಿಸಿದರೆ ಮಾರಿ ಉಪಾಸನೆಯಲ್ಲಿ ಭೂತಾರಾಧನೆಯೂ ಸೇರಿ ಹೋಗುತ್ತದೆ. ಹೀಗೆ ಭೂಮಿ, ನಾಗ, ವೃಕ್ಷ, ಮಾಸ್ತಿ, ಸ್ತ್ರೀ ಶಕ್ತಿಗಳಲ್ಲಿ ನೆಲೆಸಿರುವ ಮಾತೃದೇವತೆಯ ಕಲ್ಪನೆಯ ವಿಕಾಸದ ಹಲವು ಮಜಲುಗಳನ್ನು ಮಾರಿಜಾತ್ರೆಯ ಆಚರಣೆಯ ವಿಧಿಯ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ. ಭಾರತೀಯ ಸಂಸ್ಕೃತಿ ಆದಿದ್ರಾವಿಡ, ದ್ರಾವಿಡ ಹಾಗೂ ಆರ್ಯ ಸಂಸ್ಕೃತಿಗಳ ಕಲಸು ಮೇಲೋಗರವಾಗಿರುವುದನ್ನು ಮಾರಿಕಾಂಬೆಯ ಜಾತ್ರೆ ನಿಚ್ಚಳಗೊಳಿಸುತ್ತದೆ ;ಇವೆಲ್ಲವುಗಳ ಸಮನ್ವಯವನ್ನು ಸಾಧಿಸುವುದರಲ್ಲಿಯೇ ಬದುಕಿನ ಹಿರಿಮೆಯಿರುವುದನ್ನು ಬದುಕು ಹದಗೊಂಡು, ಮಾಗಿ, ಸದೃಢವಾಗುವುದನ್ನು ಎತ್ತಿ ತೋರಿಸುತ್ತದೆ. ಬದುಕಿನಲ್ಲಿ ಸಂಘರ್ಷ ಹೋರಾಟಗಳು ಇದ್ದರೂ ಕೊನೆಗೆ ಸಮನ್ವಯ ಯುಕ್ತ ಸಹ ಬಾಳ್ವೆಯೇ ಬದುಕಿಗೆ ತಾರಕವೆನ್ನುವುದನ್ನು ಜಾತ್ರೆಯಲ್ಲಿ ಎಲ್ಲ ವರ್ಗದವರು ಸಹೋದರ ಭಾವದಿಂದ ಬೆರೆತು ಜಾತ್ರೆಯ ಸರ್ವಕಾರ್ಯ ಕಲಾಪಗಳಲ್ಲಿ ತೊಡಗಿಕೊಂಡಿರುವುದನ್ನು ನೋಡಿದರೆ ವಿದಿತವಾಗುತ್ತದೆ.

## ಗ್ರಂಥ ಋಣ :


೧. ಜಾನಪದ ಸಾಹಿತ್ಯದರ್ಶನ ಸಂ. ೮ — ಸಂ. ಡಾ|| ಎಂ.ಎಸ್. ಸುಂಕಾಪುರ

೨. ಕರ್ನಾಟಕ ಜಾತ್ರೆಗಳು — ಸಂ. ಸಿ.ಎಸ್. ಶಿವಕುಮಾರಸ್ವಾಮಿ

೩. ಕಾರವಾರ ಜಿಲ್ಲೆಯ ಜನಪದ ಗೀತೆಗಳು — ಡಾ|| ಎನ್.ಆರ್. ನಾಯಕ

೪. ಕರ್ನಾಟಕದ ಶಕ್ತಿದೇವತೆಗಳು — ಡಾ|| ಎನ್.ಆರ್. ನಾಯಕ

೫. ಜೇಂಗೊಡ — ಡಾ|| ಎನ್.ಆರ್. ನಾಯಕ

೬. ಜಾತ್ರೆಗಳು — ಎಸ್. ಎಸ್. ಹಿರೇಮಠ

೭. ಭಾರತೀಯ ದೇವಾಲಯಗಳ ಜಾನಪದ ಮೂಲ — ಪ್ರೊ. ಕೆ. ಎಸ್. ರಾಮಚಂದ್ರರಾವ್

೮. ಆಸಾದಿಗಳು — ಡಾ|| ಬಸವರಾಜ್ ನೆಲ್ಲಿಸರ

೯. ಗ್ರಾಮದೇವತೆಗಳು — ಡಿ. ಲಿಂಗಯ್ಯ

೧೦. ಶ್ರೀ ಮಾರಿಕಾಂಬಾ — ವಿನಾಯಕ ಮಾಡಗೇರಿ

೧೧. ಜಾನಪದ ಮೈಲಿಕಲ್ಲುಗಳು — ಡಾ|| ತೀ.ನಂ. ಶಂಕರನಾರಾಯಣ

೧೨. ಮಾರಿಕಾಂಬೆ — ಎಸ್.ಸಿಲ್ವಾ ಮತ್ತು ವಿನೀತರು

೧೩. ಮಹಿಳೆ ಬಿಡುಗಡೆಯ ಹಾದಿಯಲ್ಲಿ — ಎನ್. ಗಾಯತ್ರಿ

೧೪. ಶಿರಸಿ ತಾಲೂಕಾ ದರ್ಪಣ — ಸಂ. ಡಾ|| ಎ.ಕೇ. ಶಾಸ್ತ್ರೀ

೧೫. ಕರ್ನಾಟಕದ ಜಾತ್ರೆಗಳು — ಡಾ|| ಹಂಪ ನಾಗರಾಜಯ್ಯ

೧೬. ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ — ಡಾ| ಶಂ.ಬಾ. ಜೋಶಿ.

೧೭. The Folk Origions of Indian Temples : S.K. Ramachandra Rao

೧೮. The Village Gods of South India : Heny Whitehead

೧೯. Shri Marikamba of Sirsi : Gopalkrishna Hegde

೨೦. ಆರಾಧನಾ(ಪತ್ರಿಕೆ) ೧೯೭೪-೭೫.

೨೧. ಜಾನಪದ ಜಗತ್ತು(ಪತ್ರಿಕೆ) ಮಾರಮ್ಮ : ಒಂದು ಅಧ್ಯಯನ, ವಿಶೇಷ ಸಂಚಿಕೆ ಸಂ. ೧೧. ಸಂಚಿಕೆ ೧-೨. ೧೯೯೦.


## ಅನುಬಂಧ

### ಮಾಹಿತಿ ಪೂರೈಸಿದವರು

| | | |
|---|---|---|
| 1. | ಶ್ರೀ ವಿನಾಯಕ ಮಾಡಗೇರಿ. | ಶಿರಸಿ, ಉ.ಕ. |
| 2. | ರಾಮಕೃಷ್ಣ ಬಿಳಗಿಕರ | ಶಿರಸಿ, ಉ.ಕ |
| 3. | ಎಸ್.ಯು. ಪೋತದಾರ | ಶಿರಸಿ, ಉ.ಕ. |
| 4. | ನಾಗಮೂರ್ತಿ ಗೌಡ | ಶಿರಸಿ, ಉ.ಕ |
| 5. | ಅಶೋಕ ಪೂಜಾರ | ಶಿರಸಿ, ಉ.ಕ |
| 6. | ಮಂಜಪ್ಪ ನಾಗಪ್ಪ ಕಟ್ಟೇರ | ಶಿರಸಿ, ಉ.ಕ |
| 7. | ಮಧುಕೇಶ್ವರ ರಾಮಣ್ಣ ಕುರುಬರ್ | ಶಿರಸಿ, ಉ.ಕ |
| 8. | ಮಂಜುನಾಥ ಸದಾಶಿವ ಚಕ್ರಶಾಲಿ | ಶಿರಸಿ, ಉ.ಕ |
| 9. | ಹುಚ್ಚಮ್ಮ ಆಸಾದಿ | ತತ್ತೂರು, ಸೊರಬ, ಶಿವಮೊಗ್ಗ |
| 10 | ವೆಂ.ಶ್ರೀ. ಕಲ್ಲಾಪುರ | ಹಾನಗಲ್ಲು, ಧಾರವಾಡ |